ಕರ್ಮವೀರ

ಹುಬ್ಬಳ್ಳಿ ತಾ. [illegible]

ಸಂಪುಟ ೨೦] [ಸಂಚಿಕೆ ೧೦

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು: ಹ. ರಾ. ಪುರೋಹಿತ]

[ಸಂಸ್ಥಾಪಕರು: ರಂ. ರಾ. ದಿವಾಕರ

- ಬಲ್ಲವರ ನುಡಿಗಳು -

★ ಪ್ರೇಮಾದರ ಗೌರವಗಳಿಂದ ಅರ್ಪಿಸಲ್ಪಟ್ಟಾಗ ಕ್ಷುದ್ರ ವಸ್ತುಗಳೂ ಮಹತಿಯನ್ನೈದುವವು.

—ಜಾನ್ ಲಾಕ್

★ ಪ್ರತಿಭೆಯಿದ್ದರೆ ಉತ್ತಮ. ಅದಿಲ್ಲದಿದ್ದರೂ ಸ್ಪಷ್ಟವಾಗಿ ಅರ್ಥ ಪ್ರತೀತಿಯಾಗುವಂತೆ ಬರೆಯಲೆತ್ನಿಸುವದೇ ಗುರಿಯಾಗಿರಬೇಕು.

—ಆಂಥನಿ ಹೋಪ್

★ ತಾನು ಇಂದು ಸುಖಿಯೋ ದುಃಖಿಯೋ ಎಂದು ಅರಿಯುವದೇ ಕಠಿಣ; ಜೀವನದ ವಿವಿಧ ಅವಸ್ಥೆಗಳಲ್ಲಿಯ ತನ್ನ ಸುಖಾಸುಖಗಳನ್ನು ಅಳೆದು ಹೋಲಿಸುವದಂತೂ ಇನ್ನಷ್ಟು ಕಠಿಣ; ಕ್ಲೇಶದ ಸ್ಪಷ್ಟವಾದ ಅನುಭವ ಮನಸಿಗೆ ಆಗಿಸದಿದ್ದರೆ, ಆಗ ನಾವು ಇದ್ದದ್ದರಲ್ಲಿ ಸುಖಿಗಳೆಂದು ಸಮಾಧಾನಪಡುವದೊಂದೇ ನಮಗಿರುವ ಹಾದಿ.

—ಸಾಮ್ಯುಯೇಲ್ ಬ್ಲಟರ್

★ ನಿತ್ಯರೋಗಿ, ನಿತ್ಯ ಪ್ರವಾಸಿ, ಚಿರಪರಾವಲಂಬಿ, ಚಿರಪರಗೃಹವಾಸಿಯಾದವನು ಬದುಕಿರುವದೇ ಸಾವು, ಸಾಯುವದೇ ವಿಶ್ರಾಂತಿ.

—ಸುಭಾಷಿತ



ತ್ರಿಕೂಟೇಶ್ವರ ಗುಡಿಯ ಗೋಡೆ

ಧಾರವಾಡ ಜಿಲ್ಲೆಯ ಗದುಗಿನ ಪ್ರಸಿದ್ಧ ತ್ರಿಕೂಟೇಶ್ವರ ಸ್ವಾಮಿ ದೇವಾಲಯದ ಒಂದು ಭಾಗದ ಚಿತ್ರ. ಸೂಕ್ಷ್ಮವಾದ ಕೆತ್ತನೆ ಕೆಲಸದ ಒಳ್ಳೆಯ ಮಾದರಿಯಿದು.

ಪಾಶ್ಚಾತ್ಯ ನಾರಿಯರಿಗೆ ಭಾರತೀಯ ಸೀರೆಯ ಮೋಹ —ಪುಟ ೬

ನಮ್ಮ ಆರ್ಥಿಕ ದುರವಸ್ಥೆಯ ಮೂಲವೆಲ್ಲಿ? —ಪುಟ ೫



KARMAVEER- Kannada Illustrated Weekly, HUBLI

ಚಿಕ್ಕ ಕಥೆ

ಮತ್ತೆ ರೇಶನ್ ....?

ಬರೆದವರು :— ಮ. ರಾ. ಹೆಗಡೆ, ಅಜ್ಜಿಬಳ

ಮುಂಚಿನಂತೆ ಆ ದಿನವೂ ಜಮೀನದಾರ ಮಾಬ್ಬಯ್ಯನವರು, ತಮ್ಮ ಮನೆಯ ಜಗಲಿಯ ಮೇಲೆ ಕುಳಿತುಕೊಂಡು ಅಂದಿನ ದಿನಪತ್ರಿಕೆಯನ್ನು ತಮ್ಮ ವಿಶಿಷ್ಟವಾದ ಒಡಕು ಧಾಟಿಯಲ್ಲಿ ದೊಡ್ಡಕ್ಕೆ ಓದತೊಡಗಿದ್ದರು. ಸುತ್ತಲೂ ನಾಲ್ಕು ಜನ ನೆರೆಹೊರೆಯವರು ಕೇಳುತ್ತ ಕುಳಿತಿದ್ದರು. ಅಂದಿನ ಕೆಲಸ ಮುಗಿಸಿ ಬಂದ ಮಾಬ್ಬಯ್ಯನವರ ಮನೆಯ ಕೆಲಸದಾಳು ನಿಂಗನೂ ಅಲ್ಲೇ ಕೆಳ ಜಗಲಿಯ ಮೇಲೆ ಮೂಲೆಯೊಂದರಲ್ಲಿ ಕುಳಿತು ಕಿವಿಗೊಟ್ಟು ಸುದ್ದಿಯನ್ನು ಆಲಿಸುತ್ತಿದ್ದ. ಕವಳ ತಯಾರಿಸಿ ಬಾಯಲ್ಲಿ ತುರುಕುವಷ್ಟರಲ್ಲಿ ಮಾಬ್ಬಯ್ಯನವರು ಓದುತ್ತಿದ್ದ "ಹಿಂದುಸ್ತಾನ ಸರಕಾರದವರು ಪುನಃ ಆಹಾರ ನಿಯಂತ್ರಣವನ್ನು ಮಾಡಬೇಕೆಂಬ ನಿರ್ಧಾರಕ್ಕೆ ಬಂದು, ಅದನ್ನು ಕೂಡಲೇ ಪ್ರಾರಂಭಿಸಲಿರುವರು!" ಎಂಬ ಸುದ್ದಿ ನೇರವಾಗಿ ನಿಂಗನ ಕಿವಿಯ ಮೇಲೆ ಅಪ್ಪಳಿಸಿತು. ನಿಂಗ ಅವಾಕ್ಕಾದ. ಎದೆ ಡವಡವ ಹೊಡೆದುಕೊಂಡಿತು. ಒಮ್ಮೆಲೇ ಕಳೆದ ರೇಶನ್ ಕಾಲದಲ್ಲಿ ತಾನು ಅನುಭವಿಸಿದ ಕಟು ಜೀವನದ ಕಹಿ ನೆನಪಾಯಿತು. ಹೃದಯ ಮಿಡುಕಿತು; ಮನಸ್ಸು ಮಾರ್ದನಿಯಿತು. "ಪುನಃ ಕಂಟ್ರೋಲು...? ರೇಶನ್...!"

ಅಲ್ಲಿ ಇನ್ನೊಂದು ಕ್ಷಣ ಸಹ ನಿಲ್ಲಲಾಗಲಿಲ್ಲ ನಿಂಗನಿಗೆ. ನೆಟ್ಟಗೆ ಗುಡಿಸಲ ಹಾದಿ ಹಿಡಿದು ನಡೆದ. ಗುಡಿಸಲ ಬಾಗಿಲಲ್ಲಿ ತಂದೆಯ ದಾರಿಯನ್ನೇ ಕಾಯುತ್ತ ನಿಂತಿದ್ದ ನಿಂಗನ ಹದಿನೈದು ವರುಷದ ಹಿರಿ ಹುಡುಗಿ, ಮಲ್ಲಿ. ನಿಂಗನ ಬರವನ್ನು ಕಂಡು, "ಅಪ್ಪಾ, ಉಣ್ಣಾಕ ಆಗೈತಿ; ಒಳಗ ಬಾ" ಎಂದೆಂದು ತಾನೂ ಒಳಕ್ಕೆ ಓಡಿದಳು. ಉಳಿದ ಮಕ್ಕಳು ಆಗಲೇ ಊಟ ಮಾಡಿ ಮಲಗಿದ್ದವು.

ರಾತ್ರಿಯ ಊಟ ಮುಗಿಸಿ "ಹೊಸತಲ" ಬಳಿ ಬಂದು ಕಂಬಳಿ ಹಾಸಿಕೊಂಡು ಮಲಗಿದ್ದ ನಿಂಗ. ಬಹಳ ಹೊತ್ತಿನ ವರೆಗೆ ನಿದ್ದೆ ಹತ್ತಲಿಲ್ಲ; ಆ ಕೆಟ್ಟ ಸುದ್ದಿ ಮತ್ತೆ ಮತ್ತೆ ಕಾಡಿತು; ಸಂಗಡ ಅಂದಿನ ಆ ಹೊಟ್ಟೆಯ ಹೋರಾಟದ ದಾರುಣ ಚಿತ್ರವನ್ನು ತಬ್ಬಿಕೊಂಡು ಬಂತು. ಆ ನಟ್ಟಿರುಳಿನ ಕಗ್ಗತ್ತಲಲ್ಲಿ ಕಾಣಿಸಿದ ಕೃತ್ಯ! ಅಂದು ತನಗೂ ಪೋಲೀಸರಿಗೂ ಆದ ಮಾರಾಮಾರಿ! ಪೋಲೀಸರಿಂದಾದ ಪ್ರಾಣಾಂತಿಕ ಪೆಟ್ಟು, ಇದರಿಂದಾಗಿ ತಾನನುಭವಿಸಿದ ಆರು ತಿಂಗಳ ಸಶ್ರಮ ಶಿಕ್ಷೆ ಮುಂತಾದ ಕಹಿ ನೆನಪುಗಳು ತಲೆಯಲ್ಲಿ ಮೂಡಿದವು. ಆಗಿನ ರೇಶನ್ ಕಾಲದಲ್ಲಿಯ ಆ ಕಳ್ಳಪೇಟೆಯ ಕಾಳ ಸರ್ಪಗಳ ಕಾಟ; ಲಂಚಗುಳಿಗಳ ಲಜ್ಜಾಹೀನ ಲಗ್ಗೆ! ಇಂಥ ಹಲವಾರು ಭೀಕರ, ಮರ್ಮ ದೃಶ್ಯಗಳು ಅಂದು ಬೆಳತನಕವೂ ನಿಂಗನ ಕಣ್ಣ ಮುಂದೆ ಒಂದೊಂದಾಗಿ ಕುಣಿದು ಹೋದವು. ನಿಂಗನಿಗೆ, ಹಿಂದಿನ ರೇಶನ್ ಭೂತಕ್ಕೆ ಆಹುತಿಯಾದ ತನ್ನ ಮೊದಲಿನ ಹೆಂಡತಿ 'ಮಾದಿ'ಯ ಮುದ್ದು ಮೋರೆ ಕಾಣಿಸಿಕೊಂಡಿತು; ಕೂಡಲೇ ಇಂದು ಎಂಟು ತಿಂಗಳ ತುಂಬು ಬಸುರಿಯಾದ ನಿಂಗಿಯನ್ನು ನೆನಸಿಕೊಂಡ. ಮೈ ಬೆಚ್ಚರಿಸಿತು, ನೈಸಡುಗಿತು, ಬೆವರಿತು, ಮನ ಮರುಗಿತು; ಹೃದಯ ಮತ್ತೆ ಮರು ಮಾತಾಡಿತು. "ಮತ್ತೆ ರೇಶನ್...! ಕಳ್ಳ ಪೇಟೆ...! ಲಂಚಗುಳಿತನ...! ನಿಂಗಿಯ ಬಾಣಂತನ...! ಈ ಬಡ ಕೂಲೀ ಜೀವನ...!"

× × ×

ನಿಂಗ, ಜಮೀನದಾರ ಮಾಬ್ಬಯ್ಯನವರ ಮನೆಯ ಕೆಲಸದಾಳು. ಈಗ ಹತ್ತು ಹದಿನೈದು ವರ್ಷಗಳಿಂದಲೂ ಅಲ್ಲೇ ಕೆಲಸ ಮಾಡುತ್ತಿದ್ದಾನೆ. ಒಳ್ಳೇ ದೇಹದಾರ್ಢ್ಯವಿದೆ; ಗುಣಾಢ್ಯನೂ ಹೌದು. ಅಂತೆಯೇ ಆ ಊರಲ್ಲಿ ಎಲ್ಲರಿಗೂ ಬೇಕಾದವನಾಗಿ, ಎಲ್ಲರ ಪ್ರೀತಿಗೂ ಪಾತ್ರನಾಗಿದ್ದಾನೆ.

ಬಡತನಕ್ಕೆ ಸಂತತಿ ಹೆಚ್ಚಂತೆ. ನಿಜ! ಅಕ್ಷರಶಃ ಸತ್ಯವಾದ ಮಾತು. ನಿಂಗ ಈಗ ಐದು ಮಕ್ಕಳ ತಂದೆ. ಅಲ್ಲದೆ ಅವನ ಎರಡನೆ ಹೆಂಡತಿ "ನಿಂಗಿ" ಈಗ ತುಂಬು ಗರ್ಭಿಣಿ.

ನಿಂಗ ಮಾಬ್ಬಯ್ಯನವರ ಮನೆಯ ಕೆಲಸಕ್ಕೆ ನಿಂತು ಒಂದು ವರುಷದಲ್ಲಿಯೇ. ಅವನ ಮೊದಲ ಹೆಂಡತಿ ಮಾದಿಯು ಕೈಹಿಡಿದು ಸುದೈವಿಯಾಗಿದ್ದ. ಮಾದಿ ಚಲುವೆಯಾಗಿದ್ದಳು; ದೈಕಟ್ಟು ರೂಪು, ಬಣ್ಣದಲ್ಲೆಲ್ಲ ಮೇಲ್ಜಾತಿಯವರನ್ನು ಮೀರಿಸಿದ್ದಳು. ಮಾದಿಯೆಂದರೆ ನಿಂಗನಿಗೆ ಪ್ರಾಣಕ್ಕಿಂತ ಹೆಚ್ಚಾಗಿತ್ತು. ನಿಂಗ, ನಿತ್ಯವೂ ಬೆಳಿಗ್ಗೆ ಗಂಜಿ ಕುಡಿದು ಮಾಬ್ಬಯ್ಯನವರ ಮನೆಗೆ ಕೆಲಸಕ್ಕೆ ಹೋದವನು ತಿರುಗಿ ಸಂಜೆಗೇ ಮನೆಗೆ ಹಿಂತಿರುಗುತ್ತಿದ್ದ. ಮಾದಿ ಅಷ್ಟು ಹೊತ್ತಿಗೆ ಮನೆಗೆಲಸವನ್ನೆಲ್ಲ ಮುಗಿಸಿ ಮಕ್ಕಳಿಗೆ ಹೊಟ್ಟೆಗೆ ಹಾಕಿ; ಮಲಗಿಸಿ, ಅಡಿಗೆ ಸಿದ್ಧ ಮಾಡಿಟ್ಟು ಗಂಡನ ಬರವನ್ನೇ ನೋಡುತ್ತ ಕುಳಿತುಕೊಳ್ಳುತ್ತಿದ್ದಳು. ನಿಂಗ ಬಂದೊಡನೆ ಇಬ್ಬರೂ ಜೊತೆಯಾಗಿ ಕುಳಿತು ಊಟ ಮುಗಿಸಿ ನಗೆ ಮಾತುಗಳನ್ನಾಡುತ್ತ ಸಂತೋಷದಿಂದ ನಿದ್ದೆ ಹೋಗುತ್ತಿದ್ದರು. ಇದು ಅವರ ನಿತ್ಯದ ವಾಡಿಕೆಯಾಗಿತ್ತು.

ನಿಂಗನ ದುಡಿತ ಅವನ ಕುಟುಂಬಕ್ಕೆ ಯಥೇಚ್ಛವಾಗಿ ಸಾಕಾಗುತ್ತಿದ್ದಿತು! ಹೀಗೆಯೇ ನಾಲ್ಕಾರು ವರುಷಗಳು, ಸಂಸಾರದಲ್ಲಿ ಯಾವ ತೊಂದರೆಯೂ ಇಲ್ಲದೆ ಸಂದವು. ನಿಂಗನ ಬಡ ಜೀವನ ಸುಖರೂಪವಾಗಿ ಸಾಗಿತ್ತು.

ಜೀವನದಲ್ಲಿ ಸುಖಕ್ಕಿಂತ ಕಷ್ಟವೇ ಹೆಚ್ಚು ಪಾಲು ಎಂಬ ಮಾತಿನ ಅನುಭವ ಈ ಬಡ ಕುಟುಂಬಕ್ಕೂ ಆಗದಿರಲಿಲ್ಲ!

ಮುಂದೆ ಒಂದು ವರುಷ ಕಳೆಯುವಷ್ಟರಲ್ಲಿ "ರೇಶನ್ ಕಾಲ" ಕಾಲಿಟ್ಟಿತು. ನಿಂಗನ ಸುಖಜೀವನದಲ್ಲಿ ವಿಷ ಬೆರೆಯಿತು. ಸಾರ್ವತ್ರಿಕ ರೇಶನಿಂಗ ಪ್ರಾರಂಭವಾಯಿತು; ಸರಕಾರ ಎಲ್ಲ ಆಹಾರ - ಧಾನ್ಯಗಳ ಮೇಲೂ ನಿಯಂತ್ರಣ ಹೇರಿತು. ಅಲ್ಲಲ್ಲಿ "ಯೋಗ್ಯ ದರದ ಅಂಗಡಿಗಳು ಬೆಳಕು ಕಂಡವು. ಪೇಟೆಯಲ್ಲಿಯ ಖಾಸಗಿ ಕಿರಾಣಿ ಅಂಗಡಿಗಳೆಲ್ಲ ಮಾಯವಾಗಿ ಕಳ್ಳಅಂಗಡಿಗಳಾಗಿ ರೂಪಾಂತರ ಹೊಂದಿ ನಿಂತವು. ಜನರಿಗೆ ರೇಶನಿಂಗಿನ ಪ್ರಮಾಣದಂತೆ ಒಂದು ತಿಂಗಳಿಗೆಂದು ಕೊಡುತ್ತಿದ್ದ ಆಹಾರ ಧಾನ್ಯ ಹದಿನೈದು ದಿವಸಗಳಿಗೂ ಸರಿಯಾಗಿ ಸಾಕಾಗುತ್ತಿರಲಿಲ್ಲ. ಉಳಿದ ದಿನಗಳಿಗಾಗಿ ಕಳ್ಳಪೇಟೆಗೇ ಕಾಲಿಡಬೇಕಾಗುತ್ತಿತ್ತು. ಅಲ್ಲಿ, ಅವರು ಹೇಳಿದಂತೆ, ಒಂದಕ್ಕೆ ನಾಲ್ಕು ಪಟ್ಟು ಬೆಲೆ ಕೊಟ್ಟು ಧಾನ್ಯವನ್ನು ಕೊಂಡು, ಕದ್ದು ತಂದುಕೊಳ್ಳಬೇಕಾಗಿತ್ತು. ಇದು ಬಡಬಗ್ಗರ ಬಂದು ಹೀರಿ "ಬಂಡವಲಶಾಹಿ"ಗಳಾದ ಶ್ರೀಮಂತ ವರ್ಗಕ್ಕಷ್ಟೆ ಸಾಧ್ಯವಾಗಿತ್ತು; ಹೊರತು ನಿಂಗನಂತಹ ಬಡ ಕೂಲಿ ಜನಗಳಿಗೆಲ್ಲಿ ಸಾಧ್ಯ!

ನಿಂಗನಿಗೂ ಕಡಿಮೆ ಬೀಳುವ ಕಾಳನ್ನು ಕಳ್ಳ ಅಂಗಡಿಯಿಂದಲೇ ತಂದುಕೊಳ್ಳಬೇಕಾಯಿತು. ವರುಷಾರು ತಿಂಗಳು ಹೇಗೆ ಹೇಗೋ ಕಾಲ ಕಳೆದ. ಮೊದಲು ಕೂಡಿಟ್ಟಿದ್ದ ನಾಲ್ಕು ಕಾಸು ಕೂಡ ಕರಗಿ ನೀರಾಯಿತು. ಬರಬರುತ್ತ ಸರಕಾರಕ್ಕೆ ಧಾನ್ಯದ ಕೊರತೆ ಬಹಳವಾಯಿತು. ರೇಶನ್ ಕೊಡುವ ಪ್ರಮಾಣದಲ್ಲಿ ಇನ್ನೂ ಕಡಿಮೆಯಾಯಿತು. ರೇಶನ್ ಬಿಕ್ಕಟ್ಟಿನದಾಯಿತು. ಕಳ್ಳಪೇಟೆಯಲ್ಲಿ ಧಾನ್ಯದ ದರ ಶಿಖರಕ್ಕೇರಿ ನಿಂತಿತು. ಹೀಗಾಗಿ ನಿಂಗನ ದುಡಿತವೆಲ್ಲ ಕಳ್ಳಪೇಟೆಯ ಕಾಮಿಗಳಿಗೇ ನೀಗಿಸಲಾಯಿತು. ಕೊಟ್ಟ ಕಾಳು ಈಗ ಎಂಟು ದಿನಗಳಲ್ಲಿಯೇ ಮುಗಿದುಹೋಗುತ್ತಿತ್ತು. ಉಳಿದೆಲ್ಲ ದಿನಗಳಿಗಾಗಿ ಕಳ್ಳಅಂಗಡಿಯಿಂದ ಕೊಂಡು ಪೂರೈಸುವದು ಅಸಾಧ್ಯವಾಯಿತು. ನಿಂಗನಿಗೆ ಜೀವನಮಾಡುವದು ಕಷ್ಟಸಾಧ್ಯವೆಂದೆನಿಸಿತು. ಕೆಲವು ಕಾಲ ಅರಹೊಟ್ಟೆಯಿಂದು ಜೀವಿಸಿದ್ದೂ ಆಯಿತು. ಅಷ್ಟರಲ್ಲಿಯೇ ಮಾದಿಗೆ ತಿಂಗಳು ತುಂಬಿದ್ದವು. ನಿಂಗನಿಗೆ, ಹೆಂಡತಿಯ ಭವಿಷ್ಯದ ಬಾಣಂತನ ಸಾಗುವದೆಂತು? ಎನ್ನುವ ಸಮಸ್ಯೆ ಬಿಡಿಸಲಾಗದ ಕಗ್ಗಂಟಾಯಿತು. ಹಗಲಿರುಳೂ ಅದೊಂದೇ ಯೋಚನೆ ಅವನ ತಲೆ ತಿನ್ನತೊಡಗಿತು. ಅಂದು ರಾತ್ರಿ ಈ ಚಿಂತೆಯಲ್ಲಿಯೇ ಕತ್ತಲೆ ಕಳೆದು ಬೆಳಕು ಹರಿದಿತ್ತು.

ಮರುದಿನ ನಿಂಗ ವಾಡಿಕೆಯಂತೆ ತನ್ನ ಕೆಲಸ ಮುಗಿಸಿ ಮಾಬ್ಬಯ್ಯನವರ ಮನೆಗೆ ಹೋದವನು ತನ್ನ ಕಷ್ಟ ಕಾರ್ಪಣ್ಯಗಳನ್ನೆಲ್ಲ ಒಡೆಯರ ಮುಂದೆ ತೋಡಿಕೊಂಡ. ಪರಿಣಾಮ, ಕೋಣನ ಕಿವಿಯಲ್ಲಿ ಕಿನ್ನರಿ ಬಾರಿಸಿದಂತಾಯಿತು. ಹಲವಾರು ಸಲ ಅತ್ಯಂತ ದೀನತನದಿಂದ ಅಂಗಲಾಚಿದ ಮೇಲೆ, ಎರಡು ತಿಂಗಳಲ್ಲೇ ತೀರಿಸಬೇಕೆಂಬ ಕರಾರಿನ ಮೇಲೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟರು ಮಾಬ್ಬಯ್ಯನವರು. ನಿಂಗನ ನಿರಾಶಾಮಯ ಜೀವನದಲ್ಲಿ ಆಶೆಯ ಅಲೆಯೊಂದು ತೇಲಿತು. ನಿಂಗ ಉತ್ಸಾಹದಿಂದ ಗುಡಿಸಲಿಗೆ ಧಾವಿಸಿದ. ಅಡಿಗೆ ತಯಾರಾಗಿತ್ತು. ಊಟಕ್ಕೆ ಕುಳಿತಾಗ, ಹೆಂಡತಿಗೆ ಹೇಳಿದ— "ಮಾದಿ, ನಾ ಈಗ ಕಳ್ಳಕ್ಕಿ ತರಾಕ ಶಿರಸಾಪುರಕ್ಕ ಹೋಗ್ತೇನಿ; ನೀ ಚಿಂತಿ ಮಾಡ್ಬೆ, ಮಕ್ಕಳನ್ನ ಕಾಳಜೀಲಿ ನೋಡ್ಕೊಂಡು ಮಲಕ್ಕೊ. ಆಚೀಕೇರಿ ಗುತ್ಯಾಗ ಮಕ್ಕೊಳಾಕ ಬರಾಕ ಹೇಳೇನಿ. ನಾ ನಸ್ಕ ಹರಿಯೋದ್ರೊಳಗ ಬಂದಬಿಡ್ತೇನಿ!" ಹೀಗೆ ಧೈರ್ಯ ಹೇಳಿ ನಿಂಗ ಹೊರಟು ಹೋದ. ಕಳ್ಳಅಂಗಡಿಯಿಂದ ಕಾಳು ತರುವದು ಎಷ್ಟು ಕಷ್ಟವೆಂಬದನ್ನು ಅವರಿವರ ಬಾಯಿಂದ ಆಗಾಗ ಕೇಳಿ ಅರಿತಿದ್ದ ಮಾದಿಗೆ ಸಂಕಟವಾಯಿತು; ದುಃಖ ಒತ್ತರಿಸಿತು. ಕಣ್ಣು ಹನಿಗೈಯುತ್ತಿದ್ದವು. ಬಾಗಿಲ ಬಳಿ ನಿಂತು ನಿಂಗ ಕಾಣದಾಗುವ ವರೆಗೂ ಹನಿಗಣ್ಣಿನಿಂದ ನಿರೀಕ್ಷಿಸಿದಳು.

× × ×

ನಿಂಗ 'ಸೂಡಿ'ಯ ಬೆಳಕಿನಲ್ಲಿ ಎಂಟು ಮೈಲು ಅಂತರದಲ್ಲಿರುವ 'ಶಿರಸಾಪುರ' ಪೇಟೆಗೆ ಹೋದ. ಅದೊಂದು ಸಣ್ಣ ಪೇಟೆ. ಆ ಪೇಟೆಯಲ್ಲಿ, ದಿನಾ ಸಾವಿರಾರು ರೂಪಾಯಿಗಳ ವ್ಯವಹಾರ ನಡೆಯುವ ಒಂದು "ಯೋಗ್ಯ ದರದ ಅಂಗಡಿ." ಆ ಅಂಗಡಿಗೆ ಎರಡು ಬಾಗಿಲುಗಳು. ಹೊರ ಬಾಗಿಲು ಹಗಲಿನಲ್ಲಿ ತೆರೆದಿರುತ್ತಿದ್ದರೆ, ಹಿಂಬಾಗಿಲು ರಾತ್ರಿಯಲ್ಲಿ ತೆರೆದಿರುತಿತ್ತು. ಹಗಲ ವ್ಯಾಪಾರಕ್ಕಿಂತ ಕತ್ತಲೆ ವ್ಯಾಪಾರವೇ ಹೆಚ್ಚು. ಆ "ಯೋಗ್ಯದರದ ಅಂಗಡಿ"ಯಲ್ಲಿ.

ನಿಂಗ ಅಂಗಡಿಯ ಹೊರಬಾಗಿಲಿನಿಂದಲೇ ಒಳಹೊಕ್ಕ. ಎರಡು ತಾಸು ರಾತ್ರಿಯಾಗಿತ್ತು. ಅಂಗಡಿಯ "ಸೆಕ್ರೆಟರಿ" ಬಸಪ್ಪನವರು ಲೆಖ್ಖದ ಪುಸ್ತಕದಲ್ಲಿ ಅಂದಿನ "ಶಿಲ್ಕು" ಕೂಡಿಸುತ್ತಿದ್ದರು. ನಿಂಗ ಮೊದಲೊಮ್ಮೆ "ಅಕ್ಕಿ ಕೊಡಿ" ಎಂದು ಕೇಳಿದಾಗ ಶಿಲ್ಕಿಲ್ಲವೆಂದೇ ಹಾರಿಸಿಬಿಟ್ಟರು. ಬಹಳವಾಗಿ ಹೇಳಿಕೊಂಡಮೇಲೆ, ಹಳೆಯ ಗಿರಾಕಿಯೆಂದೋ ಏನೊ ನಿಂಗನನ್ನು ಒಳಕ್ಕೆ ಕರೆದು, "ಎಷ್ಟು ರೂಪಾಯಿಗಳನ್ನು ತಂದಿದ್ದಿ?" ಎಂದು ವಿಚಾರಿಸಿ, ೨೦ ರೂಪಾಯಿಗಳಿಗೆ ೫ ಪಾಯ್ಲಿ ಅಕ್ಕಿ ಕೊಟ್ಟು ಹಿಂಬಾಲಿನಿಂದ ಕಳಿಸಿದರು.

ನಿಂಗ ಮನೆಗೆ ಹಿಂತಿರುಗಿದ. ರಾತ್ರಿ ಹನ್ನೊಂದಾಗಿತ್ತು. ಕೃಷ್ಣಪಕ್ಷದ ಕತ್ತಲು ಸುತ್ತಲೂ ಕವಿದಿದ್ದಿತು. ದಾರಿಯಲ್ಲಿ ಯಾರ ಸುಳಿವೂ ಇರಲಿಲ್ಲ. ಹಾದಿಯಲ್ಲಿ, ಅಲ್ಲಲ್ಲಿ ನಿಂಗನ ಮನಸ್ಸನ್ನು ಅಂಜಿಕೆ ಅಡ್ಡಗಟ್ಟುತ್ತಲಿತ್ತು. "ಈ ಸುಂಕದ ಕಟ್ಟೆಯೊಂದು ಕಳೆದರೆ, ಮನೆಗೆ ಮುಟ್ಟಿದಂತೆ. ಮನೆಯಲ್ಲಿ ಮಾದಿ ನಿದ್ದೆಮಾಡದೆ ನನ್ನ ಬರವನ್ನೇ ನೋಡುತ್ತ ಕುಳಿತಿದ್ದಾಳೋ ಏನೊ! ತುಂಬು ಬಸುರಿ. ಇನ್ನೇನು ಬಾಣಂತನದ ಹೆದರಿಕೆಯಿಲ್ಲ!" ಎಂದೆಲ್ಲ ಯೋಚಿಸುತ್ತ ನಡೆದಿದ್ದ; ದಾರಿ ಸಾಗಿತ್ತು. ತುಸು ದೂರ ಹೋಗುವಷ್ಟರಲ್ಲಿ ದೂರದಲ್ಲಿ ಬೆಳಕೊಂದು ಮಿಂಚಿನಂತೆ ಚಮಕಿಸಿ ಮಾಯವಾಯಿತು. ನಿಂಗನ ಮೈ ಬೆವರಿತು. ಕ್ಷಣಾರ್ಧದಲ್ಲಿ ಇಬ್ಬರು ಪೋಲೀಸರು ಕಾಣಿಸಿಕೊಂಡರು, ಗುಡುಗು ಧ್ವನಿಯಲ್ಲಿ ಗದ್ದರಿಸಿದರು. ಸಂಗಡ ಒಂದು ಪೆಟ್ಟೂ ಬಿತ್ತು ನಿಂಗನಿಗೆ. ನಿಂಗ ಎಷ್ಟು ದೈನ್ಯದಿಂದ ಬೇಡಿಕೊಂಡರೂ ಆ ಕಗ್ಗಲ್ಲುಗಳು ಕರಗಲಿಲ್ಲ. "ಏನಾದರೂ" ಕೊಡುವದಾದರೆ ಬಿಡುವೆವೆಂದರು. ನಿಂಗನ ಹತ್ತಿರ ಒಂದು ಬಿಡಿಕಾಸೂ ಇರಲಿಲ್ಲ. ನಿಂಗನಿಗೆ ಇನ್ನೊಂದು ಬಿಗಿದರು. ಅವನ

೧೬ನೆಯ ಪುಟಕ್ಕೆ

ಅಯ್ಯೋ!

ಮನೆತನದನಲೊಂದೊಂದು ಸಿಡಿಲಿರುವ
ಮನವುಂಟು !

ಗುಡುಗಿ ನಡುನಡುಗಿಸುವ ನಾಲಗೆಯು
ಉಂಟು !

ಬೆಂಕಿಕಲ್ಲಿನ ಮಳೆಯ ಮರುಕವಿಲ್ಲದೆಸುರಿವ
ಮುಗಿಲುಂಟು, ರಕ್ಕಸರ ತಂಡವುಂಟು !

ದ್ರವ್ಯವಿದ್ದರು ದುಷ್ಟ ದಾರಿದ್ರ್ಯದಾ ನಡತೆ
ಬೂದಿಯನು ತೂರುತಿದೆ ನೀತಿಗೆಡುತ !
ಕಣ್ಗಳಿದ್ದರು ಕುರುಡು, ಬುದ್ಧಿಯಾಯಿತು
ಬರಡು

ಸ್ವಾರ್ಥ ಮಾತ್ಸರ್ಯಗಳು ಮುಖವೆತ್ತುತ.

ಹೊರಮನೆಯ ಎಳೆಹೆಣ್ಣು ಬಂದಿಹುದು
ಸೊಸೆಯಾಗಿ

ಪತಿಯೆ ದೈವವು ಎನುತ ತಲೆವಾಗಿಸಿ
ಮನೆಯ ಜನ ಮುನಿಯುತಿರೆ, ನೆಲವೆದ್ದು
ಬಡಿಯುತಿರೆ

ನೊಂದಿಹಳು ನೆಮ್ಮದಿಯ ತರಲೆಣ್ಣಿಸಿ !

ಅತ್ತೆಯೆಂಬುವಳವಳು ಕತ್ತಿಯೊಲು
ಒದೆಯುವಳು

ಉತ್ತಮರ ಸುಳಿವಿಲ್ಲ ಎತ್ತೆತ್ತಲೂ !
ಗಂಡ ತಿಳಿಯದ ಗುಂಡ, ಮಾವ
ಸಿಡಿಸಿಡಿಯೆನುವ

ಕಣ್ಗೆ ಕತ್ತಲುಬಹುದು ಕತ್ತೆತ್ತಲು.

ಇಂತಿರುವ ಮನೆಯಲ್ಲಿ ಎಂತು
ಬದುಕುವದಿನ್ನು !

ಹಿತ್ತಲದ ಬಾವಿಯೇ ಗತಿಯೆಂದಳು !
ಹಾರಿಕೊಳ್ಳುವ ಮುನ್ನ ಹೀರಿ ಎಳೆದನು
ಹಿರಿಯ—

ಬೆನ್ನ ಮುರಿಬಡಿದಾಗ 'ಹಾ !' ಎಂದಳು

ಬದುಕಿ ಸವೆವುದಕ್ಕಿಂತ ಸಾವೆ ಸಿಹಿಯೆನಿಸಿತು
ಸಾಯಲಿಕು ಸ್ವಾತಂತ್ರ್ಯವಿಲ್ಲ ಇಲ್ಲಿ !

—ಪಿ. ಟಿ. ಕುಲಕರ್ಣಿ

ಯುಗೋಸ್ಲೇವಿಯದ ತ್ರಿಶಂಕುಸ್ವರ್ಗ

ಟಿಟೋರ ಸಾಹೇಬಗಿರಿ—ರಶಿಯದೊಡನೆ ಒಡಕು—ಲಕ್ಷ್ಮೀ ಸಹೋದರಿಯ ಲಾಸ್ಯ—ಕುಶಲ ಕೆಲಸಗಾರರ ಕೊರತೆ—ಒಕ್ಕಲಿಗರ ಅತೃಪ್ತಿ



ಮಾ. ಟಿಟೋ

ಮಾರ್ಶಲ್ ಟಿಟೋ ಸ್ವಪ್ರತಿಭೆಯಿಂದ ತನ್ನ ಸೈನ್ಯಾದಿಬಲಗಳನ್ನು ಹೆಚ್ಚಿಸಿಕೊಂಡು ಸ್ವತಂತ್ರ ವೃತ್ತಿಯಿಂದ ನಡೆದುಕೊಳ್ಳತೊಡಗಿ ರಶಿಯದ ಅಪ್ರೀತಿಯನ್ನು ಗಳಿಸಿದನು; ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಸಂಘದ ಬಹಿಷ್ಕಾರಕ್ಕೆ ಗುರಿಯಾದನು ಆತನು ಉದ್ಯಮೀಕರಣದಿಂದ ತನ್ನ ನಾಡನ್ನು ಏಳಿಗೆಗೆ ಒಯ್ಯಲು ಆ ಪಾಶ್ಚಾತ್ಯ ದೇಶಗಳೊಡನೆ ವ್ಯಾಪಾರ ಸಂಧಾನದಲ್ಲಿ ತೊಡಗಿದರೂ ಪ್ರಜೆಗಳ ದಾರಿದ್ರ್ಯವನ್ನು ಪರಿಹರಿಸಲಾರದೆ ತೂಗುಯ್ಯಾಲೆಯ ಮನಃಸ್ಥಿತಿಯಲ್ಲಿದ್ದಾನೆ. ತನ್ನ ನಾಡು ಕಮ್ಯುನಿಸ್ಟ್ ಪದ್ಧತಿಯದಿದ್ದುದರಿಂದ ಪುನಃ ರಶಿಯದೊಡನೆ ಮೈತ್ರಿಯನ್ನು ಯಾಚಿಸಬೇಕೋ ಇಲ್ಲವೆ ಅದರೊಡನೆ ಸರ್ವಸಂಬಂಧತ್ಯಾಗ ಮಾಡಿ ಸಾಮ್ರಾಜ್ಯವಾದಿಗಳಾದ ಪಾಶ್ಚಾತ್ಯರೊಡನೆ ಗೆಳೆತನ ಬೆಳೆಸಬೇಕೋ ಎಂಬುದನ್ನು ತಿಳಿಯದೆ ಹೆಪ್ಪಳಿಸುತ್ತಿರುವುದು ಅಂತಾರಾಷ್ಟ್ರೀಯ ರಾಜಕಾರಣಿಗಳ ಕುತೂಹಲವನ್ನು ಕೆರಳಿಸಿದೆ, ಇದರ ಪರಿಣಾಮವನ್ನು ತರ್ಕಮಾಡಲು ಅವರನ್ನು ತೊಡಗಿಸಿದೆ.

ಯುರೋಪ್‌ಖಂಡದಲ್ಲಿ ಯುಗೋಸ್ಲೇವಿಯ ಎಂಬೊಂದು ನಾಡುಂಟು. ಅಲ್ಲಿ ಮಾರ್ಶಲ್ ಟಿಟೋ ಎಂಬವನ ಆಳಿಕೆ ನಡೆಯುತ್ತಿದೆ. ಅಲ್ಲಿಯ ಜನರು ಕಮ್ಯುನಿಸ್ಟರೆಂಬ ರಾಜಕೀಯ ಗುಂಪಿಗೆ ಸೇರಿದವರು ಮಾರ್ಶಲ್ ಟಿಟೋ ಎಂದರೆ ಶಿಸ್ತುಗಾರ ಶಿವಪ್ಪನಾಯಕ; ಸಿನೆಮತಾರೆಗಿಂತ ಅವನ ನೇಪಥ್ಯವಿಲಾಸ ಹೆಚ್ಚಿನದು. ಅವನ ಬಂಗಲೆಗಳೆಂದರೆ ಅರಮನೆಗಳು ಅವನು ದೊಡ್ಡರಾಜಕಾರಣ ಪಟುವೂ ಸಾಹಸಿಯೂ ಇದ್ದಾನೆ. ಕೆಲಕಾಲ ಕಮ್ಯುನಿಸ್ಟರ ಬೃಹದ್ಗುರುವಾದ ರಶಿಯದ ಮುತ್ಸದ್ದಿಗಳ ಸಲಹೆಯಂತೆ, ತರಬೇತಿನಂತೆ ಯುಗೋಸ್ಲೇವಿಯದ ಆಡಳಿತೆ ಸಾಗುತ್ತಿತ್ತು. ಆದರೆ ಪ್ರಬಲವಾಗುತ್ತ ಬಂದ ಟಿಟೋ ರಶಿಯನ್ನರ ಅವಲಂಬನವನ್ನು ಕಡಿಮೆ ಮಾಡುತ್ತ ಬಂದು ತಾನೇತಾನಾಗಿ ತನ್ನ ಬೆಂಬಲಿಗರೊಡನೆ ರಾಜ್ಯಭಾರ ಮಾಡತೊಡಗಿದನು.

ಬಹಿಷ್ಕಾರ

ಟಿಟೋ ನಿರಂಕುಶನಾದುದನ್ನು ರಶಿಯ ಸಹಿಸಲಿಲ್ಲ. ಅದು ಇನ್ನಿತರ ಬೆಂಬಲಿಗ ರಾಷ್ಟ್ರಗಳೊಡನೆ ಅಂತಾರಾಷ್ಟ್ರೀಯ ಕಮ್ಯುನಿಷ್ಟ ಸಂಘದಿಂದ ಟಿಟೋ ಮತ್ತು ಅವನ ಬೆಂಬಲಿಗ ಕಮ್ಯುನಿಷ್ಟರನ್ನು ಬಹಿಷ್ಕರಿಸಿತು. ಆದರೂ ಟಿಟೋ ತಲೆಯೆತ್ತಿಕೊಂಡೇ ನಿಂತಿದ್ದಾನೆ. ಅವನೊಡನೆ ರಶಿಯನ್ನರು ಅಧಿಕಾರದಿಂದ ಕಿತ್ತೊಗೆಯಬೇಕೆಂದ ರ‍್ಯಾಂಕೋವಿಕ್, ದಿಲಾಸ್, ಮತ್ತು ಕರದೇಲ್ಜಿ ಎಂಬ ಅಧಿಕಾರಿಗಳೂ ಸ್ವಸ್ಥಾನದಲ್ಲಿ ಉಳಿದುಕೊಂಡಿದ್ದಾರೆ.

ಆಂತರಿಕ ಸ್ಥಿತಿ

ಏನೇ ಆಗಲಿ, ಉದ್ಯಮೀಕರಣವಾಗಲೇಬೇಕು ಎಂಬುದು ಟಿಟೋ ಹಿಡಿದ ಧೋರಣ. ಆದರೆ ಅದಕ್ಕೆ ಅಗತ್ಯವಾದ ಕುಶಲ ಕೆಲಸಗಾರರ ಅಭಾವ ಅಲ್ಲಿ ಹೆಚ್ಚಾಗಿದೆ. ಯುಗೋಸ್ಲೇವಿಯಕ್ಕೆ ಈಗ ಕುಶಲ ಕರ್ಮಕಾರರು, ಎಂಜಿನಿಯರುಗಳು, ಫೋರ್ಮನ್ನರು ಬೇಕಾಗಿದ್ದಾರೆ. ೩೦ ವರ್ಷಗಳಿಂದ ಶಿಕ್ಷಣ ಪಡೆಯುತ್ತಿದ್ದರೂ ಯುಗೋಸ್ಲೇವಿಯದಲ್ಲಿಯ ಕೆಲಸಗಾರರು ಸಾಕಷ್ಟು ಕರ್ಮಕೌಶಲವನ್ನು ಗಳಿಸಲು ಶಕ್ತರಾಗಿಲ್ಲ. ಯುಗೋಸ್ಲೇವಿಯದ ತರುಣರಿಗೆ ನಿಜಶಿಕ್ಷಣಕೊಡದೆ ಸರಕಾರ ಅವರನ್ನು ಸುರಂಗಗಳನ್ನೂ ರೇಲ್ವೇ ರಸ್ತೆಗಳನ್ನೂ ಮಾಡಲು ತೊಡಗಿಸಿದ್ದು ಈಗ ಪರಿಸ್ಥಿತಿಗೆ ಕಾರಣವಾಗಿದೆ. ವಾಹನ ಸೌಕರ್ಯ ನಾಡಿನಲ್ಲಿ ಬೇಕಾದಷ್ಟು ಯೋಗ್ಯ ಸ್ಥಿತಿಯಲ್ಲಿಲ್ಲದುದು ಉದ್ಯಮೀಕರಣಕ್ಕಿರುವ ಮತ್ತೊಂದು ವಿಘ್ನ. ಇದರ ಮೇಲೆ ಯೋಗ್ಯ ಪರಿಮಾಣದಲ್ಲಿ ಅವಶ್ಯಕ ಸಾಮಗ್ರಿಗಳೂ ಸಿಗುತ್ತಿಲ್ಲ.

ಅರೆಹೊಟ್ಟೆ

ನಾಡಿನ ಎಲ್ಲ ಅಂಗಡಿಗಳನ್ನೂ ರಾಷ್ಟ್ರೀಕರಿಸಲಾಗಿದೆಯೆಂದೂ ಆದರಿಂದ ಸಾಮಗ್ರೀ ವಿತರಣ ಅಸ್ತವ್ಯಸ್ತವಾಗಿದೆಯೆಂದೂ ಅಲೆಕ್ಝಾಂಡರ್ ವರ್ತನು ಬರೆಯುತ್ತಾನೆ. ರೈತರು ತಾವು ಬೆಳೆದ ದವಸಧಾನ್ಯಗಳನ್ನು ನೇರವಾಗಿ ಬಳಕೆಗಾರನಿಗೆ ಮಾರಬಾರದೆಂದು ವಿಧಿಸಲಾಗಿರುವುದು ಅದಕ್ಕೆ ಪ್ರಬಲವಾದ ಕಾರಣವೆನ್ನಲಾಗಿದೆ. ಇದರೊಟ್ಟಿಗೆ ರೇಲ್ವೇ ಮತ್ತು ರಸ್ತೆಗಳು ಸರಿಯಾಗಿಲ್ಲದ ತೊಂದರೆ ಬೇರೆ. ಈ ನಾನಾ ಕಾರಣಗಳಿಂದ ಜನರು ಅರೆಹೊಟ್ಟೆ, ಅರೆಬಟ್ಟೆಯಿಂದ ನರಳುವಂತಾಗಿದೆ. ಇಷ್ಟಾದರೂ ಆಹಾರ ಪದಾರ್ಥಗಳನ್ನು ನಿರ್ಯಾತಮಾಡುವುದು ನಡೆದೇ ಇದೆ. ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಸಂಘ ಹಾಕಿದ ಬಹಿಷ್ಕಾರದಿಂದ ವ್ಯಾಪಾರ ವ್ಯವಹಾರಗಳಲ್ಲಿ ಮತ್ತಷ್ಟು ಅಡ್ಡಿಯುಂಟಾಗಿ ಉದ್ಯಮೀಕರಣದ ಗತಿ ಮಂದ ಮಂದವಾಗಿ ಸಾಗಿದೆ. ಆ ಬಗ್ಗೆ ಮಾಡಿದ ಪಂಚವಾರ್ಷಿಕ ಯೋಜನೆ ರಶಿಯವೇನಾದರೂ ಆರ್ಥಿಕ ಬಹಿಷ್ಕಾರ ಹಾಕಿದರೆ ಷಷ್ಠ ಅಥವಾ ಸಪ್ತವಾರ್ಷಿಕ ಯೋಜನೆಯಾದೀತೆಂದು ಕೆಲವರು ಹೇಳಲಾರಂಭಿಸಿದ್ದಾರೆ. ಇದರಿಂದ ಯುರೋಪಿನಲ್ಲೆಲ್ಲ ಯುಗೋಸ್ಲೇವಿಯದಷ್ಟು ಅರೆಹೊಟ್ಟೆಯ ನಾಡು ಇನ್ನೊಂದಿಲ್ಲ ಎಂಬಂತಾಗಿದೆ.

ನೇತಾಡುವ ಸ್ವರ್ಗ

ಒಂದಡೆ ತಾನು ಸ್ವತಂತ್ರ, ಸ್ವಾವಲಂಬಿ ಎಂಬ ಸಂತೋಷವಿದ್ದರೆ, ಇನ್ನೊಂದೆಡೆ ಟಿಟೋ "ಇತೋ ಭ್ರಷ್ಟಸ್ತತೋ ಭ್ರಷ್ಟ" ಎಂಬ ಸ್ಥಿತಿಗೆ ಇಳಿದಿದ್ದಾನೆ. ಇತ್ತ ರಶಿಯದ ಅಪ್ರೀತಿಗೆ ಪಾತ್ರನಾಗಿದ್ದಾನೆ. ಅತ್ತ ಕಮ್ಯುನಿಜವನ್ನು ಬಿಡಲಾರದವನಾದುದರಿಂದ ಪಶ್ಚಿಮದ ರಾಷ್ಟ್ರಗಳೊಡನೆ ಬೇಕಾದಂತೆ ಒಪ್ಪಂದ ಮಾಡಿಕೊಳ್ಳಲಾರದಾಗಿದ್ದಾನೆ. ಆದರೂ ಇದ್ದದ್ದರಲ್ಲಿಯೇ ಧೈರ್ಯಮಾಡಿಕೊಂಡು ಅವನು ಬೇರೆ ದೇಶಗಳೊಡನೆ ವ್ಯಾಪಾರದ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದಾನೆ. ಇತ್ತೀಚೆಗೆ ಭಾರತದೊಡನೆ ಅಂಥ ಒಪ್ಪಂದ ನಡೆಯಿತು ಪಾಶ್ಚಾತ್ಯ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ: ಅದೇ ಸಮಯದಲ್ಲಿ ರಶಿಯಕ್ಕೊ ಒಂದು ಪ್ರತಿನಿಧಿ ಮಂಡಲವನ್ನು ಅಟ್ಟಿ ಪರಿಣಾಮವನ್ನು ಎದುರು ನೋಡುತ್ತಿದ್ದಾನೆ. ಸದ್ಯ: ಅಮೇರಿಕದ ಅಧ್ಯಕ್ಷ ಟ್ರೂಮನ್ನರ ಹೊಸ ಧೋರಣದ ಪ್ರಕಾರ ರಶಿಯದೊಡನೆ ಅದರ ಸೌಹಾರ್ದ ಸಂಬಂಧ ಹೆಚ್ಚಾಯಿತೆಂದರೆ ಟಿಟೋ ಮಹಾಶಯನ ದರ್ಬಾರು ಮುಗಿಯಿತೆಂದೇ ತಿಳಿಯಬೇಕು.

ರಾಜಕೀಯ ಭವಿಷ್ಯ

ರಶಿಯದೊಡನೆ ವಾಣಿಜ್ಯದ ಒಪ್ಪಂದ ಮಾಡಿಕೊಂಡರೆ ಯುಗೋಸ್ಲೇವಿಯಕ್ಕೆ ಹೆಚ್ಚೇನೂ ಲಾಭವಿಲ್ಲವೆಂದು ಕೆಲವರ ಮತ. ಅದು ವಸ್ತುವಿನಿಮಯ ಇಲ್ಲವೆ ಹಣ ಈ ಯೆರಡಲ್ಲದೆ ಉದ್ದರಿಗೆ ಯಾವ ಸಾಮಾನನ್ನೂ ಕೊಡದು ಆದರೆ ರಾಜಕೀಯ ದೃಷ್ಟಿಯಿಂದ ಹಾಗೆ ಒಪ್ಪಂದವಾದರೆ ಯುಗೋಸ್ಲೇವಿಯಕ್ಕೆ ಅಪಾರ ಲಾಭವುಂಟು ರಶಿಯದೊಡನೆ ಸಾಕಷ್ಟು ಸೌಹಾರ್ದವಿಲ್ಲದ ಈ ಕಾಲದಲ್ಲಿ ರಶಿಯ ಅಮೇರಿಕೆಗಳು ಹತ್ತಿರವಾದರೆ ಹೇಗೋ ಹಾಗೇ ರಶಿಯದೊಡನೆ ಸ್ನೇಹ ಬೆಳೆಸ ಹೋದರೂ ಟಿಟೋ ವಿನ ಪ್ರತಿಷ್ಠೆಗೆ ಮತ್ತು ಸ್ಥಾನಕ್ಕೆ ಭಂಗ ಬರುವ ಸಂಭವವಿದೆ. ಪಾಶ್ಚಾತ್ಯರೊಡನೆ ಸಂಪೂರ್ಣ ಆರ್ಥಿಕ ಸಂಬಂಧ ಬೆಳೆಸಿಕೊಂಡರೆ, ರಾಜಕೀಯ ಧೋರಣವನ್ನು ಅವರಿಗೆ ಅನುಕೂಲವಾಗುವಂತೆ ಬದಲಿಸಬೇಕಾಗುವುದು. ಆಗ ಯುಗೋಸ್ಲೇವಿಯದಲ್ಲಿ ಅಮೇರಿಕ ಕೈ ಹಾಕುವುದು. ರಶಿಯಕ್ಕೆ ಸರಿ ಬರದೆ ಅದು ಮತ್ತೇನಾದರೂ ಗದ್ದಲ ಎಬ್ಬಿಸಬಹುದು. ಆದರಿಂದ ರಶಿಯ ಅಮೇರಿಕಗಳ ಪರಸ್ಪರ ಅಪ್ರೀತಿ ಬೆಳೆದು ಜಾಗತಿಕ ಶಾಂತಿ ಭಂಗವಾಗುವಂತೆ ಕಿಡಿಯೇಳ ಬಹುದಾದರೂ ಟಿಟೋವಿನ ಸ್ಥಾನ ಮಾನಗಳು ಮಾತ್ರ ಇನ್ನಷ್ಟು ದೃಢವಾಗುವುವು

— ಅರ್ಜುನ

ದರ್ಬಾನ್ ಅತ್ಯಾಚಾರ

ದರ್ಬಾನಿನಲ್ಲಿ ಹಿಂದೀಯರ ಮೇಲೆ ಆಫ್ರಿಕನ್ನರು ಅತ್ಯಾಚಾರ ನಡೆಸಿದ ಸುದ್ದಿಯ ಬಗ್ಗೆ ಭಾರತದ ಉಪ ಮುಖ್ಯ ಮಂತ್ರಿ ಸರದಾರ ಪಟೇಲರು ಸಂತಾಪ ವ್ಯಕ್ತಮಾಡಿದರು. ದರ್ಬಾನಿನಲ್ಲಿಯ ಆಫ್ರಿಕನ್-ಹಿಂದೀಯರ ಗಲಭೆಗಳ ಸುದ್ದಿಯನ್ನು ಕೇಳಿ ಲಂಡನ್ನಿನಲ್ಲಿಯ ಹಿಂದೀಯರಿಗೆ ಸಿಡಿಲು ಬಡಿದಂತಾಯಿತು ಈ ಗಲಭೆಯಲ್ಲಿ ಸುಮಾರು ೩೦೦ ಜನರು ಮಡಿದರೆಂದು ವರದಿಯಾಗಿದೆ; ೩-೪ ಸಾವಿರ ಜನ ಗಾಯಗೊಂಡರು ಅನೇಕ ಹಿಂದೀ ಗೃಹಗಳು ಧನ ಜನ ಸಹಿತವಾಗಿ ಅಗ್ನಿ ನಾರಾಯಣನಿಗೆ ಆಹುತಿಯಾದವು

ಸುಪ್ರಸಿದ್ಧ ನೀಗ್ರೋ ಕಾರ್ಯಕರ್ತರಾದ ಜಾರ್ಜ್ ಪ್ಯಾಡ್ ಮೋರರು ಈ ಗಲಭೆಗಳಿಗೆ ಸದ್ಯದ ದ. ಆಫ್ರಿಕ ಸರಕಾರದ ಮುಖ್ಯ ಮಂತ್ರಿ ಡಾ. ಮಾಲನ್ನರ ಹಸ್ತಕರೇ ಕಾರಣರೆಂದೂ ನೀಗ್ರೋ ಮತ್ತು ಭಾರತೀಯರು ಒಂದಾದರೆ ಬಿಳಿಯರ ಆಳಿಕೆ ಅಳಿಯಬಹುದೆಂದು ಅವರು ನಾಜಿ ಹಸ್ತಕರಿಂದ ಅಜ್ಞ ಆಫ್ರಿಕನ್ನರನ್ನು ಹಿಂದೀಯರ ಮೇಲೆ ಎತ್ತಿಕಟ್ಟುವ ಕೆಲಸ ಮಾಡಿಸಿದರೆಂದೂ ಹೇಳಿದ್ದಾರೆ.

ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಡಾ. ಎ. ಬಿ. ಜೂಮರು ನಾತಾಳದ ಆಫ್ರಿಕನ್ ಮತ್ತು ಇಂಡಿಯನ್ ಕಾಂಗ್ರೆಸ್ಸಿನ ಬಿನ್ನಹದ ಮೇರೆಗೆ ದಂಗೆಯ ಕಾರಣಗಳನ್ನು ಪರಿಶೀಲಿಸಲು ದರ್ಬಾನಿಗೆ ಹೋದರು.

ಯಃಕಶ್ಚಿತ್ ಆಫ್ರಿಕನ್ ಬಾಲಕನೊಬ್ಬನನ್ನು ಹಿಂದೀ ಅಂಗಡಿಕಾರನೊಬ್ಬನು ಥಳಿಸಿದನೆಂಬ ಕಾರಣದಿಂದ ಹಿಂದೀಯರ ಮೇಲೆ ಮಿತ್ರರಾದ ಆಫ್ರಿಕನ್ನರು ಹರಿಹಾಯುವುದು ಅಸಂಭವ. ಇದರಲ್ಲಿ ಸರಕಾರದ ಗುಪ್ತ ಕೈವಾಡವಿದ್ದೇ ಇದೆ ಎಂದು ಜನರಲ್ ಸ್ಮಟ್ಸರು ಕೂಡ ಅಭಿಪ್ರಾಯ ಪಡುತ್ತಾರೆ

ದಕ್ಷಿಣ ಆಫ್ರಿಕದ ಗವರ್ನರ್ ಜನರಲ್ ಗೈಡಿಯಾನ್ ಬ್ರ್ಯಾಂಡ್ ವಾಜ್ಲರು ದೇಶದ ಯಾವ ಸೈನ್ಯವನ್ನಾದರೂ ದಂಗೆ ನಿಲ್ಲಿಸಲು ಬಳಸಬಹುದೆಂದು ಆಜ್ಞೆಯಿತ್ತಿದ್ದಾರೆ.

ನಗೆಯ ನೊರೆ

ಸಸಿಯದ ಹಳ್ಳಿಯಲ್ಲಿನ ಒರ್ವ ಪ್ರತಿಷ್ಠಿತ ಜಾಗೀರದಾರರು ಎರಡು ವರ್ಷಗಳಿಂದ ಬೀಸಲ್ಲಿ ಕಾಯಿದೆ ಬರುವ ಮುನ್ನ ಗೇಣಿ ವಸೂಲಿಯಲ್ಲಿ ಒಳ್ಳೇ ಕೈ (ಹಾಗೂ ಬಾಯಿ) ಚಳಕ ತೋರಿ ಸ್ಥಾನಿಕ ರೈತ ಸಂಘದವರ ಸಂತಾಪಕ್ಕೆ ಕಾರಣರಾದರು.

ಈ ಸಲ ಬರಬೇಕಾದ ಹುಟ್ಟುವಳಿಯು ಮೂರರಲ್ಲೊಂದು ಪಾಲು ಒತ್ತಟ್ಟಿಗಿರಲಿ, ಒಂದು ಹಿಡಿ ಅಕ್ಕಿಯನ್ನೂ ಕಾಣದಾದರು. ಆದರಿಂದಾಗಿ ತಮ್ಮ ನಿಸ್ಸಹಾಯಕತೆಯು ಅರಿವಾಗಿ, ತಲೆಯಲ್ಲಿಯ ದೊಡ್ಡಸ್ತಿಕೆಯು ಪಿತ್ತವೆಲ್ಲ ಇಳಿದು, ಈ ಒಡೆಯರು "ನಾನೊಬ್ಬ ಬಡಜಮೀನದಾರ—ಬೇಡ್ತೇನೆ: ಹಕ್ಕಿನ ಮೂರರಲ್ಲೊಂದಲ್ಲ, ನಾಲ್ಕರಲ್ಲೊಂದು ಪಾಲನ್ನಾದರೂ ಕೊಡಿ" ಅಂತ ದೈನ್ಯದಿಂದ-ಅದೂ ಚಾವಡಿಯಲ್ಲಿ ಗ್ರಾಮಸ್ಥರೆದುರಿಗೆ-ತಮ್ಮ ರೈತರ ಹತ್ತಿರ ಬೇಡಿಕೊಂಡರಂತೆ!

ಕಾಲಾಯ ತಸ್ಮೈನಮಃ।

× × ×

ಕೆಲ ತಿಂಗಳಹಿಂದೆ ವಿದ್ಯಾಖಾತೆಯ ದೊಡ್ಡಅಧಿಕಾರಿಗಳು ನಮ್ಮ ಜಿಲ್ಹೆಯಲ್ಲಿ ಸಂಚಾರ ಮಾಡಿದ್ದರಷ್ಟೆ; ಅವರ ಜಾಹೀರುಪಡಿಸಿದ ಕಾರ್ಯಕ್ರಮಗಳಲ್ಲಿ ನಮ್ಮೂರೂ ಒಂದಾಗಿತ್ತು. ಆದರೆ ಒಂದಿಲ್ಲೊಂದು ಕಾರಣದಿಂದ, ಅದನ್ನು ರದ್ದುಪಡಿಸಿ ಹಿಂತಿರುಗಬೇಕಾಯಿತಂತೆ ಅವರಿಗೆ?

ದೊಡ್ಡ ಸಾಹೇಬರು ಬರುವರು, ಅವರೆದುರು ತಮ್ಮ ದುಃಖವನ್ನೆಲ್ಲ ತೋಡಿಕೊಂಡು ಬೇಡಿಕೆಗಳನ್ನು ಮಂಡಿಸಿ, ಪರಿಹಾರದ ಆಶ್ವಾಸನವನ್ನು ಪಡೆದುಕೊಳ್ಳಲು ಸುಸಂಧಿಯೆಂದು ತಿಳಿದು, ಕಷ್ಟನಷ್ಟಗಳನ್ನು ಸಹಿಸಿ ಇಲ್ಲಿ ನೆರೆದ ಸುತ್ತುಮುತ್ತಲಿನ ಯಾವತ್ತೂ ಪ್ರಾಥಮಿಕ ಶಿಕ್ಷಕ-ಶಿಕ್ಷಿಕೆಯರಿಗೆ ತೀವ್ರ-ಅಲ್ಲ, ಘೋರ ನಿರಾಶೆಯಾಯಿತಂತೆ.

ಧೈರ್ಯ ತಾಳಿ, ಮಿತ್ರರೇ, ಧೈರ್ಯ ತಾಳಿ! ಸಾಹೇಬರ ವಿಚಿತ್ರ ವರ್ತನೆಯು ನಿಮ್ಮ ಮೇಲಿನ ಅತೀವ ಕರುಣೆಯ ದ್ಯೋತಕವೇ ಅಲ್ಲದೆ ಮತ್ತೇನೂ ಅಲ್ಲ. ನಿಸ್ಸಂದೇಹವಾಗಿ ಅವರಿಗೆ ನಿಮ್ಮ ದುಃಖವನ್ನು ಕೇಳಲಾಗಲಿಲ್ಲ!

× × ×

"ಏನೋ, ಇತ್ತಿತ್ತ ವೃತ್ತಪತ್ರಗಳಲ್ಲೆಲ್ಲ ಮುದ್ರಾರಾಕ್ಷಸನ ಹಾವಳಿ ಮಿತಿಮೀರಿದೆ!" ಎಂದು ಒಬ್ಬ ಸೇವಾನಿವೃತ್ತ ವೃತ್ತಪತ್ರ ಭಕ್ತರು ಗೊಣಗುಟ್ಟಿದರು.

ಅದನ್ನು ಕೇಳಿದವರೊಬ್ಬರು ಆವೇಶದಿಂದ ಧ್ವನಿಗೂಡಿಸಿ ತಮಗೆ ಕಂಡು ಬಂದ ಸಂಗತಿಯೊಂದನ್ನು ನಿವೇದಿಸಿದರು: "ಹೌದು, ನಿಜ! ಹೋದ ಯುಗಾದಿಗೆ ನಮ್ಮೂರಲ್ಲಿ ಒಂದು ಸಭೆಯನ್ನು ಜಾಹೀರು ಪಡಿಸಲಿಕ್ಕೆಂದು ಹಸ್ತಪತ್ರಿಕೆಯನ್ನು ತೆಗೆದರು. ಅದರ ಕೈಬರಹವನ್ನು ನಾನೇ ತಯಾರಿಸಿದ್ದು, ಸ್ವತಃ ಅಧ್ಯಕ್ಷರಾಗುವವರಾದ ರಾಮಶೇಷ ಭಟ್ಟರೇ ಅದನ್ನು ಒಪ್ಪಿದ್ದರು. ಕಾಲವಿಲಂಬವನ್ನು ತಪ್ಪಿಸಲೆಂದು ಪ್ರತಿಗಳನ್ನು ಮುದ್ರಣಾಲಯದಿಂದ ನೇರವಾಗಿ ಸಾರ್ವಜನಿಕರಿಗೆ ಹಂಚುವ ವ್ಯವಸ್ಥೆ ಮಾಡಲಾಗಿತ್ತು.

ಹಂಚುವ ಕೆಲಸವು ಮುಗಿಯಿತೋ ಇಲ್ಲವೋ, ಅಷ್ಟರಲ್ಲಿ ಊರಲ್ಲೆಲ್ಲ ಗಲಾಟೆ ಎದ್ದಿತು. ಚೌಕಸಿ ಮಾಡಲಾಗಿ ಪತ್ರಿಕೆಯನ್ನೋರ್ವರು ನನ್ನ ಮೋರೆಗೆ ಎತ್ತಿಹಿಡಿದರು. ನೋಡಿದೆ: '. . . ನಾಮಶೇಷ ಭಟ್ಟರ ಅಧ್ಯಕ್ಷತೆಯಲ್ಲಿ . . . . !'"

ಹೈದರಾಬಾದ ಸಂಸ್ಥಾನದಲ್ಲಿ ಆದ ಆಂದೋಲನ ಮತ್ತು ಪೋಲೀಸ ಕ್ರಮದ ನಂತರ ಆದ ನಿರ್ಗತಿಕರ ಪುನರ್ನಿವೇಶನಕ್ಕಾಗಿ ರಾಯಚೂರ ಜಿಲ್ಹೆಗೆ ೨ ಲಕ್ಷ ರೂಪಾಯಿ ಕಾದಿರಿಸಲಾಗಿದೆ. ಮನೆಮಾರು ಕಳೆದುಕೊಂಡವರು ಪುನರ್ನಿವೇಶನದ ಬಗ್ಗೆ ಕಲೆಕ್ಟರರಿಗೆ ಮತ್ತು ಕಾಂಗ್ರೆಸ ಕಛೇರಿಯವರ ಕಡೆಗೆ ಅರ್ಜಿ ಕಳಿಸಬೇಕೆಂದು ಪ್ರಕಟಿಸಲಾಗಿದೆ.

ಮನೋರೋಗಿಗಳ ಚಿಕಿತ್ಸೆಗೆ ಸರ್ಜನರು ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಆದರೂ ನಿರಾಶ್ರಿತರ ಸಂಖ್ಯೆ ೩೦ಸಾವಿರವಿದೆ; ಸಂತ್ರಸ್ತರ ಸಂಕಟ ಅವರ್ಣನೀಯವಿದೆ.

ಅಡಳಿತದಲ್ಲಿ ಕೈಹಾಕಬೇಡಿರಿ

ಸ್ವಾರ್ಥಿಗಳಾಗಬೇಡಿರಿ

ಕಾಂಗ್ರೆಸ್ಸಿಗರಿಗೆ ರಾಷ್ಟ್ರಪತಿಗಳ ಸೂಚನಾಪತ್ರ

ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಟ್ಟಾಭಿ ಸೀತಾರಾಮಯ್ಯನವರು ಮುಖ್ಯಾಧಿಕಾರಿಗಳಿಗೆ ೧೭ನೇ ತಾರೀಕು ಸೂಚನಾಪತ್ರವೊಂದನ್ನು ಹೊರಡಿಸಿ ಕಾಂಗ್ರೆಸ್ಸಿಗರು ಸಧ್ಯದಲ್ಲಿ ಏನು ಮಾಡಬೇಕೆಂಬುದನ್ನು ಅಪೇಕ್ಷಿಸಿದ್ದಾರೆ. ಅದರ ಮುಖ್ಯಾಂಶವು ಇಂತಿದೆ. ಯಾವ ಕಾಂಗ್ರೆಸ್ಸಿಗನೂ ಅವನು ಪಕ್ಷದಿಂದ ಅಧ್ಯಕ್ಷ ಹೊಂದಿದ ಸಂಸ್ಥೆಗಳ ಸದಸ್ಯರು ನೌಕರಿಗಳಿಗೆ ಹುರಿಯಾಳುಗಳನ್ನು ಸೂಚಿಸುವಲ್ಲಿ, ಆಮದು ನಿರ್ಯಾತ ಅಪ್ಪಣೆ ಪಡೆಯುವಲ್ಲಿ, ತಮಗಾಗಿ ಸಂಪಾದಿಸುವಲ್ಲಿ ಆಸಕ್ತಿ ವಹಿಸಬಾರದು. ನ್ಯಾಯಾಲಯಗಳಲ್ಲಿ ನಡೆದಿರುವ ದಿವಾಣಿ ಮತ್ತು ಫೌಜದಾರಿ ಖಟ್ಲೆಗಳ ವಿಷಯದಲ್ಲಿ ಸಂಬಂಧಿಸಿದ ಪೋಲೀಸ ಇಲ್ಲವೆ ನ್ಯಾಯಖಾತೆಯ ಅಧಿಕಾರಿಗಳನ್ನು ಕಾಣಬಾರದು. ಸಾರಿಗೆಸಮಿತಿ, ಬಳ್ಳಿ ಅಭ್ಯಾಸಮಂಡಳ ಮೊದಲಾದ ಸಂಸ್ಥೆಗಳಲ್ಲಿಯ ತಮ್ಮ ಸ್ಥಾನದ ದುರುಪಯೋಗ ಮಾಡಿ ತಮ್ಮ ಆಪ್ತೇಷ್ಟ ಮಿತ್ರರಿಗೆ ಲಾಭ ಮಾಡಿ ಕೊಡುವ ಪ್ರವೃತ್ತಿಯನ್ನು ಬಿಟ್ಟು ಬಿಡಬೇಕು. ಇದನ್ನು ನಿಲ್ಲಿಸದಿದ್ದರೆ ಇಂಥ ಸಂಸ್ಥೆಗಳಿಗೆ ಕಾಂಗ್ರೆಸ್ಸಿಗರು ಹೋಗಕೂಡದು ಎಂಬ ಆಜ್ಞೆಯನ್ನು ಹೊರಡಿಸಬೇಕಾಗುವದು.

ಕಳ್ಳಪೇಟೆ ಲಂಚಗುಳಿತನ ಮೊದಲಾದ ದುರ್ವ್ಯಾಪಾರಗಳನ್ನೆಲ್ಲ ಕಾಂಗ್ರೆಸ್ಸಿಗರು ಬಯಲಿಗೆಳೆಯಬೇಕು. ಇದು ಸಾಧ್ಯವಾಗಬೇಕಾದರೆ ಕಾಂಗ್ರೆಸ್ಸಿಗರ ಶೀಲ, ಆಚರಣೆ ಮೊದಲು ಶುದ್ಧವಾಗಿರಬೇಕು ಫೌಂಟನ್‌ಪೆನ್ ಮೊದಲು ಮಾಡಿಕೊಂಡು ಮೋಟರ ಕಾರಿನ ಖರೇದಿಯವರೆಗೆ ಕಾಂಗ್ರೆಸ್ಸಿಗರು ಕಳ್ಳಪೇಟೆ ಲಂಚಗುಳಿತನಕ್ಕೆ ಬಲಿಬೀಳುವ ಸಂಭವವುಂಟು. ಇದಕ್ಕೆ ಬೀಳದಂತೆ ಕಾಂಗ್ರೆಸ್ಸಿಗರು ನೋಡಿಕೊಳ್ಳಬೇಕು. ಅಧಿಕಾರಿಗಳ ಮತ್ತು ಮಂತ್ರಿಗಳ ವರ್ಚಸ್ಸಿನ ಲಾಭ ಪಡೆದುಕೊಳ್ಳುವ ಪ್ರವೃತ್ತಿಯನ್ನು ಕಾಂಗ್ರೆಸ್ಸಿಗರು ಬಿಟ್ಟುಕೊಡಬೇಕು, ತಮ್ಮ ತಮ್ಮಲ್ಲಿ ಉಂಟಾದ ಪಕ್ಷಪಂಗಡ ಮತಭೇದಗಳನ್ನು ತೊಡೆದು ಹಾಕಿ ಮೊದಲಿನಂತೆ ಕಾಂಗ್ರೆಸ್ಸಿನಲ್ಲಿ ಐಕ್ಯ ಸಂಘಟನೆಗಳನ್ನು ಹೆಚ್ಚಿಸಬೇಕು. ಜಾತೀಯ ಕೋಮು ಗುಂಪುಗಳಿಗಂತೂ ಕಾಂಗ್ರೆಸ್ಸಿಗರು ಎಂದಿಗೂ ಅವಕಾಶ ಕೊಡಬಾರದು. ಮತಭೇದಗಳನ್ನೆಲ್ಲ ಮುರಿದು ಹಾಕಿ ಸರಕಾರದ ಕಾರ್ಯಕ್ರಮ ಮತ್ತು ಧೋರಣದಲ್ಲಿ ಪೂರ್ಣವಾಗಿ ಸಹಕರಿಸಬೇಕು.

ಬಟ್ಟೆಯ ಸೀದಾವನ್ನು ಒಮ್ಮೆಲೆ ಪಡೆಯಬಹುದು


ಸರಕಾರದ ಸೂಚನೆ

ಪ್ರಾಂತದಲ್ಲಿ ಗ್ರಾಹಕರು ತಮ್ಮ ಬಟ್ಟೆಯ ಇಡೀ ವಾರ್ಷಿಕ ಕೋಟಾವನ್ನು ಒಮ್ಮೆಲೇ ಪಡೆದುಕೊಳ್ಳಬಹುದೆಂದು ಮುಂಬಯಿ ಸರಕಾರವು ಸವಲತ್ತು ಕೊಟ್ಟಿದೆ. ಈ ವರೆಗೆ ತಿಂಗಳಿಗೊಂದರಂತೆ ಎರಡು ಕಂತುಗಳಲ್ಲಿ ಅದನ್ನು ಕೊಳ್ಳಬೇಕಾಗುತ್ತಿತ್ತು. ಈ ಸವಲತ್ತನ್ನು ಪ್ರಾರಂಭಕ್ಕೆ ಎರಡು ತಿಂಗಳು ಮಾತ್ರ ಕೊಡಲಾಗಿದ್ದು ಅದು ಅದಕ್ಕೂ ಮುಂಚಿತವಾಗಿ ಕೂಡ ಹಿಂತೆಗೆದುಕೊಳ್ಳಲ್ಪಡಬಹುದು.

ಪಟ್ಟಣಗಳಲ್ಲಿಯವರು ತಮಗೆ ಕೊಡಲ್ಪಡುವ ೨೦ ಗಜ ಬಟ್ಟೆಯ ಕೋಟಾದಲ್ಲಿ ೧೦ ಗಜದ ವರೆಗೆ ಜನುಗು ಬಟ್ಟೆಯನ್ನು ಉಳಿದದ್ದು ಉದುಟು ಅಥವಾ ಮಧ್ಯಮ ತರಗತಿಯ ಬಟ್ಟೆಯನ್ನು ಕೊಳ್ಳಬಹುದು. ಮತ್ತು ಹಳ್ಳಿಯ ಗ್ರಾಹಕರು ಅನುಕ್ರಮವಾಗಿ ೮ ಮತ್ತು ೭ ಗಜದ ವರೆಗೆ ಜನುಗು ಅಥವಾ ಅತಿ ಜನುಗು ಬಟ್ಟೆಯನ್ನು ಕೊಳ್ಳಬಲ್ಲರು. ಉಳಿದರ್ಧವನ್ನು ಉದುಟು ಅಥವಾ ಮಧ್ಯಮ ತರಗತಿಯ ಬಟ್ಟೆಯನ್ನು ಕೊಳ್ಳಬಲ್ಲರು. ಅವರೆ ಜನುಗು ಅತಿ ಜನುಗು ಬಟ್ಟೆಯನ್ನು ಹಾಗು ಉದುಟು ಮತ್ತು ಮಧ್ಯಮ ತರಗತಿಯ ಬಟ್ಟೆಯನ್ನು ಒಮ್ಮೆಲೆ ಕೊಳ್ಳಬೇಕು. ಕೇವಲ ಉದುಟು ಅಥವಾ ಮಧ್ಯಮ ತರಗತಿಯ ಬಟ್ಟೆಯನ್ನಷ್ಟೇ ಕೊಳ್ಳಲಿಚ್ಛಿಸುವವರು ತಮ್ಮ ಇಡೀ ಕೋಟಾದಲ್ಲಿ (ಅಂದರೆ ಅನುಕ್ರಮವಾಗಿ ೨೦, ೧೮, ೧೫ ಗಜ ಬಟ್ಟೆಯಲ್ಲಿ) ಈ ಬಗೆಯ ಬಟ್ಟೆಯನ್ನು ಕೊಳ್ಳಬಲ್ಲರು.

ವಿಲಿಂಗ್ಡನ್ ಕಾಲೇಜಿನಲ್ಲಿ ಮಾನ್ಯ ದಿವಾಕರರ ಭಾವಚಿತ್ರ

ಶ್ರೀ ಚೆನ್ನಮುಳಗುಂದರ ಹಸ್ತದಿಂದ ಅನಾವರಣ



ಸಾಂಗಲಿಯ ವಿಲಿಂಗ್ಡನ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಹಿಂದುಸ್ಥಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿಗಳಾದ ಮಾನ್ಯ ದಿವಾಕರ ರಂಗರಾಯರ ಭಾವಚಿತ್ರದ ಅನಾವರಣ ಸಮಾರಂಭವು ಸಾಂಗಲಿಯ ಆಡಳಿತಗಾರರಾದ ಶ್ರೀ. ಪಿ. ಜೆ. ಚೆನ್ನಮುಳಗುಂದ ಇವರ ಹಸ್ತದಿಂದ ಜರುಗಿತು. ಶ್ರೀ. ದಿವಾಕರರು ನಿಸ್ಸೀಮ ರಾಜಕಾರಣಿಗಳಲ್ಲದೆ ತತ್ವಜ್ಞಾನಿಗಳೂ ಇರುವರು. ಇಂಥ ಮುಖಂಡರ ಭಾವಚಿತ್ರದ ಅನಾವರಣವನ್ನು ಮಾಡಲು ನನಗೆ ಅತ್ಯಂತ ಸಂತೋಷವೆನಿಸುತ್ತದೆ ಎಂದು ಮುಂತಾಗಿ ಶ್ರೀ ಚೆನ್ನಮುಳಗುಂದರು ಭಾವಚಿತ್ರದ ಅನಾವರಣ ಮಾಡುತ್ತ ಹೇಳಿದರು. ಭಾವಚಿತ್ರವನ್ನು ಶ್ರೀ ಪಿ. ವಿ. ಕಿತ್ತೂರ ಎಂಬ ವಿದ್ಯಾರ್ಥಿಯು ಕಾಣಿಕೆ ಕೊಟ್ಟಿರುವರು.

ಕರ್ನಾಟಕ ಸಂಘದ ಬೆಳ್ಳಿ ಹಬ್ಬ

ಸಾಂಗಲಿಯ ವಿಲಿಂಗಡನ ಕಾಲೇಜಿನ ಕರ್ನಾಟಕ ಸಂಘದ ಬೆಳ್ಳಿ ಹಬ್ಬವು ಶನಿವಾರ ೧೫ ನೇ ತಾರೀಕು ಮಧ್ಯಾನ್ಹ ೨ ಗಂಟೆಗೆ ವಿಜೃಂಭಣೆಯಿಂದ ಸಾಂಗವಾಯಿತು. ಶ್ರೀ. ದಿವಾಕರ ರಂಗರಾಯರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಕಾಲೇಜಿನ ಪ್ರಿನ್ಸಿಪಾಲ ಕೆ.ಜಿ.ಪಂಡಿತರು ಮಂತ್ರಿಗಳನ್ನು ಸ್ವಾಗತಿಸುತ್ತ ಕೇಂದ್ರ ಸರಕಾರದ ಮಂತ್ರಿಗಳು ಈ ಕಾಲೇಜಿಗೆ ಬಂದುದು ತಮ್ಮೆಲ್ಲರ ಭಾಗ್ಯ ಎಂದು ಮುಂತಾಗಿ ಹೇಳಿದರು. ಸಂಘದ ಅಧ್ಯಕ್ಷ ಪ್ರಾ. ರಂ. ಶ್ರೀ. ಮುಗಳಿಯವರು ಮಾನ್ಯ ಅತಿಥಿಗಳ ಪರಿಚಯ ಮಾಡಿ ಕೊಟ್ಟರು. ಅನಂತರ ಶ್ರೀ ದಿವಾಕರರು ಗಾಂಧೀಜಿಯ ಭಾವಚಿತ್ರದ ಅನಾವರಣ ಮಾಡಿ ಇಂಗ್ಲಿಶಿನಲ್ಲಿ ಭಾಷಣ ಮಾಡಿದರು. ಭಾಷಾನ್ವಯ ಪ್ರಾಂತರಚನೆಯ ಪುರಸ್ಕರ್ತರು ತಾನೆಂದು ಹೇಳಿ ಈ ಬೆಳ್ಳಿಹಬ್ಬದಲ್ಲಿ ಕನ್ನಡ ಮರಾಠಿ ವಿದ್ಯಾರ್ಥಿಗಳಲ್ಲಿಯ ಐಕ್ಯವನ್ನು ಪ್ರಶಂಸಿಸಿ ಪ್ರಾಂತೀಕರಣ ಸುಲಭವೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು ಎಂದು ಹೇಳಿದರು. ಬೆಳಗಾವಿ ಮೊದಲಾದ ಕಡೆ ಆಗಾಗ ಏಳುತ್ತಿರುವ ಭಾಷೆಗಳ ತಿಕ್ಕಾಟವೂ ಇದರಿಂದ ಇಲ್ಲದಂತಾಗುವದೆಂದು ಅವರು ಹೇಳಿದರು. ಮಹಾತ್ಮಾ ಗಾಂಧಿಯವರ ಬಗ್ಗೆ ಹೇಳುವಾಗ ಮಂತ್ರಿಗಳ ಕಂಠ ತುಂಬಿ ಬಂದಿತು. ಗಾಂಧೀಜಿಯ ಕಾರ್ಯತತ್ಪರತೆಯನ್ನು ಹೊಗಳಿ ಎಲ್ಲರೂ ಅವರನ್ನು ಅನುಕರಿಸಬೇಕೆಂದು ಬೋಧಿಸಿದರು. ಜಗತ್ತಿನ ತುಂಬೆಲ್ಲ ಮಹಾತ್ಮರ ಅನುಯಾಯಿಗಳಿದ್ದು ಅವರ ಆದರ್ಶವನ್ನು ಮೆಚ್ಚುವವರು ಅನೇಕರು ಇರುವರು. ಇಂಥವರ ಭಾವಚಿತ್ರದ ಅನಾವರಣ ಮಾಡುವಾಗ ಕಂಠ ತುಂಬಿ ಬರುವದು ಸ್ವಾಭಾವಿಕ ಎಂದು ಮುಂತಾಗಿ ಹೇಳಿದರು. ಉಪಾಧ್ಯಕ್ಷ ಶ್ರೀ ದೇಶಪಾಂಡೆಯವರು ಆಭಾರ ಮನ್ನಿಸಿದರು. ಈ ಸಮಾರಂಭಕ್ಕೆ ಸಂಯುಕ್ತ ಕರ್ನಾಟಕದ ಸಂಪಾದಕರಾದ ಶ್ರೀ ಮೋಹರೆ ಹಣಮಂತರಾಯರು ಮತ್ತು ಕರ್ನಾಟಕ ಸಂಘದ ಹಿಂದಿನ ಅಧ್ಯಕ್ಷರಾದ ಶ್ರೀ ಬಿ. ಬಿ. ನಾಯಕರು ಬಂದದ್ದರಿಂದ ವಿಶೇಷ ಕಳೆ ಬಂದಿತ್ತು.

ಶ್ರೀ. ದಿವಾಕರರು ನಗರ ಸಭೆಯ ಪಾಠಶಾಲೆಯನ್ನು ಸಂದರ್ಶಿಸಿ ಸಂಸ್ಥಾನ ಪ್ರಜೆಗಳ ಮುಖಂಡರಾದ ದಿವಂಗತ ಜಿ. ಆರ್. ಅಭ್ಯಂಕರರ ಭಾವಚಿತ್ರದ ಅನಾವರಣ ಮಾಡಿದರು. ಸಾಂಗಲಿ ವಣಿಕ್ ಸಂಘದವರು ಮಾನ್ಯ ಮಂತ್ರಿಗಳನ್ನು ಬರಮಾಡಿಕೊಂಡು ಸತ್ಕರಿಸಿದರು. ಈ ವರೆಗೆ ಆರ್ಥಿಕ ಸ್ವಾತಂತ್ರ್ಯವು ಪರಾವಲಂಬಿಯಾಗಿದ್ದಿತು. ಇನ್ನು ಮುಂದೆ ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕಾಗಿದೆ ಎಂದು ಮಂತ್ರಿಗಳು ಈ ಕಾಲಕ್ಕೆ ಹೇಳಿದರು.

ಸ್ವಿಕತ ಲೋಕ

ತೆಂಗಿನ ಬೆಳೆಯನ್ನು ಇಮ್ಮಡಿಸಬಹುದು!

ಗಿಡಗಳು ಸಾಕಷ್ಟು (ಸುಮಾರು ೨೫ ಫೂಟು) ದೂರ ದೂರ ಇರುವಂಥ ತೆಂಗಿನ ತೋಟಗಳಲ್ಲಿ ಕಾಯಿಪಲ್ಲೆಗಳನ್ನು ಬೆಳೆಯುವುದರಿಂದ ಬೆಳೆಯು ಇಮ್ಮಡಿಯಾಗುತ್ತದೆಂಬುದನ್ನು ಉಪಯೋಗದಿಂದ ಕಂಡುಹಿಡಿದಿದ್ದಾರೆ. ಸರಾಸರಿ ಮಂಕ್ಯಹಿರಿ ಕಾಯಿ ಬರುವ ತೋಟದಲ್ಲಿ ಮಳೆಗಾಲದಲ್ಲಿ ಬೆಂಡೆ, ಬದನೆ, ಮೆಣಸಿನಕಾಯಿ ಮುಂತಾದವುಗಳನ್ನೂ ಬೇಸಿಗೆಯಲ್ಲಿ ಕೊಪ್ಪಲ ಪಲ್ಲೆ, ಕುಂಬಳ, ಸವತೆ ಮುಂತಾದವುಗಳನ್ನೂ ಬೆಳೆಯಿಸಲಾಗಿ ತೆಂಗಿನ ಎಲೆಗಳು ದಟ್ಟವಾಗಿ ಹಸಿರಾಗಹತ್ತಿದವು. ೬ ವರುಷಗಳಲ್ಲಿ ಆ ತೋಟದ ಮರಗಳು ಸರಾಸರಿ ೬೦ ಕಾಯಿ ಬಿಡುವದು ಕಂಡುಬಂದಿತು!

ತೆಂಗಿನ ಬೇರುಗಳು ಬಹಳ ಕೆಳಗೆ ಹೋಗದೆ ಸುತ್ತಲೂ ಹಬ್ಬಿಕೊಂಡಿರುತ್ತವೆ. ಕಾಯಿಪಲ್ಲೆಗಳಿಗಾಗಿ ಆಗಾಗ ಅಗಿಯುವದು, ಗೊಬ್ಬರ–ನೀರು ಹಾಕುವದು ಮುಂತಾದವುಗಳನ್ನು ಮಾಡುವುದರಿಂದ ತೆಂಗಿಗೆ ಹಿತವಾಗುತ್ತದೆ. ಕಾಯಿಪಲ್ಲೆಗಳ ಕುಯ್ಲು ಆದ ನಂತರ ಅವುಗಳ ಅವಶೇಷದಿಂದ ತೆಂಗಿಗೆ ಒಳ್ಳೇ ತಲುವು ಸಿಗುತ್ತದೆ.

ಹೀಗೆ ಒಂದು ಹೆಚ್ಚಿನ ಬೆಳೆ ತೆಗೆದುಕೊಳ್ಳಲು ಬರುವುದರಿಂದಲೂ ಈ ಹೆಚ್ಚಿನ ಬೆಳೆಯಿಂದ ಮುಖ್ಯ ಬೆಳೆಯಾದ ತೆಂಗಿಗೆ ಹೆಚ್ಚಿನ ಹಿತವಾಗುವುದರಿಂದಲೂ ಮನೆಯ ಮುಂದೆ ತೆಂಗಿನ ತೋಟ ಇರುವವರು ದಿನದಲ್ಲಿ ಒಂದೆರಡು ತಾಸು ದುಡಿದು ಒಳ್ಳೇ ಲಾಭ ಪಡೆಯಬಹುದು.

ತೆಂಗಿನ ತೋಟದಲ್ಲಿ ಕಸಿ ಮಾಡಿದ ಮಾವಿನ ಗಿಡ ಹಾಕಬಹುದು

ಕಸಿ ಮಾಡಿದ ಮಾವು ಪೇರಲಗಳನ್ನು ತೆಂಗಿನ ಗಿಡಗಳ ನಡುವಿನ ಸ್ಥಳದಲ್ಲಿ ಬೆಳೆಯಬರುತ್ತದೆ. ಇವುಗಳ ಬೇರು ಕೆಳಗೆ ಇಳಿದು ತೆಂಗಿನ ಬೇರು ಹಾಯದ ತರಗಳಿಂದ ತಮ್ಮ ಆಹಾರವನ್ನ ಪಡೆಯುತ್ತವೆ. ಕಸಿಮಾಡಿದ ಗಿಡಗಳು ಎತ್ತರ ಬೆಳೆಯುವದಿಲ್ಲ. ಹೀಗೆ ಇವು ತೆಂಗಿಗೆ ಸಲ್ಲುವ ಮಣ್ಣು ಬೆಳಕುಗಳಿಗೆ ಅಡ್ಡಿಮಾಡದೆ ಬದಲಾಗಿ ತಮ್ಮ ಎಲೆಗಳಿಂದ ಗೊಬ್ಬರವನ್ನು ಒದಗಿಸಿ ಕೊಡುತ್ತವೆ. ಮಳಲು ಹೆಚ್ಚಾಗಿರುವ ತೆಂಗಿನ ತೋಟಗಳಲ್ಲಿ ಮಾವಿನ ಎಲೆ ಬಿದ್ದರೆ ಆ ಮಣ್ಣು ಒಳ್ಳೇ ಫಲವತ್ತಾಗುತ್ತದೆ.

ನಡುವೆ ಮಾವು ಪೇರಲಗಳ ಸಂಖ್ಯೆಯು ತೆಂಗಿನ ಗಿಡಗಳ ನಡುವಿನ ಸ್ಥಳವನ್ನು ಅವಲಂಬಿಸಿರುತ್ತದೆ. ತೆಂಗಿನ ಗಿಡಗಳು ಒತ್ತೊತ್ತಾಗಿದ್ದರೆ ಅಥವಾ ತೋಟದಲ್ಲಿ ನೀರು ನಿಲ್ಲುತ್ತಿದ್ದರೆ ಮಾವಿನ ಗಿಡ ಹಚ್ಚಬಾರದು. ೪೫ ಫೂಟುಗಳ ಅಂತರದಲ್ಲಿ ಒಂದರಂತೆ, ಒಂದು ಎಕರೆ ತೋಟದಲ್ಲಿ ೧೦–೨೦ ಮಾವಿನ ಗಿಡ ಹಾಕಬಹುದು. — ವಿ. ಜಿ. ಭಟ್ಟ

ಭಾರತದ ಆರ್ಥಿಕ ದುರವಸ್ಥೆಯ ಮೂಲವೇನು ?

ಕುಗ್ಗಿದ ಉತ್ಪಾದನೆ—ಹೆಚ್ಚಿನ ಜನಸಂಖ್ಯೆ: ೧೯೪೩—೪೪ ರ ಸ್ಥಿತಿಗಿಂತ ಎಲ್ಲ ಶಾಖೆಗಳಲ್ಲೂ ಅಧೋಗತಿ

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಿದ್ಧಿಸಿ ಒಂದೂವರೆ ವರ್ಷ ಕಳೆದು ಹೋಯಿತು ಆದರೆ ಜನರ ಜೀವನದಲ್ಲಿ ಈ ಸ್ವಾತಂತ್ರ್ಯದ ಕಳೆ ಇನ್ನೂ ಪ್ರತಿಬಿಂಬಿಸಿಲ್ಲ. ಮನುಷ್ಯ ಎಷ್ಟೆಂದರೂ ಅರ್ಥಜೀವಿಯಾದ ಪ್ರಾಣಿ. ಆದರೆ ಭಾರತದ ಕೋಟಿ ಕೋಟಿಗಳಿಗೆ ಆರ್ಥಿಕ ಸ್ವಾತಂತ್ರ್ಯದ ಪ್ರಭೆ ದೊರಕಿಲ್ಲ ಬದಲಿಗೆ ಪ್ರತಿಯೊಂದು ರಂಗದಲ್ಲಿಯೂ ಕೊಳ್ಳುವ ಕೊಡುವ ಸ್ವಾತಂತ್ರ್ಯಕ್ಕೆ ಹೊಸ ಹೊಸ ಅಡ್ಡಿಗಳು ಬರುತಿವೆ. ಏರಿದ ಬೆಲೆಗಳು, ಲಾಭ ಬಡಕತನ, ಲಂಚ ವಂಚನೆಗಳಿಂದ ಜರ್ಜರಿತವಾದ ಜನಜಂಗುಳಿ ಸ್ವಾತಂತ್ರ್ಯದ ಅಸ್ತಿತ್ವವನ್ನೇ ಕಾಣದಾಗಿದೆ.

ನಿಜವಾಗಿ ನಮ್ಮ ಉಪದ್ರವಗಳಲ್ಲಿ ಹೆಚ್ಚಿನವುಗಳಿಗೆ ಯುದ್ಧವೇ ಮೂಲವಾಯಿತು. ಈ ಮಾತನ್ನು ಅಲ್ಲಗಳೆಯುವ ಸಾಹಸ ಯಾರಿಗೂ ಇರಲಿಕ್ಕಿಲ್ಲ. ಎರಡನೆಯದಾಗಿ ವಿಭಜನೆಯಿಂದ ದೇಶ ಅಸ್ತವ್ಯಸ್ತವಾಯಿತು. ಅತಿಪ್ರಸರಣದ ದುಷ್ಪರಿಣಾಮ ಇಂದಿಗೂ ನಮ್ಮ ಜೀವನದಲ್ಲಿ ವಿಷದಂತೆ ತಾಪ ಎಬ್ಬಿಸುತ್ತಲೆ ಇದೆ ಆದರೆ ಇದಿಷ್ಟೇ ನಮ್ಮ ಕಷ್ಟಗಳಿಗೆ ಕಾರಣವಾಗಿದ್ದರೆ ಯುದ್ಧ ಮುಗಿದು ವರ್ಷ ನಾಲ್ಕು ಕಳೆಯುತ್ತ ಬಂದರೂ ಪರಿಸ್ಥಿತಿ ಏಕೆ ಸುಧಾರಿಸಲೊಲ್ಲದು ? ಇನ್ನೂ ಬೆಲೆಗಳು ಏಕೆ ಏರಬೇಕು? ಇನ್ನೂ ವಸ್ತುಗಳು ಏಕೆ ದುರ್ಲಭವಾಗಿಯೆ ಇರಬೇಕು ?

ಸತ್ಯ ಹೇಳಬೇಕಾದರೆ ಯುದ್ಧದ ಸೆರಗಿಗೇ ಎಲ್ಲ ಹೊಣೆಯನ್ನು ಗಂಟಿಕ್ಕಿ ನಾವು ಆಕಾಶದ ಕಡೆ ನೋಡುತ್ತ ಕುಳಿತರೆ, ನಮ್ಮಂಥ ಶತಮೂರ್ಖರು ನಾವೇ ಆದೇವು. ಇಂದಿನ ಪರಿಸ್ಥಿತಿಯ ಕ್ಲೇಶಚಕ್ರವನ್ನು ತಿರುವಿಬಿಟ್ಟ ಕೀರ್ತಿ ಯುದ್ಧಕ್ಕೇ ಸಲ್ಲಬೇಕಾಗಿದ್ದರೂ ಅದೊಂದೇ ನಮ್ಮ ತೊಂದರೆಗಳಿಗೆ ಮೂಲವೆಂದು ತಿಳಿದುಕೊಂಡು ಪೆಚ್ಚರಾಗದೆ ನಾವು ಸದ್ಯದ ಅವಸ್ಥೆಗೆ ಯಾವ ಯಾವ ಕಾರಣಗಳು ಸಹಾಯಮಾಡಿದವೆಂದು ನೋಡುವದವಶ್ಯ.

ಉತ್ಪಾದನೆ ಇಳಿದಿದೆ

ನಮ್ಮ ಇಂದಿನ ಅವಸ್ಥೆಗೆ ತಿನ್ನುವ ಬಾಯಿಗಳು ಹೆಚ್ಚು, ಹುಟ್ಟುವ ಬೆಳೆ ಕಡಿಮೆ ಇದೇ ಕಾರಣವೆಂದು ಒಂದೇ ಮಾತಿನಲ್ಲಿ ಹೇಳಬಹುದು.

೧೯೩೯ ರಿಂದೀಚೆಗೆ (ಪಾಕಿಸ್ತಾನ ಒಳಗೊಂಡು) ಭಾರತದ ಜನಸಂಖ್ಯೆ ೪||—೫ ಕೋಟಿ ಹೆಚ್ಚಾಗಿರಬಹುದು. ಅರ್ಥಾತ್ ತಿನ್ನುವ ಬಾಯಿಗಳ ಸಂಖ್ಯೆ ನೂರಕ್ಕೆ ೧೦—೧೨ ರಷ್ಟು ಹೆಚ್ಚಾಗಿದೆ.

ಆದರೆ ಹುಟ್ಟುವಳಿ ಎಷ್ಟು ಹೆಚ್ಚಾಗಿದೆ ? ಬಹುಶಃ ನೀವೆಣಿಸುತಿರಬಹುದು, ಅಷ್ಟು ಪ್ರಮಾಣದಿಂದ ಹೆಚ್ಚಾಗಿಲ್ಲ ಎಂದು. ಆದರೆ ಉತ್ಪಾದನೆ ಎಳ್ಳಷ್ಟೂ ಹೆಚ್ಚಾಗದೆ ಕಡಿಮೆಯೆ ಆಗಿದೆಯೆಂದು ಕೇಳಿ ನೀವು ಹೌಹಾರಬಹುದು ಇದು ಸತ್ಯ ಮಾತ್ರವಲ್ಲ, ಕೆಲ ಕೆಲವು ವಿಭಾಗಗಳಲ್ಲಿ ಉತ್ಪಾದನೆ ಅರ್ಧ ಕ್ಕರ್ಧದಷ್ಟು ಇಳಿದುಹೋಗಿದೆ.

ಭಾರತದ ಉತ್ಪಾದನಾ ಪ್ರಮಾಣ ೧೯೪೩—೪೪ ರಲ್ಲಿ ಅತ್ಯಂತ ಉಚ್ಚ್ರಾಯ ಸ್ಥಿತಿಗೇರಿ ಅಂದಿನಿಂದ ಇಳಿಮುಖವಾಗುತ್ತ ಬಂದಿದೆ. ಇನ್ನೂ ಅದರ ಅಧೋಗತಿ ತಿರುಗಿ ಏಳ್ಗೆಯ ಧಾರೆಹಿಡಿದ ಸ್ಪಷ್ಟ ಲಕ್ಷಣಗಳು ಕಾಣಿಸುವದಿಲ್ಲ.

ಕೃಷಿಪ್ರಾಣ ದೇಶ

ದೇಶವನ್ನು ಉದ್ಯಮಗಳ ಆಗರವಾಗಿ ಮಾಡುವ ಆತುರ ನಮ್ಮಲ್ಲಿ ಎಷ್ಟೇ ಇದ್ದರೂ ಸದ್ಯಕ್ಕಂತೂ ಕೃಷಿಯೇ ನಮ್ಮ ಪ್ರಾಣ—ವಾಸ್ತ. ನಮ್ಮ ಅನ್ನ. ಆದುದರಿಂದ ಆ ಕ್ಷೇತ್ರದ ವನ್ನು ಮೊದಲು ಸಂಶೋಧಿಸಿ ಸ್ಥಿತಿಗತಿಯನ್ನು ಪರಿಶೀಲಿಸೋಣ.

“ಹೆಚ್ಚು ಆಹಾರ ಬೆಳೆಯಿರಿ” ಎಂಬ ಪ್ರಚಾರ ಮತ್ತು ಅದರ ಡಂಗುರಗಾರರು ಆಗಾಗ್ಗೆ ತೋರಿಸುವ ಅಂಕೆ ಸಂಖ್ಯೆಗಳ ಮೋಹಜಾಲದಿಂದ ಭ್ರಮಿಸಿ ಈ ದೇಶದಲ್ಲಿ ಇಂದು ಹೆಚ್ಚು ಆಹಾರ ಬೆಳೆಯುತಿದೆಯೆಂದು ಕಲ್ಪಿಸಿಕೊಳ್ಳುವ ಸಂಭವವುಂಟು ಆದರೆ ವಸ್ತುಸ್ಥಿತಿ ವಿಪರೀತವಾಗಿದೆ. ನಿಜ, ಎಷ್ಟೋ ಸಾವಿರ ಎಕರೆ ಪಡಭೂಮಿಗಳು ಕೃಷಿಯೋಗ್ಯವಾಗಿ ಮಾಡಲ್ಪಟ್ಟಿವೆ. ಆದರೆ ಉತ್ಪಾದನೆ ಮಾತ್ರ ಹೆಚ್ಚಿಲ್ಲ.

ಈ ಕೆಳಗಿನ ಅಂಕೆ ಸಂಖ್ಯೆಗಳನ್ನು ನೋಡಿದರೆ ಕಣ್ಮುಂದು ಹರಿದೀತು. ಇಲ್ಲಿ ಕೊಟ್ಟಿರುವ ಅಂಕೆಗಳು ತುಲನಾತ್ಮಕವಾಗಿದ್ದು, ೧೯೩೬—೩೯ ರಿಂದ ೧೯೩೮—೩೯ ರ ಸರಾಸರಿ ಉತ್ಪಾದನೆಯನ್ನು ೧೦೦ ಅಂಕ ಎಂದು ಹಿಡಿದು ಗಣಿಸಲಾಗಿದೆ:

ಕೃಷಿಮೂಲ ಉತ್ಪಾದನೆಯ ವಿವರಗಳು

ವರ್ಷ	ಆಹಾರ ಧಾನ್ಯ	ನಾರು-ಹತ್ತಿ ಇತ್ಯಾದಿ	ಎಣ್ಣೆಕಾಳು	ಕಬ್ಬು	ಚಹಾ-ಕಾಫಿ	ಒಟ್ಟು
೧೯೩೬-೩೯ ರ ಸರಾಸರಿ	೧೦೦	೧೦೦	೧೦೦	೧೦೦	೧೦೦	೧೦೦
೧೯೩೯-೪೦	೯೯	೯೦	೧೦೬	೮೮	೧೦೩	೯೯
೪೦-೪೧	೯೫	೧೧೧	೧೧೧	೧೦೩	೯೮	೯೮
೪೧-೪೨	೯೩	೧೦೫	೯೪	೮೩	೧೧೬	೯೫
೪೨-೪೩	೧೦೩	೭೮	೯೮	೧೦೦	೧೧೭	೧೦೨
೪೩-೪೪	೧೦೭	೮೭	೧೦೪	೧೧೪	೧೨೦	೧೦೬
೪೪-೪೫	೧೦೪	೫೫	೧೩೭	೧೦೬	೧೧೪	೧೦೧
೪೫-೪೬	೯೫	೫೬	೯೭	೧೦೨	೧೪೫	೯೪
೪೬-೪೭	೯೭	೫೩	೧೦೦	೧೧೦	೧೨೦	೯೬
೪೭-೪೮	೯೮	೫೬	೧೦೧	೧೧೮	೧೨೫	೯೭

ಮೇಲಿನ ಪಟ್ಟಿಯಿಂದ ಯಥಾಪ್ರಕಾರ ನಮ್ಮ ಕೃಷಿಮೂಲ ಉತ್ಪಾದನೆಯೂ ೧೯೪೩-೪೪ರಲ್ಲಿ ಪರಮಾವಧಿಯನ್ನು ಮುಟ್ಟಿ ೧೯೪೫—೪೬ ರಲ್ಲಿ ನೀಚಾವಧಿಯನ್ನು ಮುಟ್ಟಿತೆಂದೂ ಆನಂತರ ಅಲ್ಪಸ್ವಲ್ಪ ಪ್ರಗತಿಯಾಗಿದ್ದರೂ ಇನ್ನೂ ಅದು ೧೯೩೬-೩೯ರ ಸರಾಸರಿಯನ್ನು ಮುಟ್ಟಲು ಸಮರ್ಥವಾಗಿಲ್ಲವೆಂದೂ ಸ್ಪಷ್ಟವಾಗುತ್ತದೆ. ಅರ್ಥಾತ್, ಆಹಾರ ಕ್ಷೇತ್ರದಲ್ಲಿ ಕೂಡ ಹೆಚ್ಚು ಬೆಳೆ ಬೆಳೆಯಿರಿ ಎಂಬ ಕೂಗು ಮತ್ತು ಅದಕ್ಕಾಗಿ ಸುರಿದ ೧೬ ಕೋಟಿ ರೂಪಾಯಿ ಮತ್ತು ವೆಚ್ಚ ಮಾಡಿದ ಶ್ರಮ ಫಲಕಾರಿಯಾಗುವ ಬದಲು ಉತ್ಪಾದನೆ ಕುಗ್ಗಿಯೇ ಹೋಗಿದೆಯೆಂದು ಸಿದ್ಧವಾಗುತ್ತದೆ. ಹತ್ತಿ, ಸಣಬು, ರೇಶಿಮೆ ಮತ್ತು ಇತರ ನಾರುಗಳ ಉತ್ಪಾದನೆ ಬಹಳ ಇಳಿದುಹೋಗಿದೆ. ಸೂಕ್ಷ್ಮವಾಗಿ ಅವಲೋಕಿಸಿದರೆ ಯುದ್ಧಾರಂಭದಿಂದೀಚೆಗಿನ ಒಟ್ಟು ಕೃಷಿ ಮೂಲ ಉತ್ಪಾದನೆಯನ್ನು ಕೂಡಿಸಿದರೆ ೧೯೩೬-೩೯ ಸ್ಥಿತಿಗಿಂತ ಇಂದಿನ ಸ್ಥಿತಿ ನೂರಕ್ಕೆ ೧೨ ಅಂಕ ಕೆಳ ತರಗತಿಯದಾಗಿದೆಯೆಂದು ಕಾಣುತ್ತದೆ. ಬರಿ ಆಹಾರವನ್ನೇ ತೆಗೆದುಕೊಂಡರೂ ನಾವು ೧೯೩೯ಕ್ಕಿಂತ ಸೇಕಡಾ ೯ ಅಂಕ ಕೀಳ್ತರಗತಿಯಲ್ಲಿದ್ದೇವೆಂದು ಸಿದ್ಧವಾಗಿದೆ. ಇತ್ತ ಜನಸಂಖ್ಯೆ—ಭರಗಾಲ ಬಂದರೂ — ಕೆಲ ಕೋಟಿ ಮಾನದಿಂದ ಹೆಚ್ಚಿದೆಯೆಂಬುದು ನಿಸ್ಸಂಶಯ. ಇದೆಲ್ಲದರ ಫಲಿತಾಂಶವನ್ನು ನಾವು ನಮ್ಮ ಸೇವಾ ಪ್ರಮಾಣದಲ್ಲಿ, ತಲಾ ರಾಷ್ಟ್ರೀಯ ಉತ್ಪನ್ನದಲ್ಲಿ, ಮತ್ತು ಹೊರಗಿನಿಂದ ತರಿಸಬೇಕಾದ ಆಹಾರದ ರೂಪದಲ್ಲಿ ಅನುಭವಿಸುತ್ತಿದ್ದೇವೆ.

ಕೆಳಗಿನ ಅಂಕೆಗಳು ಈ ಅಂಶವನ್ನು ಸ್ಪಷ್ಟಗೊಳಿಸುತ್ತವೆ.

ಆಹಾರೋತ್ಪಾದನೆ ಮತ್ತು ಸೇವನೆ

ವರ್ಷ	ಉತ್ಪಾದನೆ ಸಾವಿರ ಟನ್	ಆಯಾತ ಸಾವಿರ ಟನ್	ಒಟ್ಟು ಸಾವಿರ ಟನ್	ಜನಸಂಖ್ಯೆ ಲಕ್ಷ	ಪ್ರತಿಯೊಬ್ಬರ ತಲಾ ಆಹಾರ ಸೇವನೆ (ಪೌಂಡಿನಲ್ಲಿ)
೧೯೩೯-೪೦	೪೬೦೮೩	+ ೨೨೨೧	೪೮೩೦೪	೩೧೪೦	೩೦೮
೪೦-೪೧	೪೫೦೫೧	+ ೯೬೩	೪೬೦೧೪	೩೧೮೦	೩೨೬
೪೧-೪೨	೪೩೬೬೫	+ ೪೩೨	೪೪೦೯೭	೩೨೦೦	೩೦೮
೪೨-೪೩	೪೮೦೬೩	– ೨೯೨	೪೭೭೭೦	೩೨೩೦	೩೨೮
೪೩-೪೪	೪೬೬೨೨	+ ೨೯೮	೪೮೯೨೦	೩೨೫೫	೩೨೯
೪೪-೪೫	೪೭೬೩೭	+ ೬೯೩	೪೮೩೩೦	೩೨೭೫	೩೩೦
೪೫-೪೬	೪೩೮೧೪	+ ೯೩೧	೪೪೭೪೫	೩೩೨೦	೩೪೦
೪೬-೪೭	೪೪೯೫೯	+ ೨೬೫೮	೪೭೬೧೮	೩೩೫೫	೩೫೮
೪೭-೪೮	೪೫೬೪೩	+ ೨೪೦೦	೪೮೦೪೩	೩೩೯೦	೩೫೬

೧೯೩೯—೪೦ ರಲ್ಲಿ ನಮ್ಮ ಜನಸಂಖ್ಯೆ ಇನ್ನೂ ೩೧೪೦ ಲಕ್ಷ ಇದ್ದಾಗ ನಮ್ಮಲ್ಲಿದ್ದ ಆಹಾರ ಪೂರೈಕೆಗಿಂತ ಇಂದು ಅದು ೩೩೯೦ ಲಕ್ಷ ಆದಾಗಿನ ಪೂರೈಕೆ ಕಡಿಮೆ ಜನರಿಗೆ ಅನ್ನ ಸಾಲದಿರುವದಾಗಲಿ ಬೆಲೆ ಏರುವದಾಗಲಿ ಧಾನ್ಯಗಳು ವಿರಳವಾಗುವದಾಗಲಿ ಆಶ್ಚರ್ಯವೇ?

ಔದ್ಯೋಗಿಕ ಉತ್ಪಾದನೆ

ಇನ್ನು ಔದ್ಯೋಗಿಕ ಉತ್ಪಾದನೆಯ ಕಡೆಗೆ ದೃಷ್ಟಿ ತಿರುಗಿಸೋಣ. ಇಲ್ಲಿಯೂ ೧೯೪೩-೪೪ನೆ ವರ್ಷವೇ ಎಲ್ಲಕ್ಕಿಂತ ಉತ್ಕರ್ಷ ಕಾಲ. ಆದಾದ ನಂತರ ಒಂದೇ ಸವನೆ ಮತ್ತು ತೀವ್ರವಾಗಿ ಕೆಳಗಳಿಯುತ್ತ ಬಂದಿದೆ. ಒಟ್ಟು ಉತ್ಪಾದನೆಯ ತುಲಾನಾತ್ಮಕ ಅಂಕೆಗಳು ಹೀಗಿವೆ:

[illegible] ಇದಿ ಜನರ ಪ್ರಯತ್ನ [illegible] ಬೇರೆ ರೀತಿ [illegible] ಅದು ಸಕ್ಕರೆಯೊಂದು ಮಾತ್ರ ಇದಕ್ಕೆ ಅಪವಾದ [illegible] ಈಗ ಒಕ್ಕಲಿಗರ ಹೆಚ್ಚು ಬೆಲೆ ಕೇಳಲು ಶಕ್ತಿ [illegible] ಸಾವ್ಯಗಳು ಅಗ್ಗವಾಗಿ ಸಿಗಿದಿರುವದಷ್ಟೇ ಸ್ವತಃ ಮಾಡಿಕೊಳ್ಳುತ್ತಾರೆ. ಔದ್ಯೋಗಿಕ ಉತ್ಪತ್ತಿ ಹೆಚ್ಚಾಗಿದ್ದರೆ ಈ ಸ್ಥಿತಿ ಒದಗುತ್ತಿರಲಿಲ್ಲ.

೧೯೪೪ ನೆ ಇಸವಿಯಲ್ಲಿ ಜವಳಿ ಉದ್ಯೋಗ ಪ್ರೊಂದರಲ್ಲಿ—ನಿಯಂತ್ರಣಗಳನ್ನು ಸಡಿಲಗೊಳಿಸಿದ ಅವಕಾಶದಲ್ಲಿ—ಉತ್ಪಾದನೆ ಹೆಚ್ಚಿದ್ದು ಕಂಡು ಬಂತು. ಆದರೂ ಅದು ೧೯೪೩—೪೪ರ ಮಟ್ಟವನ್ನು ಮುಟ್ಟಲಿಲ್ಲ. ಕಲ್ಲಿದ್ದಲಿಯ ಉತ್ಪಾದನೆ ಮಾತ್ರ ೧೯೪೭—೪೮ರಲ್ಲಿ ಪರಮೋಚ್ಚ ಮಟ್ಟಕ್ಕೇರಿದೆ.

ಈ ಬಗೆಯಾಗಿ ಉತ್ಪಾದನೆ ಇಳಿಮುಖವಾದುದರ ಪರಿಣಾಮ ಜನಜೀವನದ ಮೇಲೆ ಸ್ಪಷ್ಟವಾದ ಮುದ್ರೆಯನ್ನೊತ್ತಿದೆ. ಆಹಾರ ಸೇವನೆಯ ಪ್ರಮಾಣ ಕುಗ್ಗಿದುದನ್ನು ಮೊದಲೇ ಉಲ್ಲೇಖಿಸಲಾಗಿದೆ, ಬಟ್ಟೆಯ ಹಂಚಿಕೆ ೧೯೩೯—೪೦ರಲ್ಲಿ ತಲಾ ೧೬ ವಾರು ಇದ್ದದ್ದು ೧೯೪೭—೪೮ರಲ್ಲಿ ೧೧ ವಾರಿಗೆ ಇಳಿದಿದೆ. ರೂಪಾಯಿಗಳ ಲೆಕ್ಕ ಹಿಡಿದರೆ ಜನರ ಕೈಯಲ್ಲಿ ತುಂಬ ಹಣ ಓಡಾಡುತಿದೆ ಆದರೆ ಎಲ್ಲರಿಗೂ ಅನುಭವದಿಂದ ಗೊತ್ತಿರುವಂತೆ ಅದರ ಬೆಲೆ ಮಾತ್ರ—ಅವುಗಳಿಂದ ಕೊಳ್ಳಬಹುದಾದ ಸಾಮುಗ್ರಿಯ ರೂಪದಲ್ಲಿ—ತೀರ ಇಳಿದು ಹೋಗಿದೆ. ತಲಾ ಉತ್ಪನ್ನ ೧೯೩೯—೪೦ ರಲ್ಲಿ ರೂ. ೬೭ ಇದ್ದುದ್ದು ೧೯೪೭—೪೮ ರಲ್ಲಿ ರೂ. ೧೬೩ಕ್ಕೇರಿದೆ. ಆದರೆ ರೂಪಾಯಿಯ ನಿಜವಾದ ಬೆಲೆ ಹಿಡಿದರೆ, ಈಗ ರಾಷ್ಟ್ರದ ತಲಾ ಉತ್ಪನ್ನ ರೂ. ೬೨ ಮಾತ್ರ ಇದೆ—ಅಂದರೆ ನೂರಕ್ಕೆ ೯ ರಷ್ಟು ಕಡಿಮೆಯಾಗಿದೆ. ಜೇಬು ಝಣ ಝಣ, ಹೊಟ್ಟೆ ಭಣಭಣ!


ಹಿಂದುಸ್ತಾನದಲ್ಲಿ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುವ ವ್ಯವಸ್ಥೆ ಸರ್ವಥಾ ಪರಿಪೂರ್ಣವಾಗಿಲ್ಲ. ಬದಲಿಗೆ ಅದು ದೋಷ ಭೂಯಿಷ್ಠವಾಗಿದೆಯೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಮೇಲೆ ತೋರಿಸಿದ ಅಂಕೆಸಂಖ್ಯೆಗಳಲ್ಲಿ ದ್ಯೋಗಿಕ ಉತ್ಪಾದನೆಗೆ ಸಂಬಂಧಿಸಿದವುಗಳು ಸಾಕಷ್ಟು ಸರಿಯಾಗಿವೆಯೆಂದು ಹೇಳಲಡ್ಡಿಯಿಲ್ಲ. ಆದರೆ. ಕೃಷಿಗೆ ಸಂಬಂಧಿಸಿದ ಅಂಕೆಸಂಖ್ಯೆಗಳು ವಸ್ತುಸ್ಥಿತಿಗೆ ಅಷ್ಟು ಸಮೀಪವಿರಲಿಕ್ಕಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ. ಹೀಗಿದ್ದರೂ ಅವು ವಸ್ತುಸ್ಥಿತಿಯ ಗತಿಧಾರೆಯನ್ನು ಸರಿಯಾಗಿ ತೋರಿಸುತ್ತವೆಯೆಂದು ನಂಬಬಹುದಾಗಿದೆ. ಕೆಲವು ಕಡೆ

ಔದ್ಯೋಗಿಕ ಉತ್ಪಾದನೆ

ವರ್ಷ	ಜವಳಿ	ಸಣಬು	ಉಕ್ಕು	ಕಡ್ಡಿಪೆಟ್ಟಿಗೆ	ಸಿಮೆಂಟ	ಸಕ್ಕರೆ	ಕಲ್ಲಿದ್ದಲಿ	ಒಟ್ಟು ಔದ್ಯೋಗಿಕ ಉತ್ಪಾದನೆ
೧೯೩೮-೩೯	೧೦೦	೧೦೦	೧೦೦	೧೦೦	೧೦೦	೧೦೦	೧೦೦	೧೦೦
೩೯-೪೦	೯೭	೧೧೫	೧೦೮	೯೯	೧೦೩	೧೯೧	೧೦೨	೧೧೦
೪೦-೪೧	೧೦೭	೧೦೦	೧೨೦	೧೦೫	೧೦೩	೧೭೨	೧೦೬	೧೧೪
೪೧-೪೨	೧೨೬	೧೧೫	೧೩೭	೭೫	೧೩೨	೧೧೭	೧೦೨	೧೨೩
೪೨-೪೩	೧೨೯	೧೧೨	೧೩೨	೬೭	೧೩೦	೧೬೦	೧೦೪	೧೨೬
೪೩-೪೪	೧೩೯	೯೬	೧೩೮	೮೨	೧೫೩	೧೬೬	೯೭	೧೨೭
೪೪-೪೫	೧೩೧	೧೦೦	೧೨೨	೭೮	೧೭೧	೧೬೦	೯೪	೧೨೨
೪೫-೪೬	೧೨೨	೧೦೦	೧೩೧	೯೦	೧೨೮	೧೨೫	೧೦೫	೧೨೦
೪೬-೪೭	೧೦೫	೯೪	೧೧೮	೭೨	೧೨೦	೧೧೯	೧೦೬	೧೦೫
೪೭-೪೮	೧೦೫	೯೨	೧೨೨	೮೩	೧೩೭	೧೧೨	೧೦೯	೧೦೬

ಒಟ್ಟಿನ ಮೇಲೆ ಔದ್ಯೋಗಿಕ ಉತ್ಪಾದನೆ ೧೯೩೯ ರ ಮಟ್ಟಕ್ಕಿಂತ ಮೇಲೆಯೆ ಇದ್ದರೂ ೧೯೪೩—೪೪ ರ ಸ್ಥಿತಿಗೆ ಅದು ಇನ್ನೂ ಬಂದಿಲ್ಲ ಹಾಗೆ ಬಂದಿದ್ದರೆ ಇಂದು ಸಿದ್ಧಸಾಮುಗ್ರಿಗಳ ಕೊರತೆ ಇಷ್ಟು ಹೆಚ್ಚಾಗಿರುತಿದ್ದಿಲ್ಲ. ಮತ್ತು ದೇಶದ ಔದ್ಯೋಗಿಕ ಉತ್ಪಾದನೆ ಕೃಷಿಉತ್ಪಾದನೆಗಿಂತ ಬಹಳ ಹೆಚ್ಚು ಇದ್ದರೆ ಕೆಲವೆಡೆ ಕಡಿಮೆಯಾಗಿ [illegible] ಪ್ರೋತದ ಹರಿವು ವಿಶ್ವಾಸಾರ್ಹವಾಗಿ ಇದೆ. ಆದುದರಿಂದ ನಮ್ಮ ಮೇಲೆ ವಿವೇಚಿಸಿದ ವಿಷಯದ ಆಧಾರಕ್ಕೆ ಧಕ್ಕೆ ಬರುವದಿಲ್ಲ.

—ಜನತೆಯ ಪುಟಕ್ಕೆ



ಚಿತ್ರಗಳು:- (ಎಡದಿಂದ ಬಲಕ್ಕೆ) ೧. ಭಾರತದ ಫ್ಯಾಶನ್ನುಗಳ ಒಂದು ಅನುಕರಣ. ೨. ಭಾರತೀಯ ಮಾದರಿಯ ಸೀರೆಯಿಂದ ಮಾಡಿದ ಒಂದು ಸಂಧ್ಯಾವೇಷ. ೩. ಅಮೇರಿಕೆಯ ಪೋಷಾಕಿನಂಗಡಿಯಲ್ಲಿ ಭಾರತೀಯ ಸೀರೆಗಳನ್ನು ಪ್ರದರ್ಶಿಸುವ ವಿಗ್ರಹಗಳು. ೪. ಅಮೇರಿಕೆಯ ಪ್ರಾಚ್ಯವಸ್ತುಶಾಲೆಯೊಂದರಲ್ಲಿರುವ ಭಾರತೀಯ ಮೂರ್ತಿಯನ್ನು ಆಧರಿಸಿ ನಿಂತ ಸುಂದರಿ. ಅವಳು ತೊಟ್ಟ ಉಡಿಗೆಯಲ್ಲೆಲ್ಲ ಆ ಮೂರ್ತಿಯ ಪ್ರತಿಕೃತಿಗಳೇ ಮುದ್ರಿಸಲ್ಪಟ್ಟಿವೆ.

ಪಾಶ್ಚಾತ್ಯ ನಾರಿಯರಿಗೆ ಭಾರತೀಯ ವೇಷದ ಮೋಹ

ಸೀರೆಯ ಪದ್ಧತಿಯ ಅನುಕರಣ— ಭಾರತೀಯ ಕಲಾಭಿಜ್ಞರಿಗೆ ಸುಸಂಧಿ

ಮತ್ತಾವುದರಲ್ಲಲ್ಲದಿದ್ದರೂ ವೇಷಭೂಷಣಗಳಲ್ಲಿ ಭಾರತೀಯ ನಾರಿಯರು ಪಾಶ್ಚಾತ್ಯ ಸುಂದರಿಯರಿಗೆ ಮೇಲ್ಪಂಕ್ತಿಯಾಗಿದ್ದಾರೆಂದು ಹೆಮ್ಮೆ ಪಡಬಹುದು. ಹೆಣ್ಣು ಜಾತಿಯೆ ಅಲಂಕಾರಪ್ರಿಯ ಜಾತಿ. ನೆತ್ತಿಯಿಂದ ಉಂಗುಟದ ವರೆಗೆ ಹಲಬಗೆಯ ಮೋಡಿಗಳಿಂದ ಪುರುಷಮೃಗಗಳ ಮನಸನ್ನು ಅಪಹರಿಸುವ ಹವಣಿಕೆಯಲ್ಲೆ ಸದಾ ಆಸಕ್ತರಾಗಿರುವ ಪಾಶ್ಚಾತ್ಯ ನಾರಿಯರಿಗೆ ತಮ್ಮ ಉಡಿಗೆ ತೊಡಿಗೆಗಳು ಮಾತ್ರ ತೀರ "ಗದ್ಯಗಂಧಿ" ಯೆಂದು ಅನಿಸಿರಬೇಕು. ಭಾರತೀಯರ ಸೀರೆಗಳಿಗಿಂತ ಮಿಗಿಲಾದ ಕಲಾಪೂರ್ಣ ತೊಡಿಗೆ ಬೇರೊಂದಿಲ್ಲೆಂಬ ಮಾತಿಗೆ ಪ್ರಮಾಣ ಬೇಡ. ಪುರುಷರು ಯೌರೋಪ್ಯ ಪೋಷಾಕಿನ ಬೆನ್ನು ಬಿದ್ದಿದ್ದರೂ ಭಾರತದ ಫ್ಯಾಶನ್‌ರಮಣಿಯರು ಕೂಡ ಸೀರೆಗೇ ಅಂಟಿಕೊಂಡಿರುವದು ಇದಕ್ಕೆ ಸಾಕ್ಷಿ.

ಪರಿಕಾರ ಸೌಕರ್ಯವೇನೇ ಇರಲಿ. ಚುಕ್ಕಿ, ಬಣ್ಣ, ಇಸ್ತ್ರಿ ಇವುಗಳಿಗಿಂತ ಮೇಲ್ತರದ ಕಲಾಕೌಶಲದ ಪ್ರದರ್ಶನ ಅವರಲ್ಲಿ ಸಾಧ್ಯವಿಲ್ಲ. ಆದರೆ ಭಾರತೀಯ ಸೀರೆಯಲ್ಲಿ, ಉಡುವಿಕೆಯ ಓರಣ, ಅಂಚು ಬಣ್ಣ ಚಿತ್ರಣಗಳ ಸಾಮರಸ್ಯ ಇವೆಲ್ಲಕ್ಕೂ ಎಡೆಯಿದೆ. ಸೆರಗು ಅಥವಾ ಮೇಲುದವೆಂಬದು ವೈವಿಧ್ಯಗಳ ತೌರುಮನೆ. ವಿವಿಧ ಕಲಾಪಗಳನ್ನು ತೋರಿಸುವ ಸಂಧಿ ಅಲ್ಲಿ ರಮಣಿಗೆ ದೊರೆಯುತ್ತದೆ. ನಿಜವಾಗಿ ಸೆರಗಿನ ಮಾಟದಿಂದಲೆ ಅದನ್ನು ಹೊತ್ತವಳ ರುಚಿಯನ್ನು, ಅವಳ ಚರಿತ್ರವನ್ನು ಕೂಡ, ಸೂಕ್ಷ್ಮವಾದ ದೃಷ್ಟಿ ಅಳೆದು ನೋಡಬಲ್ಲದು. ಸೆರಗನ್ನು ಏರಿಸುವ ರೀತಿಯಲ್ಲೆ ಅವಳು ವಿಲಾಸಪ್ರಿಯಳೊ ವಿರಹಿಣಿಯೋ ವಿಕ್ಷಿಪ್ತಳೋ ಲಜ್ಜಾಶೀಲಳೊ ಎಂದು ನೀವು ಗೊತ್ತು ಹಚ್ಚಬಲ್ಲಿರಿ. ನಿಜವಾಗಿ ಸೀರೆಯ ವೇಷ ಪದ್ಧತಿಯಲ್ಲಿ ಕಾವ್ಯಮಯವಾದ ಸಂಗೀತಮಯವಾದ ಭಂಗಿಯೊಂದು ಅಡಕವಾಗಿದೆ. ಅದೊಂದು ರಾಗಾಲಾಪದಂತೆ ಲಯಬದ್ಧವಾಗಿ ಆರೋಹಣಾವರೋಹಣಗಳನ್ನು ಸುತ್ತಿಬರುತ್ತದೆ- ಹಾರ್ಮೋನಿಯಂ ಸ್ವರಗಳಂತೆ ಹಂತಹಂತವಾಗಿ ಅಲ್ಲ-ಪಿಟೀಲಿನ ಮಿಡಿತದಂತೆ ಅಖಂಡ ಭಂಗಿಯಲ್ಲಿ. . . .

ಭಾರತೀಯ ನಾರೀವಸನಪದ್ಧತಿ ಪಾಶ್ಚಾತ್ಯ ದೇಶಗಳಲ್ಲಿ ಅದರಲ್ಲೂ ಸೌಂದರ್ಯಪಿಪಾಸು ಅಮೇರಿಕೆಯಲ್ಲಿ ಈಗೀಗ ಹೆಚ್ಚು ಹೆಚ್ಚು ಜನಪ್ರಿಯವಾಗುತಿದೆ. ಮೇಲಿನ ಚಿತ್ರಗಳಲ್ಲಿ ಇಂಥ ಕೆಲ ಉದಾಹರಣೆಗಳನ್ನು ಕಾಣಬಹುದು. ಇವುಗಳನ್ನು ಅವರು ಬ್ರಿಟಿಸ್ ಅಮೇರಿಕೆಗಳಲ್ಲಿರುವ ಕೆಲ ಪ್ರದರ್ಶನ ವಸ್ತುಗಳ ಮೇಲ್ಪಂಕ್ತಿಯಿಂದ ರೂಪಿಸಿಕೊಂಡಿದ್ದಾರೆ. ಭಾರತೀಯ ಕಲೆಗೆ ಯಾವಾಗಲೂ ಕುಸುರು ಕೆಲಸದ ಸೂಕ್ಷ್ಮತೆಯ ಮೇಲೆ ಗಮನ ಹೆಚ್ಚು. ಸಂಗೀತದಿಂದ ಹಿಡಿದು ವಾಸ್ತುಶಿಲ್ಪದ ವರೆಗೆ ಎಲ್ಲ ಕಲೆಗಳಲ್ಲಿಯೂ ಇದರ ನಿದರ್ಶನಗಳು ದೊರೆಯುತ್ತವೆ. ನಾರೀವೇಷದಲ್ಲಿ ಇಂಥ ಕುಸುರುಗೆಲಸಕ್ಕೆ ಅವಕಾಶ ಹೆಚ್ಚು. ಈ ದೇಶದ ಉದ್ದಿಮೆದಾರರು ಅದರಲ್ಲಿಯೂ ಜವಳಿ ಚಕ್ರವರ್ತಿಗಳು ಇತ್ತ ಗಮನಿಸಿದರೆ ನಮ್ಮ ರಾಷ್ಟ್ರೀಯ ಅರ್ಥಕ್ಕೂ ಕೀರ್ತಿಗೂ ಸೇರಿಯೆ ಲಾಭವಾಗದಿರದು. ಈ ದೇಶಕ್ಕೆ ಜವಳಿಯ ಕೈಗಾರಿಕೆಯ ಕೌಶಲ ಪರಂಪರಾಗತವಾದುದು ಯಂತ್ರಯುಗದ ಹೊಡೆತಕ್ಕೆ ಅದು ಕುಕ್ಕರಿಸಿ ಒಂದು ಶತಮಾನವೂ ಕಳೆದಿಲ್ಲ. ಆದುದರಿಂದ ಈ ಪರಂಪರೆಯನ್ನು ಪುನರುಜ್ಜೀವಿಸಿದರೆ ಉದ್ಯಮೆಗಾರರಿಗೆ ವಿದೇಶದ ಪೇಟೆಗಳು ತೆರೆಯುವ ಸಂಭವವುಂಟು. ಆದರೆ ದುರ್ದೈವದಿಂದ ಭಾರತೀಯ ಉದ್ದಿಮೆಗಾರರು ಇತ್ತ ಗಮನಿಸುವ ಪ್ರವೃತ್ತಿಯವರಲ್ಲ. ಆದುದರಿಂದ ಪಾಶ್ಚಾತ್ಯರು ಎಲ್ಲೋ ಹಳೆಪ್ರದರ್ಶನ ಮಾದರಿಗಳಿಂದ ಈ ಸೌಂದರ್ಯದ ಮೋಹಿನಿಯನ್ನು ಸವಿದು ಅವುಗಳನ್ನು ತಮಗೆ ಬೇಕಾದಂತೆ ಅಳವಡಿಸಿಕೊಳ್ಳಲು ಮುಂದಾಗಿದ್ದಾರೆ. ಆದರೆ ಅವರಿಗೆ ಈ ವಿಷಯದಲ್ಲಿ ಪೂರ್ವಪರಂಪರೆಯ ರಕ್ತಗತ ಅನುಭವವಿಲ್ಲ. ಪಾಶ್ಚಾತ್ಯ ಉದ್ದಿಮೆಗಾರರಂತೆ ಭಾರತೀಯರೂ ದಿನ ದಿನವೂ ಸುಧಾರಣೆಗಳನ್ನು ಮಾಡಿ ಸೌಂದರ್ಯ ಸೌಕರ್ಯಗಳನ್ನು ಹೆಚ್ಚಿಸಲು ಪ್ರಯತ್ನಿಸಿದರೆ ನಾವು ನಮ್ಮ ಪರಂಪರಾಬಲದಿಂದ ಅವರನ್ನು ಯಾವಾಗಲೂ ಮೀರಿಸಬಹುದು. ಆದರೆ ನಮ್ಮ ಸರಕುಗಳ ರೂಪ, ಓರಣ, ಕಲೆಗಳ ಗರಿಪೂರ್ಣತೆಯ ಕಡೆಗೆ ನಾವು ಲಕ್ಷ್ಯಗೊಡದಿದ್ದರೆ ಜಾಗತಿಕ ಪೇಟೆಯಲ್ಲಿ ನಾವು ಶಾಶ್ವತವಾಗಿ ಹಿಂದುಳಿಯಬೇಕಾಗುವದು.

ಜೋಶಿ ಪ್ರಭಾವ

ವಾಯುಗಳ ಮತ್ತು ಬಾಷ್ಪಗಳ ವಿದ್ಯುದ್ವಾಹಕತೆಯ ಮೇಲೆ ಪ್ರಕಾಶದ ಪ್ರಭಾವವನ್ನು ಕುರಿತು ಬನಾರಸದ ಹಿಂದೂ ವಿಶ್ವವಿದ್ಯಾಲಯದ ಡಾ|| ಎಸ್. ಎಸ್. ಜೋಶಿಯವರು ಕಂಡು ಹಿಡಿದ "ಜೋಶಿ ಪ್ರಭಾವ"ದ ಬಗ್ಗೆ ವೈಜ್ಞಾನಿಕ ಪ್ರಪಂಚದಲ್ಲಿ ವಿಶೇಷ ಆಸ್ಥೆ ತೋರಿಬಂದಿದೆ. ಶ್ರೀ ಜೋಶಿಯವರ ಸಂಶೋಧನದ ಫಲವಾಗಿ ವಾಯುಗಳ(ಗ್ಯಾಸ್)ಸ್ವಭಾವವನ್ನು ಕುರಿತ ಪ್ರಾಚೀನ ಸಿದ್ಧಾಂತಗಳೆಲ್ಲ ತಲೆ ಕೆಳಗಾಗುವ ಪ್ರಸಂಗ ಬಂದಿದೆ. ಭೌತಶಾಸ್ತ್ರ, ಎಂಜಿನಿಯರಿಂಗ್, ಮತ್ತು ಛಾಯಾಚಿತ್ರ ರಸಾಯನಶಾಸ್ತ್ರದ ಮೇಲೆ ವಿಶೇಷ ಪ್ರಭಾವ ಬೀರಬಹುದಾದ ಈ "ಜೋಶೀ ಪ್ರಭಾವ"ದ ಧನ ಮತ್ತು ಋಣ (ಪಾಸಿಟಿವ್ ಮತ್ತು ನೆಗೇಟಿವ್) ಅಂಗಗಳನ್ನು ಕುರಿತು ಈಗಾಗಲೆ ಐದಾರು ಡಾಕ್ಟರೇಟ್ ಮಹಾಪ್ರಬಂಧಗಳು ಮನ್ನಣೆ ಹೊಂದಿವೆ.

ಜೋಶಿ ಪ್ರಭಾವದ ಮುಖ್ಯಾಂಶವಿದು. ಯಾವುದೇ ವಾಯುವನ್ನು ಅಥವಾ ಬಾಷ್ಪ (ವೇಪರ್) ವನ್ನು ಪ್ರಕಾಶಕ್ಕೆ ಗುರಿಪಡಿಸಿದರೆ ಅದರ ವಿದ್ಯುದ್ವಾಹನ ಸಾಮರ್ಥ್ಯ (ಇಲೆಕ್ಟ್ರಿಕ್ ಕಂಡಕ್ಟಿವಿಟಿ) ಹ್ರಾಸ ಹೊಂದುವದು. ಇದು ಅತ್ಯಂತ ಶೀಘ್ರವಾಗಿ ಆಗುವದಲ್ಲದೆ ಪ್ರಕಾಶವನ್ನು ಮುಚ್ಚಿದರೆ ತತ್‌ಕ್ಷಣಾತ್ ವಾಯುವಿನ ಮತ್ತು ಬಾಷ್ಪದ ವಾಹಕತೆ ಪೂರ್ವಾವಸ್ಥೆಗೆ ಮರಳುವದು. ಈ ಸಂಶೋಧನದ ಫಲವಾಗಿ ಪ್ರೊ. ಜೋಶಿಯವರ ಊಹೆಯಂತೆ, ಕ್ಲೋರಿನ್, ಬ್ರೊಮೈಡ್ ಮತ್ತು ಪಾದರಸದ ಬಾಷ್ಪಗಳು ಉತ್ತೇಜಿತವಾದಾಗ ಪ್ರಕಾಶ ಕಿರಣಗಳನ್ನು ಹಾಯಿಸಿದರೆ ಅವುಗಳಿಂದ ಸ್ವಲ್ಪವೂ ವಿದ್ಯುತ್ತು ಪಾರಾಗುವದಿಲ್ಲ, ಅಂದರೆ ಪಾರಿಭಾಷಿಕದಲ್ಲಿ ಅವು ಹದಿನಾರಾಣೆ ವಾಹನ ಸಾಮರ್ಥ್ಯಹೀನವಾಗುತ್ತವೆಯೆಂದು ಪ್ರಯೋಗಸಿದ್ಧವಾಗಿದೆ. ಇದಲ್ಲದೆ ಆರ್ಸನಿಕ, ಗಂಧಕ ಮೊದಲಾದ ಇನ್ನೂ ಅನೇಕ ವಸ್ತುಗಳಲ್ಲಿ ಜೋಶಿ ಪ್ರಭಾವ ಕಂಡುಬಂದಿದೆ.

ಅರ್ಥಗರ್ಭಿತ ಅಂಕೆ ಸಂಖ್ಯೆಗಳು

❋ ೧೯೪೯ರ ಪೂರ್ವಾರ್ಧದಲ್ಲಿ ೨೦ ಲಕ್ಷಟನ್ ಆಹಾರ ಧಾನ್ಯಗಳನ್ನು ಆಯಾತ ಮಾಡುವ ಗುರಿ ಭಾರತ ಸರಕಾರದ್ದು. ೧೯೪೮ ರ ಇಡಿ ವರ್ಷದಲ್ಲಿ ೨೯ ಲಕ್ಷ ಟನ್ ತರಿಸಲಾಗಿತ್ತು. ಈ ವರ್ಷ ಜನೆವರಿ ತಿಂಗಳಲ್ಲಿ ಬರುವ ಗೋದಿ, ಹಿಟ್ಟು ಮತ್ತು ಅಕ್ಕಿ ೪,೩೮,೬೦೦ ಟನ್ ಎಂದು ನಿರೀಕ್ಷಿಸಲಾಗಿದೆ. ಧಾನ್ಯ ಕಳಿಸುವಲ್ಲಿ ಅಗ್ರಪಟ್ಟ ಅಮೇರಿಕೆಗೆ (೧,೭೮,೦೦೦ ಟನ್.. ಜನೆವರಿಯಲ್ಲಿ) ಮುಂದೆ ಆಸ್ಟ್ರೇಲಿಯಾ, ಅರ್ಜೆಂಟೀನಾಗಳು ಬರುತ್ತವೆ.

❋ ಹೈದರಾಬಾದನ್ನೊಳಗೊಂಡು ಭಾರತದಲ್ಲಿರುವ ಸಕ್ಕರೆ ಗಿರಣಿಗಳೆಲ್ಲ ಸೇರಿ ಮೊನ್ನೆ ನವೆಂಬರದಎರಡನೆಪಕ್ಷದಲ್ಲಿ ೧,೮೯,೦೦೦ ಮಣ ಸಕ್ಕರೆಯನ್ನು ಉತ್ಪಾದಿಸಿದವು. ನವೆಂಬರ ಕೊನೆಯಲ್ಲಿ ಗಿರಣಿಗಳಲ್ಲಿದ್ದ ಒಟ್ಟು ಸಕ್ಕರೆ ಸಂಗ್ರಹ ೪೮,೫೭,೦೦೦ ಟನ್.

❋ ದಿನಕ್ಕೆ ೨೦೦೦ ಸೈಕಲ್ಲುಗಳನ್ನು ತಯಾರಿಸುವ ಪರಮಾವಧಿ ಸಾಮರ್ಥ್ಯವುಳ್ಳ ಸೈಕಲ್ ಕಾರಖಾನೆಯೊಂದನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸುವ ಎತ್ತುಗಡೆ ನಡೆದಿದೆಯೆಂದು ಅಧಿಕೃತವಾಗಿ ತಿಳಿದುಬಂದಿದೆ. ಭಾರತದಲ್ಲಿ ಈಗಿರುವ ಎರಡು ಸೈಕಲ್ ಕಾರಖಾನೆಗಳು ೧೯೪೭ ರಲ್ಲಿ ೪೩,೦೦೦ ಸೈಕಲ್ ಮತ್ತು ೧೯೪೮ ರ ಮೊದಲಿನ ೯ ತಿಂಗಳಲ್ಲಿ ೩೬,೦೦೦ ಸೈಕಲ್ ತಯಾರಿಸಿದ್ದವು. ಭಾರತಕ್ಕೆ ವರ್ಷಕ್ಕೆ ೨,೫೦,೦೦೦ ಸೈಕಲ್ ಬೇಕಾಗುವವು.

❋ ಬ್ರಿಟನ್ನಿನಲ್ಲಿ ವಿವಾಹ ವಿಚ್ಛೇದದ ಸಂಖ್ಯೆ ೧೯೪೭ ರಲ್ಲಿ ೧೯೩೭ ರಲ್ಲಿದ್ದುದಕ್ಕಿಂತ ಹತ್ತುಪಟ್ಟು ಹೆಚ್ಚಾಗಿದೆ. ೫೭೫೦ ಅರ್ಜಿಗಳು ೧೯೩೭ ರಲ್ಲಿ ನ್ಯಾಯಸ್ಥಾನಗಳ ಮುಂದೆ ಬಂದಿದ್ದರೆ ೧೯೪೭ ರಲ್ಲಿ ೫೩,೩೨೮ ಬಂದವು. ಈ ಅರ್ಜಿಗಳ ಗಡಣವನ್ನು ನೋಡಿ ಒಬ್ಬ ನ್ಯಾಯಾಧೀಶ ವಕ್ರವಾಗಿ ಹೇಳಿದ.. "ಇನ್ನು ಮುಂದೆ ಊರಿನ ಟಪಾಲು ಕಟ್ಟೆಯಲ್ಲೆ ವಿವಾಹ ವಿಚ್ಛೇದವನ್ನು ಪಡೆಯುವ ವ್ಯವಸ್ಥೆ ಮಾಡಿದರೆ ಒಳ್ಳೇದು" ಎಂದು. ಅರ್ಜಿದಾರರಲ್ಲಿ ಹತ್ತರಲ್ಲೇಳು ಜನ ತಮ್ಮ ಗಂಡನ (ಅಥವಾ ಹೆಂಡತಿಯ) ಮೇಲೆ ವ್ಯಭಿಚಾರದ ಆರೋಪ ಹೊರಿಸುತ್ತಾರೆ. ಈ ಹತ್ತು ವರ್ಷದಲ್ಲಿ ಒಂದು ಮಾತು ಮಾತ್ರ ಬದಲಾಗಿದೆ. ಹಿಂದೆ ಗಂಡಂದಿರ ಮೇಲೆ ಹೆಂಗಸರ ಅರ್ಜಿಗಳೇ ಹೆಚ್ಚಾಗಿದ್ದವು. ೧೯೪೭ ರಲ್ಲಿ ಹೆಂಡಂದಿರಿಂದ ಮುಕ್ತರಾಗಲು ಹಾತೊರೆಯುವ ಗಂಡಸರೇ ಹೆಚ್ಚಾಗಿದ್ದಾರೆ.

❋ ಅಧ್ಯಕ್ಷ ಟ್ರೂಮನ್ನರು ಅಮೇರಿಕನ್ ಶಾಸನ ಸಭೆಗೆ ಕಳೆದ ವಾರ ಒಪ್ಪಿಸಿದ ೧೯೪೯-೫೦ ರ ಮುಂಗಡ ಪತ್ರಿಕೆಯಲ್ಲಿ ೪,೧೮,೫೮೦ ಲಕ್ಷ ಡಾಲರುಗಳನ್ನು ವೆಚ್ಚಕ್ಕಾಗಿ ಬೇಡಲಾಗಿದೆ. ಉತ್ಪನ್ನ ೪,೦೯,೮೫೦ ಲಕ್ಷ ಡಾಲರುಗಳು. ವೆಚ್ಚದಲ್ಲಿ ೪೫,೦೦೦ ಲಕ್ಷ ಯುರೋಪಿಗೆ ಸಹಾಯ ನೀಡಲು ಮತ್ತು ೧,೪೩,೦೦೦ ಲಕ್ಷ ರಾಷ್ಟ್ರೀಯ ಸಂರಕ್ಷಣೆಗೆ.. ಅಂದರೆ ಸೈನ್ಯ ಮೊದಲಾದುದಕ್ಕೆ. ಅರ್ಥಾತ್ ಮುಂಗಡ ಪತ್ರದ ಅಂದಾಜಿನಲ್ಲಿ ಅರ್ಧಪಾಲು ಯುದ್ಧಸಿದ್ಧತೆಗೆ !

ವ್ಯಾಪಾರ ಪ್ರಪಂಚ

ಮುಂಬಯಿ ಶೇರುಪೇಟೆ

ತಾ. ೧೯

ಶೇರ ಪೇಟೆಯಲ್ಲಿ ಎಲ್ಲರ ದೃಷ್ಟಿ ಮುಂಬರುವ ಕೇಂದ್ರ ಮುಂಗಡ ಪತ್ರದ ಕಡೆ ನೇಟ್ಟಿದೆ. ಹಣಕಾಸಿನ ಮಂತ್ರಿಗಳು ಕಳೆದ ತಿಂಗಳಲ್ಲಿ ಕಲಕತ್ತೆಯ ವಣಿಕ್ ಮಂಡಲದಲ್ಲಿ ಮತ್ತು ಅನ್ಯತ್ರ ಮಾಡಿದ ಭಾಷಣಗಳಿಂದಲೂ ಕಾಶ್ಮೀರದ ಯುದ್ಧ ನಿಂತು ಸಾಧಾರಣವಾಗಿ ದೇಶದ ರಾಜಕೀಯ ಸಮಸ್ಯೆಗಳು ಬಗೆಹರಿದಿರುವದರಿಂದಲೂ ಇನ್ನು ಉತ್ಪನ್ನ ಕರದ ಪ್ರಮಾಣವನ್ನು ಸರಕಾರದವರು ಏರಿಸಲಿಕ್ಕಿಲ್ಲ ಮಾತ್ರವಲ್ಲ ತಗ್ಗಿಸಬಹುದೆಂಬ ಆಶೆ ಸಾಮಾನ್ಯವಾಗಿ ಹಬ್ಬಿದ್ದರೂ ಅನಿಶ್ಚಿತತೆಯ ಮೂಲಕ ಪೇಟೆಯಲ್ಲಿ ವ್ಯವಹಾರ ಸ್ಥಗಿತವಾಗಿದೆ. ಬೆಲೆಗಳು ಸ್ವಲ್ಪ ಸ್ವಲ್ಪವೇ ಇಳಿಯುತ್ತಿವೆ. ಇಂದಿನ ಕೊನೆಯ ದರಗಳು ಹೀಗಿದ್ದವು:

ಅಹಮದಾಬಾದ ಅಡ್ವಾನ್ಸ	೨೬೦-೦-೦
ಮುಂಬಯಿ ಡಾಯಿಂಗ್	೯೬೦-೦-೦
ಸೆಂಟ್ರಲ ಇಂಡಿಯಾ	೨೪೩-೦-೦
ಸೊಚುರಿ	೨೩೦-೦-೦
ಗೋಕಾಕ	೨೬೫-೦-೦
ಕೋಹಿನೂರು	೨೭೨-೪-೦
ಸಿಂಪ್ಲೆಕ್ಸ	೧೭೪-೮-೦
ಸ್ವದೇಶಿ	೨೬೫ ೦-೦
ಬೇಲಾಪುರ ಸಕ್ಕರೆ	೨೨೭-೮-೦
ಸಿಂಧ್ಯ ಸ್ಟೀಮ	೨೦-೧-೬
ಟಾಟಾ ಸ್ಟೀಲ ಡೆಫರ್ಡ	೧೬೪೦-೦-೦
ಇಂಡಿಯನ್ ಆಯರ್ನ	೨೦-೦-೦
ಅಸೊ ಸಿಮೆಂಟ್ಸ	೧೫೭-೮ ೦
ಸೆಂಟ್ರಲ ಬ್ಯಾಂಕ್	೧೯೦ ೮-೦
ಇಂಪೀರಿಯಲ್ ಪೂರ್ಣ	೧೮೦೦ ೦ ೦
ಬ್ಯಾಂಕ ಆಫ್ ಇಂಡಿಯಾ	೧೯೦ ೦ ೦

ಚಿನ್ನ ಬೆಳ್ಳಿ

ಮುಂಬಯಿಯಲ್ಲಿ ವಾಯದೇ ವ್ಯಾಪಾರ ನಿಂತು ಹೋಗಿದ್ದು ಅದು ಪುನಃ ಪ್ರಾರಂಭವಾಗಬೇಕಾದರೆ ಕನಿಷ್ಠ ಒಂದು ತಿಂಗಳಾದರೂ ಬೇಕಾಗಬಹುದೆಂದು ಭಾವಿಸಲಾಗಿದೆ. ಈ ನಡುವೆ ಬೆಲೆಗಳು ಮತ್ತೆ ಏರಿಕೊಂಡಿವೆ. ರಾಜಕೋಟಿನಲ್ಲಿ ವಾಯದೆ ವ್ಯಾಪಾರ ಜೋರಾಗಿ ನಡೆಯುತ್ತಿರುವ ಕಾರಣ ಅಲ್ಲಿ ಚಿನ್ನ ಹೋಗಿ ಸೇರುತ್ತಿದೆಯಂತೆ. ಇಂದಿನ ಕೊನೆಯ ದರಗಳು ಹೀಗಿದ್ದವು.

ಚಿನ್ನ	೧೧೫-೧೦-೦
ಬೆಳ್ಳಿ	೧೮೩-೦-೦
ಸಾವರೀನ್	೭೪ ೧೦-೦

ಅರಳೆ

ಅರಳೆಯ ವ್ಯಾಪಾರ ರಭಸದಿಂದ ಸಾಗುತ್ತಿಲ್ಲ. ಸರಕಾರ ಅರಳೆಯನ್ನು ನಿಯಂತ್ರಿಸಲು ಮಾತ್ರವಲ್ಲ, ಪೂರ್ಣ ವಶಪಡಿಸಿಕೊಳ್ಳಲು ಕೂಡ ವಿಚಾರಿಸುತ್ತಿರುವದೆಂದು ಸುದ್ದಿ ಹಬ್ಬಿದೆ. ಇಂದು ದರಗಳು ಹೀಗಿದ್ದವು.

ಮೇ	೬೧೯-೪-೦
ಜುಲೈ	೬೧೯ ೦-೦
ಸೆಪ್ಟಂಬರ	೬೧೮-೧೨-೦

ಎಣ್ಣೆ ಕಾಳು

ಬಿಗುಚಲಾವಣೆಯ ಪ್ರದೇಶಗಳಿಗೆ ಎಣ್ಣೆ ಕಾಳು ಕಳಿಸಲು ಸರಕಾರದವರು ಉತ್ತೇಜನ ಕೊಡಲಿರುವದರಿಂದ ಕೊಳ್ಳುವವರ ರಭಸ ಹೆಚ್ಚಾಗಿ ಬೆಲೆಗಳು ಏರಿವೆ.

ಶೇಂಗಾ	೧೭೧-೪ ೦
ಅಗಸಿ (ಹಳೆ)	೨೬-೧೦-೦
ಅಗಸಿ (ಹೊಸ)	೨೬ ೧೩-೦
ಅಗಸಿ ಎಣ್ಣೆ	೧೬ ೧೨-೦

ಹುಬ್ಬಳ್ಳಿ

ತಾ. ೧೯

ಜ. ಹತ್ತಿ ನಗಕ್ಕೆ		೪೮೫-೫೦೫
ಮುಂ. ಹತ್ತಿ		೪೫೦ ೪೭೫
ಜ. ಅರಳೆ ,,		೨೮೫ ೩೨೫
ಹತ್ತಿ ಕಾಳು	ರೂ.ಗೆ	೫½ ಪೌಂಡು
ಕುಸುಬಿ	ಪಲ್ಲಕ್ಕೆ	೩೪ ೩೪॥
[illegible]	,,	೩೭ ೩೯
ತಡಲ	,,	೪೦ ೪೧॥
ಜ. ಹೆಸರು	,,	೫೨ ೫೬॥
ಕರಿ ಎಳ್ಳು	,,	೫೬-೬೦
ಬಿಳಿ ಎಳ್ಳು	,,	೬೮-೭೫
ಕಡಲೆ	,,	೫೮-೬೦
ಜ. ತೊಗರಿ	,,	೩೨ ೩೫
ಹುರಳಿ	,,	೩೪-೩೫
ಕೆಂಪು ಅಲಸಂದಿ	,,	೫೩-೫೬॥
ಬಿ. ಅಲಸಂದಿ	,,	೫೮ ೬೦
ಶೇಂಗಾ (ಬೀಜ)		೪೦ ೪೪

ನಮ್ಮ ಲಂಡನ್ನಿನ ಓಲೆ

(ಸ್ವಂತ ಪ್ರತಿನಿಧಿ ಶ್ರೀ ಬಿ. ವಿ. ಕಾಮ್ತ ಣಕೆರರಿಂದ)

ಮಧ್ಯ ಪೂರ್ವದ ಪ್ರಕ್ಷುಬ್ಧ ಪರಿಸ್ಥಿತಿ

ಈ ವಾರ ಬ್ರಿಟನ್ನಿನಲ್ಲಿ ರಾಜತಂತ್ರಜ್ಞರೂ ಪತ್ರಿಕೆಗಳೂ ಅಸ್ತವ್ಯಸ್ತ ಮನಃಸ್ಥಿತಿಯನ್ನು ತಾಳಿದಷ್ಟು ಹಿಂದೆ ಬಹಳ ವರ್ಷಗಳಲ್ಲಿ ಒಮ್ಮೆಯೂ ತಾಳಿಲ್ಲ. ಮಧ್ಯಪೂರ್ವದಲ್ಲಿ ೫ ಬ್ರಿಟಿಶ್ ವಿಮಾನಗಳನ್ನು ಯೆಹೂದಿಗಳು ಹೊಡೆದು ಉರುಳಿಸಿದ ಬಗ್ಗೆ ವಿದೇಶ ಮಂತ್ರಿ ಬೆವಿನ್ನರನ್ನು ಹೊಗಳಬೇಕೋ ತೆಗಳಬೇಕೋ ಅವರಿಗೆ ತಿಳಿಯದಾಗಿದೆ. ಆದುದರಿಂದ ಅಂತಾರಾಷ್ಟ್ರೀಯ ರಾಜಕಾರಣದ ಕೇಂದ್ರವು ಒಮ್ಮೆಲೇ ಬರ್ಲಿನ್ನಿನಿಂದ ಸೀನಾಯ್ ಪ್ರದೇಶದ ಸುತ್ತುಮುತ್ತ ಸರಿದಿದೆ. ಇದರಿಂದ ಇಂಗ್ಲೆಂಡಿನ ಮಂತ್ರಿಮಂಡಲ, ಸಂರಕ್ಷಣ ಸಮಿತಿ ಮತ್ತು ಬೆವಿನ್ನರಿಗೆ ಗಡಿಬಿಡಿಯಿಂದ ಕೆಲಸ ಮಾಡುವಂತಾಗಿದೆ. ಇಲ್ಲಿಯ 'ಇಕಾನಮಿಸ್ಟ್' ಎಂಬ ಪತ್ರಿಕೆಯು, "ಮಧ್ಯಪೂರ್ವದಲ್ಲಿ ಯೆಹೂದಿಗಳು ಒಮ್ಮಿಂದೊಮ್ಮೆ ಗಂಡಾಂತರ ಪರಿಸ್ಥಿತಿಯನ್ನುಂಟುಮಾಡದಂತೆ ಪ್ರಯತ್ನಿಸುವುದೇ ಇಂದು ಬ್ರಿಟಿಶರತಲೆಗೆ ಹಿಡಿದ ಹುರಿ. ಹಾಗೇನಾದರೂ ಸಂಭವಿಸಿದರೆ ಯುದ್ಧ ಕ್ಷೇತ್ರ ವಿಸ್ತಾರಗೊಂಡೀತು ಇಲ್ಲವೆ ಆಂಗ್ಲೋ-ಅಮೇರಿಕನ್ನರ ಸಮರನೈತಿಕ ಸ್ಥಾನಕ್ಕೆ ಚ್ಯುತಿ ಬಂದೀತು" ಎಂದು ಬರೆದಿದೆ. ಇದರಿಂದ ಹೊರಗಾರ ಮುತ್ಸದ್ದಿಗಳು ಪಾಲಿಸ್ತಾನದ ಬಗ್ಗೆ ಎಷ್ಟು ಕಳವಳ ಪಡುತ್ತಿದ್ದಾರೆ ಎಂಬುದನ್ನು ತಿಳಿಯಬಹುದು. ಇಂಗ್ಲೀಷ್ ಮತ್ತು ಅಮೇರಿಕನ್ ಪತ್ರಿಕೆಗಳು ಮೊದಲು ಪರಸ್ಪರ ವಿರುದ್ಧ ಲೇಖನಗಳನ್ನು ಬರೆದರೂ ಈಗ ಮಧ್ಯಪೂರ್ವದಲ್ಲಿ ಆಂಗ್ಲೋ-ಅಮೇರಿಕನ್ನರ ಹಿತಸಂಬಂಧಗಳು ಒಂದೇ ಆಗಿವೆ ಎಂಬುದನ್ನು ಎಲ್ಲರೂ ಅರಿತರು. ಯುದ್ಧವೇನಾದರೂ ಸಂಭವಿಸಿದರೆ ಮಧ್ಯಪೂರ್ವದ ಎಣ್ಣೆಗೆ ತಾವಲ್ಲದೆ ರಶಿಯನ್ನರು ಸಮ್ರಾಟರಾಗಕೂಡದು ಎಂಬುದೇ ಮುಖ್ಯವಾದ ಅಂಶ. ಇತ್ತೀಚಿನ ಸುದ್ದಿಯ ಪ್ರಕಾರ ಕೂಲಿಕಾರ ಪಕ್ಷ ಬೆವಿನ್ನರ ಪಾಲಿಸ್ತಾನ ಧೋರಣವನ್ನು ಉಗ್ರವಾಗಿ ಟೀಕಿಸಿ ಅವರ ರಾಜೀನಾಮೆ ಕೇಳಬಹುದೆಂದು ತಿಳಿಯುತ್ತದೆ.

ಸರ್ ಸ್ಟೆಫರ್ಡರ ಸಾಹಸ

ಕೂಲಿಕಾರರು ಹೆಚ್ಚು ಸಂಬಳ ಬೇಡಕೂಡದು, ಕಡಿಮೆ ಖರ್ಚು ಮಾಡಬೇಕು ಎಂದು ಕೂಲಿಕಾರ ಸರಕಾರದ ಹಣಕಾಸಿನ ಮಂತ್ರಿ ಸರ್ ಸ್ಟಾಫರ್ಡ್ ಕ್ರಿಪ್ಸರೇ ಹೇಳಬೇಕಾದರೆ ಬಹಳ ಧೈರ್ಯಬೇಕಲ್ಲವೆ? ಆಡಳಿತ ಮತ್ತು ಸಮಾಜ ಸೇವೆಗಳಲ್ಲಿ ಮಿತವ್ಯಯವೇ ಮೂಲಮಂತ್ರವಾಗಿರಬೇಕು. ಇಂದು ದೇಶದ ಉದ್ಧಾರವಾಗಬೇಕಾದರೆ, ಬರುವ ಎಪ್ರಿಲ್ಲಿನಲ್ಲಿ ಅತಿಪ್ರಸರಣಕ್ಕೆ ಪ್ರತ್ಯಸ್ತ್ರವಾಗುವ ಮುಂಗಡ ಪತ್ರಿಕೆಯೇ ಸಿದ್ಧವಾಗಬೇಕು ಎಂದು ತಜ್ಞರೆನ್ನುತ್ತಿದ್ದಾರೆ. ಭಾಷಣದಲ್ಲಿ ಹೇಗೋ ಹಾಗೇ. ಸರ್ ಸ್ಟಾಫರ್ಡರು ತಮ್ಮ ಮುಂಗಡ ಪತ್ರಿಕೆಯ ರಚನೆಯಲ್ಲಿಯೂ ಬಹಳ ಧೈರ್ಯದಿಂದ ಸಾಗಬೇಕಾಗಿದೆ.

ಪ್ರಸಿದ್ಧ ವಿಡಂಬಕನ ಮರಣ

ಈ ನೀರಸ ವಾರದಲ್ಲಿ ಮತ್ತೂ ಒಂದು ದುಃಖದಾಯಕ ಸಂಗತಿ ನಡೆಯಿತು. ಇಂಗ್ಲೆಂಡಿನ ಸುಪ್ರಸಿದ್ಧ ವಿಡಂಬನಕಲಾವಿದ ಟಾಮಿ ಹ್ಯಾಂಡ್ಲಿಯು ಕಳೆದ ಆದಿತ್ಯವಾರ ದಿವಂಗತನಾದನು. ಈತನ ಮರಣದಿಂದ ಇಂಗ್ಲೆಂಡಿನ ಒಳಗೂ ಹೊರಗೂ ಸಾವಿರಾರು ಮನೆಗಳು ದುಃಖಿತ್ತೀಡಾದವು. ಇವನು ಆಂಗ್ಲ ಆಕಾಶವಾಣಿಯಿಂದ "ಮತ್ತದೇ ಮನುಷ್ಯ" ಎಂಬ ಶಿರೋನಾಮದಲ್ಲಿ ಪ್ರತಿನಿತ್ಯವೂ ಅಬಾಲವೃದ್ಧ ಸ್ತ್ರೀ ಪುರುಷ ಶ್ರಾವಕರನ್ನು ತನ್ನ ಹಾಸ್ಯರಸಾಯನದಿಂದ ತಣಿಸುತ್ತಿದ್ದನು. ಈ ವಿಡಂಬನಕಾರನು ಅನೇಕ ಬಗೆಯ ವ್ಯಕ್ತಿಗಳ ನಾಟಕೀಯ ಚಿತ್ರಣವನ್ನು ಮಾತಿನಲ್ಲಿ ಮೂಡಿಸಿ ಜನಜೀವನದ ದೋಷಗಳನ್ನು ವ್ಯಂಗ್ಯವಾಗಿ ಜನರ ಮುಂದಿಡುತ್ತಿದ್ದನು. ಅವರಲ್ಲಿ ಅವನ ವ್ಯಕ್ತಿತ್ವದ ಸೌಂದರ್ಯ ಮೂಡದಿದ್ದ ದಿವಸವೇ ಇಲ್ಲ. ಅವನು ಮೊದಲು ಶಾಲೆ ಕಲಿತ ಬಳಿಕ ಹಾಸು ಕೆಲಸಕ್ಕಿದ್ದ ಥಾಸ್ಯದಂಗಡಿಯಿಂದ ಹಾದಿಯ ಮೇಲೆ ಹೋಗುವವರತ್ತ ಹೊಟ್ಟೆ ಹುರಿಸುತ್ತಿದ್ದನು. ಮೊದಲನೆಯ ಯುದ್ಧ ಕಾಲದಲ್ಲಿ ಅವನು ಮಾಡಿದ ಸೇವೆಯ ನಂತರ ೧೯೨೬ ರಲ್ಲಿ ಅವನಿಗೆ ಮೊದಲನೆಯ ಬಾರಿ ಆಕಾಶವಾಣಿಯಲ್ಲಿ ಸ್ಥಾನ ಸಿಕ್ಕಿತು. "ಟೈಮ್ಸ್"ನಲ್ಲಿ ಅವನನ್ನು "ಅವನದು ಪ್ರಭಾವಿಯಾದ ತೀವ್ರಗತಿಯ ದೊಡ್ಡ ಹಾಸ್ಯಧ್ವನಿ; ಗರಗಸದಂತೆ ಕೊರೆದು ಸಿಟ್ಟಿಗೆಬ್ಬಿಸುವ ಮತ್ತು ನಗೆಗಡಲಲ್ಲಿ ತೇಲಿಸುವ ಗೆಲುವಿನ ಅಥವಾ ಮಾಪವನ ತಪ್ಪು ಇಲ್ಲವೆ ಮೂರ್ಖತೆಗಳ ಆಳವನ್ನು ಹೊಕ್ಕು ಕಂಡು ಅಪ್ರತಿಭನಾದುದನ್ನು ತೋರುವ ಸ್ವರ" ಎಂದು ವರ್ಣಿಸಿದೆ.

ಎತಿಯೋಪಿಯದಲ್ಲಿ ರಶಿಯ

ಇತ್ತ ಪಾಶ್ಚಾತ್ಯ ಯುರೋಪಿನಲ್ಲಿ ರಶಿಯದ ಪ್ರಭಾವವನ್ನು ತಡೆಯಲು ಆಂಗ್ಲೋ-ಅಮೇರಿಕನ್ನರು ಪ್ರಯತ್ನಿಸುತ್ತಿರುವಾಗ, ಅತ್ತ ಎತಿಯೋಪಿಯದಲ್ಲಿ ಅನಿರೀಕ್ಷಿತವಾಗಿ ಕಮ್ಯುನಿಜಂ ತನ್ನ ಕೊಂಡಿಗೈಗಳನ್ನು ಚಾಚುತ್ತಿದೆ. ಆಂಗ್ಲ ಆಕಾಶವಾಣಿಯ ಮಿತ್ರನೊಬ್ಬನು ಈ ವಾರದ ಪ್ರಾರಂಭದಲ್ಲಿ ರಶಿಯಪ್ರೇರಿತ ಆಕಾಶವಾಣಿಗಳನ್ನು ನನ್ನ ಗಮನಕ್ಕೆ ತಂದು ಕೊಟ್ಟು ತನ್ಮೂಲಕ ಎತಿಯೋಪಿಯದಲ್ಲಿಯ ರಶಿಯನ್ನರ ಚಳವಳವನ್ನು ನನಗೆ ವಿವರಿಸಿದನು. ಈ ಮೊದಲು ನಾನು ಪೂರ್ವ ಆಫ್ರಿಕದ ಉದ್ದಕ್ಕೂ ಪ್ರಚಾರಪ್ರಾಚುರ್ಯಕ್ಕೆ ಎತಿಯೋಪಿಯವು ಠಾಣೆಯಾಗಬಹುದೆಂಬ ಆತ್ಮವಿಶ್ವಾಸವಿದೆಯೆಂದು ಸೋವಿಯೆಟ್ ಸರಕಾರ ಹೇಳುತ್ತಿದೆಯೆಂಬ ವದಂತಿಯನ್ನು ಕೇಳಿದ್ದೆ. ಈಗ ಶ್ವೇತಭವನದ ಉಪನಿವೇಶತಜ್ಞರು ಇದಕ್ಕೆ ಪುಷ್ಟಿ ಕೊಡುತ್ತಿದ್ದಾರೆ.

'ಓಗೋನ್ಯಾಕ್' ಎಂಬ ಮಾಸ್ಕೋ ಪತ್ರಿಕೆಗೆ ಅದಿಸ್ಅಬಾಬದಿಂದ ಪತ್ರಕಾರನೊಬ್ಬ ಬರೆದುದರಲ್ಲಿ, "ರಶಿಯದ ಬಗ್ಗೆ ಎತಿಯೋಪಿಯನ್ನರಿಗೆ ತುಂಬ ಆದರಭಾವವಿದೆ. ಎತಿಯೋಪಿಯನ್ನರಿಗೆ ರಶಿಯ ಎಂಬ ಶಬ್ದವು ಮೈತ್ರಿ, ಪರಸ್ಪರ ಗೌರವ ಎಂದು ಅರ್ಥವಾಗುತ್ತದೆ. ಎತಿಯೋಪಿಯದಲ್ಲಿ ಜನರು ರಶಿಯವೆಂದರೆ ಸೋಶಲಿಜಂ ಇರುವ ನಾಡು, ಶಾಂತಿ ಸುರಕ್ಷಿತತೆಗಳ ರಕ್ಷಣೆಗೆ ಸೊಂಟ ಕಟ್ಟಿನಿಂತ ದೇಶ, ಶಾಂತಿಪ್ರಿಯರ ಸ್ವಾತಂತ್ರ್ಯ ಸ್ವಾಧೀನತೆಗಳನ್ನು ರಕ್ಷಿಸುವ ರಾಷ್ಟ್ರ ಎಂದು ಪ್ರೀತಿಯಿಂದ ಹೇಳುತ್ತಾರೆ" ಎಂದಿದೆ.

ಜಗತ್ತಿನಲ್ಲಿ ಕಮ್ಯುನಿಸ್ಟ ಪಕ್ಷವಿಲ್ಲದ ಅತ್ಯಲ್ಪ ಸಂಖ್ಯೆ ದೇಶಗಳಲ್ಲಿ ಎತಿಯೋಪಿಯ ಒಂದು. ಅದರ ರಾಜಧಾನಿಯಲ್ಲಿಯ ಸೋವಿಯಟ್ ಪ್ರದರ್ಶನಿ ಮತ್ತು ಒಂದು ಸೋವಿಯಟ್ ಆಸ್ಪತ್ರೆ ಇವೆರಡು ಇನ್ನಿತರ ಪ್ರಚಾರಕೇಂದ್ರಗಳು. "ಓಗೋನ್ಯಾಕ್"ನ ಪತ್ರಕಾರನು ಪ್ರದರ್ಶನಿಯನ್ನು ಕಂಡು 'ದೂರದ ಸೋವಿಯಟ್ ರಶಿಯದಲ್ಲಿ ನಡೆಯುತ್ತಿರುವ ಸಂಗತಿಗಳ ಬಗ್ಗೆ ಜನರು ಅದ್ಭುತ ಆಸಕ್ತಿ ತೋರಿಸುತ್ತಾರೆ' ಎಂದು ಬರೆಯುತ್ತಾನೆ. ಯೋಧಗಣ, ಮುಲಕೀ ಅಧಿಕಾರಿಗಳು, ಒಕ್ಕಲಿಗರು, ಕಸಬುಗಾರರು, ಗಂಡಸರು, ಹೆಂಗಸರು ಈ ಎಲ್ಲ ಬಗೆಯ ಜನರೂ ಪ್ರದರ್ಶನಕ್ಕೆ ಭೆಟ್ಟಿಕೊಡುತ್ತಾರೆ. ಇದೇ ಮೇರೆಗೆ ಆಸ್ಪತ್ರೆಯೂ ಪ್ರಾಮುಖ್ಯಕ್ಕೆ ಬರುತ್ತಿದೆ. ಪ್ರತಿ ತಿಂಗಳೂ ೨೦೦೦ ರೋಗಿಗಳು ಅಲ್ಲಿ ಚಿಕಿತ್ಸೆ ಪಡೆದು ಹೋಗುತ್ತಾರೆ. ಅದಿಸ್ ಅಬಾಬದಲ್ಲಿಯ ರಶಿಯನ್ ವೈದ್ಯರು ವ್ಯಾಧಿಯನ್ನು ಗುಣಪಡಿಸುವುದಷ್ಟೇ ಅಲ್ಲದೆ, ಸ್ಥಳೀಯ ರೋಗಗಳ ಬಗ್ಗೆ ಸಂಶೋಧನ ನಡೆಸುತ್ತಾರೆ. ಮತ್ತು ಅಲ್ಲಿಯವರಿಗೆ ವೈದ್ಯವೃತ್ತಿಯಲ್ಲಿ ತರಬೇತು ಕೊಡುತ್ತಾರೆ ಎಂದೂ ಪತ್ರಕಾರ ತಿಳಿಸುತ್ತಾನೆ.

ಹೈಲೀಸೆಲಾಸೆಯ ಆಸ್ಥಾನದಲ್ಲಿ ಭಾರತದ ಒಬ್ಬ ರಾಯಭಾರಿ ಇದ್ದಾನೆಂದು ನನ್ನ ತಿಳುವಳಿಕೆ. ಎತಿಯೋಪಿಯದಲ್ಲಿಯ ರಶಿಯದ ಚಟುವಟಿಕೆಗಳ ಬಗ್ಗೆ ಆತನು ತನ್ನ ಸರಕಾರಕ್ಕೆ ವರದಿ ಮಾಡಿದ್ದಾನೋ ಇಲ್ಲವೋ ತಿಳಿಯೆ. ಅವನು ಇಷ್ಟರೊಳಗೆ ಮಾಡದಿದ್ದರೆ ಇನ್ನು ಮೇಲಾದರೂ ಮಾಡಬೇಕೆಂದು ನನ್ನ [illegible].

ಶಿವಮೊಗ್ಗೆ

ತಾ. ೧೮

ಬೇಪಾರಿ ನಂ. ೧		೨೯-೩೦
,,	೨	೨೫-೨೮
,,	೩	೨೦-೨೪
ರಾಶಿ ಅಲಪೆ		೨೩-೩೦
ಬೆಟ್ಟೆವಂಡಿ		೧೫-೧೬
ಚಿಟ್ಟೆ		[illegible]

ಇಂಗ್ಲೆಂಡಿನಲ್ಲಿ ಮುಖ ಕೈಗಾರಿಕೆ

ಇಂಗ್ಲೆಂಡಿನ [illegible] ಪಾಶ್ಚಾತ್ಯ ಪ್ರದೇಶಗಳಲ್ಲಿ [illegible] ಕೈಗಾರಿಕೆಗಳು [illegible]. [illegible] ಕೈಗಾರಿಕೆಯೂ ಪದಾರ್ಥಗಳನ್ನು ಕೊಳ್ಳುವವರು. [illegible] ಕೈಗಾರಿಕೆಗಳು ತಮ್ಮ [illegible] ಕೈಗಾರಿಕೆಗಳ ಸ್ಪರ್ಧೆಗಳಿಂದ [illegible] ಕ್ಷೀಣಿಸುತ್ತಿವೆ. ಇಂಥವುಗಳಲ್ಲಿ ಸ್ಕಾಟಿಶ್ ಟ್ವೀಡಿನ ತಯಾರಿಕೆ ಮುಖ್ಯವಾದುದು.

ಸ್ಕಾಟಿಶ್ ಟ್ವೀಡಿನ ತಯಾರಿಕೆ ಸ್ಕಾಟ್ಲೆಂಡಿನ ಜನರ ವಿಶಿಷ್ಟ ಕೈಗಾರಿಕೆ. ಅವರ ಅಂಗಿಗಳ ಬಿಸ್ಟರ್ ಮತ್ತು [illegible] ಇವರಿಬ್ಬರು ಒಮ್ಮೆ ಸ್ಕಾಟ್ಲೆಂಡನ್ನು ಬಿಟ್ಟು ಇಂಗ್ಲೆಂಡಿನಲ್ಲಿವಾಸ ಮಾಡತೊಡಗಿದರು. ಅಂದಿನಿಂದ ಇಂಗ್ಲೆಂಡಿನಲ್ಲೂ ಸ್ಕಾಟಿಶ್ ಟ್ವೀಡ್ ತಯಾರಾಗಹತ್ತಿತು.

ಟ್ವೀಡಿನ ತಯಾರಿಕೆಗೆ ಬೇಕಾದುದು ಬಣ್ಣ ಹಾಕಿದ ಉಣ್ಣೆ. ಅದನ್ನು ಬಿಸ್ಟರನು ಸ್ಕಾಟ್ಲೆಂಡಿನಿಂದ ತರಿಸಿಕೊಳ್ಳುತ್ತಿದ್ದಾನೆ. ಒಂದು ಹಳೆಯ ಕಮ್ಮಾರಶಾಲೆಯಲ್ಲಿ ಕೈಮಗ್ಗ ಮೂರನ್ನು ನಿಲ್ಲಿಸಿ ಬಿಸ್ಟರ್ ದಂಪತಿಗಳು ಜನರಿಗೆ ಬೇಕು ಬೇಕಾದ ಮಾದರಿಯ ಟ್ವೀಡನ್ನು ತಯಾರು ಮಾಡಿ ಕೊಡುತ್ತಾರೆ. ಪ್ರತಿಯೊಂದು ಮಾದರಿಯನ್ನೂ ಹೊಸದಾಗಿ ತಾನೇ ಬಿಸ್ಟರ್ ನೋಡಿಕೊಳ್ಳುತ್ತಾನೆ. ಒಬ್ಬನ ಮಾದರಿ ಇನ್ನೊಬ್ಬನದಲ್ಲ. ಗಿರಣಿಯಲ್ಲಿ ಸಿದ್ಧವಾದ ಬಟ್ಟೆಗಳಲ್ಲಿ ಯಾಂತ್ರಿಕವಾದ ಏಕರೂಪತೆಯಿರುತ್ತದೆ. ಕೈಗಾರಿಕೆಯ ಪದಾರ್ಥವಲ್ಲಾದರೆ ಹಾಗಲ್ಲ; ಕಸಬುದಾರನ ಕೈಚಳಕದಲ್ಲಿ ಅವನ ವೈಯಕ್ತಿಕತೆ ಬಿಂಬಿಸಿರುತ್ತದೆ. ಆದರಿಂದಲೇ ಅಲ್ಲಿ ಗಿರಣಿಯ ಪದಾರ್ಥಗಳಿಗಿಂತ ಕೈಯಲ್ಲಿ ತಯಾರಾದ ಸಾಮಾನುಗಳಿಗೇ ಬೇಡಿಕೆ ಹೆಚ್ಚು. ನಮ್ಮ ನಾಡಿನಲ್ಲಿ ಈ ಮರ್ಮವನ್ನರಿಯದವರೂ ಅಗ್ಗದರವೇ ಮುಖ್ಯವೆಂದು ಕೊಳ್ಳುವವರೂ ಹೆಚ್ಚಾಗಿರುವುದರಿಂದ ಕೈಗಾರಿಕೆಯ ಸಾಮಾನುಗಳನ್ನು ಕೊಳ್ಳಬಾರರು. ಆದುದರಿಂದಲೇ ನಮ್ಮಲ್ಲಿ ಹಳ್ಳಿಯ ಕೈಗಾರಿಕೆಗಳಿಗೆ ಬಳಕೆಗಾರರ ಪ್ರೋತ್ಸಾಹ ಸಾಕಷ್ಟು ಸಿಕ್ಕುತ್ತಿಲ್ಲ.

ಪಾಶ್ಚಾತ್ಯ ದೇಶಗಳಿಗಿಂತ ಪೌರಸ್ತ್ಯ ದೇಶಗಳಲ್ಲೇ ಕೈಗಾರಿಕೆಗಳಿಗೆ ಉತ್ತಮಸ್ಥಾನ ಸಿಗಬಹುದಾಗಿದೆ. ಏಕೆಂದರೆ ಇವನ್ನು ಅಷ್ಟು ಕಾರಖಾನೆ ರಾಜ್ಯಗಳೆನಿಸಿಲ್ಲ. ಆದರೆ ಸರಕಾರ ಮಾತ್ರ ಕೈಗಾರಿಕೆಗಳಿಗೆ ರಕ್ಷಣೆಯನ್ನೂ ಸಹಾಯ ಸೌಕರ್ಯಗಳನ್ನೂ ಒದಗಿಸಿ ಕೊಡುವುದು ಅತ್ಯವಶ್ಯಕ.

ಇಂಡೋನೇಶಿಯದ ಪ್ರಕರಣ

ಇಂಡೋನೇಶಿಯದ ಬಿಕ್ಕಟ್ಟನ್ನು ಬಗೆಹರಿಸಲು ಅಮೇರಿಕ ಮುಂದಿಟ್ಟ ಸೂಚನೆಗಳನ್ನು ಕುರಿತು ನ್ಯೂಯಾರ್ಕಿನಲ್ಲಿರುವ ಹಿಂದೀ ಪ್ರತಿನಿಧಿ ಸರ್ ಬೆನಗಲ್ ರಾಮರಾಯರೊಡನೆ ಇಂಡೋನೇಶಿಯದ ಪ್ರತಿನಿಧಿಗಳು ಚರ್ಚೆ ನಡೆಸಿದರು. ಡಚ್ ವಕ್ತಾರನೊಬ್ಬನು ಈ ಸೂಚನೆಗಳು ಅವ್ಯವಹಾರ್ಯವೆಂದು ತಿಳಿಸಿದನು. ಯುದ್ಧೋಪಸಂಹಾರ, ರಾಜಕೀಯ ಧುರೀಣರ ಬಿಡುಗಡೆ, ೧೯೫೦ ರ ಮಾರ್ಚಿ [illegible] ರ ಒಳಗೆ ಇಂಡೋನೇಶಿಯದ ಸಂಯುಕ್ತ ಸಂಸ್ಥಾನದ ಬಗ್ಗೆ ಒಡಂಬಡಿಕೆ ಮತ್ತು ಸಪ್ಟೆಂಬರದೊಳಗೆ ಚುನಾವಣೆ ಇವೇ ಸೂಚನೆಯ ಅಂಶಗಳು.

ಭಾರತ ಪಾಕಿಸ್ತಾನ ಮತ್ತು ಸಿಂಹಳಗಳು ಡಚ್ ವಿಮಾನ ತಮ್ಮ ಪ್ರದೇಶದಲ್ಲಿ ಹಾರಕೂಡದೆಂದು ಆಜ್ಞೆ ವಿಧಿಸಿವೆ.

ಪಂಡಿತ ನೆಹರು ಕರೆದಿರುವ ಏಶಿಯ ಪರಿಷತ್ತಿಗೆ ಅಫಗಾನಿಸ್ತಾನ, ಬ್ರಹ್ಮದೇಶ, ಆಸ್ಟ್ರೇಲಿಯ ಮುಂತಾದ ೧೯ ಏಶಿಯ [illegible] ತಮ್ಮ ಪ್ರತಿನಿಧಿಗಳನ್ನು ಕಳಿಸಿವೆ. ಇಂಡೋನೇಶಿಯದಲ್ಲಿ ಡಚ್ಚರು ಎಸಗಿದ ಕೃತ್ಯದ ಬಗ್ಗೆ ಯಾವ ಪ್ರತೀಕಾರೋಪಾಯವನ್ನು ಕೈಕೊಳ್ಳಬೇಕೆಂಬುದು ಈ ಸಭೆಯಲ್ಲಿ [illegible] ಬಹುದೆಂದು ನಿರೀಕ್ಷಿಸಲಾಗಿದೆ.

ಪಾಶ್ಚಾತ್ಯ [illegible] ಬಗ್ಗೆ [illegible] ಕಳ್ಳ ಪತನವನ್ನು [illegible] [illegible] ಕೈಗಾರಿಕೆ [illegible].

ಕರ್ಮವೀರ

ಶ್ರೀಮುಖ್ಯಾಲಂಕ್ಕ ವಿಕ್ರಮ ವರ್ಷ ೨೦೦೫
ಪುಷ್ಯ ಬಹುಳ ೧೦ ಸೋಮವಾರ

ಸರ್ವೋದಯ ದಿನ

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಇಹಲೋಕಯಾತ್ರೆಯನ್ನು ಮುಗಿಸಿ ಇದೇ ೩೦ ನೆಯ ತಾರೀಕಿಗೆ ಒಂದು ವರುಷವಾಗುವದು. ಈ ದಿನವನ್ನು ಸರ್ವೋದಯ ದಿನವೆಂದು ಆಚರಿಸಬೇಕೆಂದು ಕಾಂಗ್ರೆಸ ಕಾರ್ಯ ಸಮಿತಿಯವರು ನಿರ್ಧರಿಸಿ ಅದನ್ನು ಎಂತು ಆಚರಿಸಬೇಕೆಂಬುದನ್ನೂ ನಿರ್ದೇಶಿಸಿದ್ದಾರೆ. ಪರದಾಸ್ಯದಲ್ಲಿ ಕೊಳೆಯುತಿದ್ದ ನಮ್ಮ ನಾಡನ್ನು ಬಂಧಮುಕ್ತಮಾಡಿದ ಶ್ರೇಯಸ್ಸು ಮಹಾತ್ಮಾ ಗಾಂಧಿಯವರಿಗೇ ಮುಖ್ಯವಾಗಿ ಸಲ್ಲುವದು. ತಮ್ಮ ಅಖಂಡ ೬೮ ವರುಷಗಳ ತಪಃಪ್ರಭಾವದಿಂದ, ಅನುಪಮ ಸ್ವಾರ್ಥ ತ್ಯಾಗದಿಂದ, ಕಷ್ಟನಷ್ಟಗಳಿಂದ ಗಾಂಧೀಜಿ ನಮ್ಮ ರಾಷ್ಟ್ರವನ್ನು ಕಟ್ಟಿದರು. ಆದರೆ ದೇಶದ ದುರ್ದೈವದಿಂದ ಸ್ವರಾಜ್ಯವನ್ನು ತಂದು ಕೊಟ್ಟ ಆ ರಾಷ್ಟ್ರಪಿತನು ದೇಶದಲ್ಲೆಲ್ಲ ಸುರಾಜ್ಯವನ್ನು ಸ್ಥಾಪಿಸಿ ಹಿಂದಿನ ಹಿರಿಮೆಯನ್ನು ರಾಷ್ಟ್ರಕ್ಕೆ ತಂದು ಕೊಡುವ ಮೊದಲೆ ಕಲೆತಿರುಕನೊಬ್ಬನ ಗುಂಡಿಗೆ ಆಹುತಿಯಾದನು. ಇಡೀ ಜಗತ್ತೇ ಅವರ ಮರಣಕ್ಕಾಗಿ ಮರುಗಿತು. ಆ ರಾಷ್ಟ್ರಪಿತನ ಪುಣ್ಯ ಸ್ಮರಣೆಯನ್ನು ಮಾಡುತ್ತಲೆ ಪಂಡಿತ ಜವಾಹರಲಾಲ, ಸರದಾರ ವಲ್ಲಭಭಾಯಿ ಮೊದಲಾದ ಮುಖಂಡರು ರಾಜ್ಯಸೂತ್ರವನ್ನು ಯಶಸ್ವಿಯಾಗಿ ನಡೆಸುತ್ತ, ಬಂದ ಕಷ್ಟನಷ್ಟಗಳನ್ನೆಲ್ಲ ಎದುರಿಸುತಿರುವರು; ಇಂಥ ರಾಷ್ಟ್ರಪಿತನಿಗೆ ತಕ್ಕದಾದ ರೀತಿಯಲ್ಲಿ ಈ ಸರ್ವೋದಯ ದಿನವನ್ನು ಆಚರಿಸುವದು ಕರ್ತವ್ಯವಾಗಿದೆ.


ಜಾತ್ಯತೀತ ಪ್ರಜಾಪ್ರಭುತ್ವವನ್ನು ದೇಶದಲ್ಲಿ ಪ್ರಸ್ಥಾಪಿಸುವುದಕ್ಕಾಗಿ ಪ್ರತಿಯೊಬ್ಬ ನಾಗರಿಕನು ಶಾಂತ ರೀತಿಯಿಂದ ಕೆಲಸ ಮಾಡಬೇಕು. ಗಾಂಧೀಜಿ ತಮ್ಮ ಜೀವನದಲ್ಲೆಲ್ಲ ಇಟ್ಟುಕೊಂಡ ಮತ್ತು ಬಹಳ ಮಟ್ಟಿಗೆ ಸಾಧಿಸಿದ ಧ್ಯೇಯಗಳನ್ನು ಸ್ಮರಿಸಿ ಅವುಗಳಂತೆ ನಡೆಯಲು ಬದ್ಧಪ್ರತಿಜ್ಞರಾಗುವದು ಈ ದಿನಾಚರಣೆಯ ಮುಖ್ಯಾಶಯವಾಗಿದೆ. ಭಾರತದಲ್ಲಿಯ ಪ್ರತಿಯೊಬ್ಬ ಸ್ತ್ರೀಪುರುಷರಲ್ಲಿ ಐಕ್ಯ ಸ್ನೇಹ ಭಾವನೆಯನ್ನು ಸತ್ಯ ಮತ್ತು ಅಹಿಂಸಾ ಮಾರ್ಗದಿಂದ ಪ್ರಸ್ಥಾಪಿಸುವುದಕ್ಕಾಗಿ ಅಂದಿನ ದಿನವನ್ನು ಮೀಸಲಾಗಿರಿಸಿದೆ. ಗಾಂಧೀಜಿಗೆ ಪ್ರಿಯವಾಗಿದ್ದ ಸಾಮೂಹಿಕ ಸೂತ್ರಯಜ್ಞ ಮತ್ತು ಸಾಮಾಜಿಕ ಸೇವಾಕಾರ್ಯದಲ್ಲಿ ಪ್ರತಿಯೊಬ್ಬ ಭಾರತೀಯನು ಈ ದಿನವನ್ನು ಕಳೆಯಬೇಕು. ಸಾರ್ವಜನಿಕ ಸಭೆಗಳನ್ನು ಪ್ರತಿಯೊಂದು ಸ್ಥಳದಲ್ಲಿ ಕೂಡಿಸಿ ಭಾಷಣ ಮುಂತಾದವುಗಳನ್ನು ಮಾಡದೆ ಕಾಂಗ್ರೆಸ ಕಾರ್ಯ ಸಮಿತಿಯವರು ರಾಷ್ಟ್ರಕ್ಕೆ ಕೊಟ್ಟ ಸಂದೇಶವನ್ನು ಓದಿ ಸ್ವೀಕರಿಸಬೇಕು. ಮೊದಲಿನ ಭೀಕರ ಸ್ಥಿತಿ ಇಂದು ಇಲ್ಲದಿದ್ದರೂ ಇನ್ನೂ ಹಲವಾರು ಮಹತ್ವದ ಸಮಸ್ಯೆಗಳನ್ನು ರಾಷ್ಟ್ರವು ಬಿಡಿಸಬೇಕಾಗಿದೆ. ಇದೆಲ್ಲದರಲ್ಲಿ ಭಾರತೀಯರು ಸರಕಾರಕ್ಕೆ ಸಕ್ರಿಯ ಸಹಾಯ ಸಲ್ಲಿಸುವದು ಕರ್ತವ್ಯವಾಗಿದೆ. ರಾಷ್ಟ್ರಪಿತನ ಸ್ಮರಣೆಯ ಇಂದಿನಂಥ ಪವಿತ್ರ ದಿನದಲ್ಲಿ ಪ್ರತಿಯೊಬ್ಬನು ರಾಷ್ಟ್ರವನ್ನು ಕಟ್ಟುವ ಈ ಮಹತ್ವದ ಕಾರ್ಯದಲ್ಲಿ ನಿರತನಾಗುವ ಪ್ರತಿಜ್ಞೆಯನ್ನು ತಗೆದುಕೊಳ್ಳತಕ್ಕದ್ದು.

ಈ ಸರ್ವೋದಯ ದಿನದ ಸಂಬಂಧದಲ್ಲಿ ಮಾಡತಕ್ಕ ಇನ್ನೊಂದು ಮಹತ್ವದ ಕೆಲಸವಿರುವುದು. ಮಹಾತ್ಮಾ ಗಾಂಧಿಯವರಿಗೆ ವಿಧಾಯಕ ಕಾರ್ಯಕ್ರಮವು ಅತ್ಯಂತ ಪ್ರೀತಿಯದಾಗಿದ್ದಿತೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ವಿಧಾಯಕ ಕಾರ್ಯಕ್ರಮದ ಯಶಸ್ಸಿಗಾಗಿ ಎಷ್ಟೊಂದು ಹಣವನ್ನು ವ್ಯಯ ಮಾಡಿದರೂ ಅದು ಅಪವ್ಯಯವಾಗದು. ಈ ವಿಧಾಯಕ ಕಾರ್ಯಕ್ರಮಕ್ಕಾಗಿ, ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯನ್ನು ಕೂಡಿಸಲಾಗುತ್ತಿದೆ. ಕಳೆದ ಒಂದು ವರುಷದಿಂದ ಈ ನಿಧಿಯನ್ನು ಕೂಡಿಸಲಾಗುತಿದ್ದರೂ ಎಣಿಸಿದಷ್ಟು ಅದರ ಪ್ರಗತಿಯಾಗದಿದ್ದುದು ಅತ್ಯಂತ ದುಃಖದ ಸಂಗತಿಯಾಗಿದೆ. ಅಂತೆಯೇ ನಿಧಿಯ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರು ಈ ಹದಿನೈದು ದಿನಗಳಲ್ಲಿ ಹೆಚ್ಚೆಚ್ಚು ಸ್ಮಾರಕ ನಿಧಿಯನ್ನು ಕೂಡಿಸಬೇಕೆಂದು ಬಿನ್ನವಿಸಿದ್ದಾರೆ. ಆದುದರಿಂದ ಪ್ರತಿಯೊಬ್ಬ ಭಾರತೀಯನು ಸ್ಮಾರಕ ನಿಧಿಗೆ ಕೈಲಾದಷ್ಟು ಹಣವನ್ನು ಕೊಟ್ಟು, ಸ್ವರಾಜ್ಯವನ್ನು ಸಂಪಾದಿಸಿಕೊಟ್ಟ ರಾಷ್ಟ್ರಪಿತನ ಋಣವನ್ನು ತೀರಿಸಬೇಕು. ಈ ನಿಧಿ ಸಂಗ್ರಹ ಕಾರ್ಯದಲ್ಲಿ ಅಲ್ಲಲ್ಲಿ ಏನೋ ತಪ್ಪುತಡಿ, ಇಲ್ಲವೆ ಅಕ್ರಮಗಳಾಗಿದ್ದರೂ ಅವುಗಳನ್ನು ಎಣಿಸದೆ ಈ ಸಂಗ್ರಹ ಕಾರ್ಯದಲ್ಲಿ ಪ್ರತಿಯೊಬ್ಬರೂ ಸಹಾಯ ಮಾಡಬೇಕು. ಈ ಸರ್ವೋದಯ ದಿನದೊಳಗಾಗಿ ಆದಷ್ಟು ಹೆಚ್ಚು ಹಣವನ್ನು ಸಂಗ್ರಹಿಸಬೇಕು. ಒಟ್ಟಾರೆ ಈ ಸರ್ವೋದಯ ದಿನವು ಮಹಾತ್ಮರ ನಿಷ್ಕಲಂಕ ಜೀವನಕ್ಕೆ ತಕ್ಕದಾದ ರೀತಿಯಲ್ಲಿ ಆಚರಿಸಲ್ಪಟ್ಟು ರಾಷ್ಟ್ರದ ಪ್ರಗತಿಯು ಭರದಿಂದ ಸಾಗಲಿ ಎಂದು ಹಾರಯಿಸುತ್ತೇವೆ

★

ಭಾರತದ ತಂದೆ ಗಾಂಧೀಜಿ ತೀರಿಕೊಂಡು ಜನೆವರಿ ೩೦ ಕ್ಕೆ ಒಂದು ವರ್ಷವಾಗುವದು. ಇದು ಅವರ ಭೌತಿಕ ಅವಶೇಷಗಳನ್ನು ಅಗ್ನಿಗರ್ಪಿಸಿದ ಸ್ಥಾನ——ಪವಿತ್ರ ಯಮುನಾ ನದೀ ತೀರದ ರಾಜಘಾಟ (ದಿಲ್ಲಿ). ಅಲ್ಲಿ ಭಾರತದ ರಾಷ್ಟ್ರಧ್ವಜ ಸದಾ ಕಾಲ ಪೂ ಹಾರಾಡುತ್ತಿರುತ್ತದೆ.

★



ವಾರದ ಸಿಂಹಾವಲೋಕನ

ಶ್ರೀ. ನಿಜಲಿಂಗಪ್ಪನವರು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರುವ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ಕಾಂಗ್ರೆಸ ಕಾರ್ಯ ಸಮಿತಿಯ ಸದಸ್ಯರಾಗಿ ಸೇರಿಸಿಕೊಳ್ಳಲ್ಪಟ್ಟದ್ದು ಅಭಿನಂದನೀಯ ಸಂಗತಿ. ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಗೆ ಮತ್ತೆ ಹಲವು ವರ್ಷಗಳ ನಂತರ ಸ್ಥಾನ ಸಿಕ್ಕದ್ದು ಸಂತೋಷದ ಸಂಗತಿಯು. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಿಲ್ಲದ್ದರಿಂದ ಎಲ್ಲ ದೃಷ್ಟಿಯಿಂದ ಅದರ ಹಿತಸಂಬಂಧಗಳು ಅಲಕ್ಷಿಸಲ್ಪಡುತಿವೆ. ತತ್ಪರಿಣಾಮವಾಗಿಯೇ ಕೇಂದ್ರ ಸರಕಾರದಲ್ಲಿ ಈಚೆಗಿನವರೆಗೆ ಮಂತ್ರಿತ್ವದ ಮರ್ಯಾದೆಯೂ ಸಿಕ್ಕಿರಲಿಲ್ಲ. ಅದೇರೀತಿಯಾಗಿ ಕಾಂಗ್ರೆಸ್ಸಿನ ಈ ಅರವತ್ತು ವರುಷಗಳ ಅವಧಿಯಲ್ಲಿ ಹಿಂದೆ ಮೂರು ನಾಲ್ಕು ಕನ್ನಡಿಗರಿಗೆ ಮಾತ್ರ ಕಾಂಗ್ರೆಸ ಕಾರ್ಯ ಸಮಿತಿಯಲ್ಲಿ ಸದಸ್ಯತ್ವವು ಸಿಕ್ಕಿದ್ದು ಈ ಸಲ ಮತ್ತೆ ಆ ಸದಸ್ಯತ್ವವು ಕನ್ನಡಿಗರಿಗೆ ಸಿಕ್ಕಿದ್ದು ಅತ್ಯಂತ ಅಭಿಮಾನದ ಸಂಗತಿಯಾಗಿದೆ. ಕನ್ನಡಿಗರು ಈ ರೀತಿ ಅಖಿಲ ಹಿಂದುಸ್ಥಾನದಲ್ಲಿ ಮನ್ನಣೆಯ ಸ್ಥಾನ ಪಡೆಯುತಿರುವುದು ಸ್ವತಂತ್ರ ಕರ್ನಾಟಕದ ಪ್ರಾಂತಸ್ಥಾಪನೆಯ ಶುಭ ಲಕ್ಷಣವೆಂದೇ ಹೇಳಬೇಕಾಗುವದು. ಶ್ರೀ. ನಿಜಲಿಂಗಪ್ಪನವರು ಕಾಂಗ್ರೆಸ ಪಾರ್ಲಮೆಂಟರಿ ಬೋರ್ಡಿನ ಸದಸ್ಯರಾಗಿಯೂ ಆರಿಸಲ್ಪಟ್ಟದ್ದಾರೆ. ಕಾಂಗ್ರೆಸ್ಸಿನ ನಿಷ್ಠಸೇವಕರೆಂದು ಹೆಸರು ಪಡೆದ ಶ್ರೀ. ನಿಜಲಿಂಗಪ್ಪನವರು ಕನ್ನಡಿಗರ ಉಜ್ವಲ ಪರಂಪರೆಗೆ ತಕ್ಕುದಾದ ಬಗೆಯಲ್ಲಿ ತಮ್ಮ ಅಧಿಕಾರ ಸ್ಥಾನಗಳ ಕಾರ್ಯವನ್ನು ನಿರ್ವಹಿಸುವರೆಂದು ನಂಬುತ್ತೇವೆ.

ಕಾಂಗ್ರೆಸ್ಸಿಗರಿಗೆ ಸೂಚನೆ

ರಾಷ್ಟ್ರಾಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯ, ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ಮತ್ತು ಸರದಾರ ವಲ್ಲಭಭಾಯಿ ಪಟೇಲ ಮೊದಲಾದವರು ಕಾಲ ಕಾಲಕ್ಕೆ ಮಾಡುವ ಭಾಷಣಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಸಲಹೆ ಸೂಚನೆಗಳನ್ನು ಕೊಡುತಲಿರುವರು. ಕಾಂಗ್ರೆಸ್ಸಿಗರಲ್ಲಿ ಮನೆ ಮಾಡಹತ್ತಿದ ಸ್ವಾರ್ಥ, ಅಧಿಕಾರಲೋಲುಪತೆ ಕಳ್ಳಪೇಟೆಯ ಮೋಹ ಮೊದಲಾದವನ್ನೆಲ್ಲ ಹೋಗಲಾಡಿಸಿ ಅವರು ವಿಶುದ್ಧ ಆಚರಣೆಯನ್ನಿಟ್ಟುಕೊಳ್ಳುವಂತೆ ನೋಡಿಕೊಳ್ಳಲು ಹಿರಿಯರು ಬದ್ಧಕಂಕಣರಾಗಿರುವರು. ಡಾ. ಪಟ್ಟಾಭಿಯವರು ಇತ್ತೀಚೆಗೆ ಕೊಟ್ಟ ಸೂಚನಾಪತ್ರವು ಅತ್ಯಂತ ಮಹತ್ವದ್ದಿದ್ದು ಪ್ರತಿಯೊಬ್ಬ ಕಾಂಗ್ರೆಸ್ಸಿಗನು ಆ ಸೂಚನೆಗಳನ್ನು ಮನದಟ್ಟುಮಾಡಿಕೊಂಡು ನಿತ್ಯದ ವ್ಯವಹಾರದಲ್ಲಿ ಅವನ್ನು ಅರಗಿಸಿಕೊಳ್ಳಬೇಕಾದುದು ಕರ್ತವ್ಯವಾಗಿದೆ. ಅಧಿಕಾರಸ್ಥಾನದಲ್ಲಿದ್ದ ಕಾಂಗ್ರೆಸ್ಸಿಗರು ಅಧಿಕಾರಿಗಳ ಮೇಲೆ ಪ್ರತ್ಯಕ್ಷ ಅಪ್ರತ್ಯಕ್ಷ ವರ್ಚಸ್ಸನ್ನು ಕೂಡಿಸಿ ಅನೇಕವಿಧವಾದ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವದಲ್ಲದೆ ಎರಡನೆಯವರಿಗೆ ಅನ್ಯಾಯವನ್ನೂ ಮಾಡುವರೆಂಬ ದೂರು ಅನೇಕ ಸಲ ಬಂದುದುಂಟು. ವಿವಿಧ ಸಮಿತಿಗಳಲ್ಲಿರುವ ಕಾಂಗ್ರೆಸ ಕಾರ್ಯಕರ್ತರಲ್ಲಿ ಹಲವರಾದರೂ ತಮ್ಮ ಆ ಸ್ಥಾನಗಳ ದುರ್ಲಾಭ ಪಡೆಯುತಿರುವರೆಂಬ ಕೂಗು ಅನೇಕ ದಿನಗಳಿಂದ ಕೇಳಬರುತಿದೆ. ರಾಷ್ಟ್ರಾಧ್ಯಕ್ಷರ ಕಿವಿಗೂ ಇದು ಮುಟ್ಟಿದ್ದರಿಂದ ಅವರು ಸೂಚನಾಪತ್ರದಲ್ಲಿ ಈ ವಿಷಯವನ್ನೆತ್ತಿ ಇಂಥ ಸ್ಥಳಗಳಲ್ಲಿ ಕಾಂಗ್ರೆಸ್ಸಿಗರು ಇರಕೂಡದು ಎಂದು ವಿಧಿಸುವಪ್ರಸಂಗವನ್ನು ತರಬೇಡಿರಿ ಎಂದು ಸೂಚಿಸಿದ್ದಾರೆ. ದಿವಾಣಿ ಫೌಜದಾರಿ ಖಟ್ಲೆಗಳಲ್ಲಿಯೂ ಅಧಿಕಾರಿಗಳ ಮೇಲೆ ಅನ್ಯಾಯದಿಂದ ವರ್ಚಸ್ಸು ಕೂಡಿಸಬಯಸುವ ಕಾಂಗ್ರೆಸ್ಸಿಗರೂ ಇರುವರು. ಇಂಥವರು ಕೂಡ ಈ ಸಂದರ್ಭದಲ್ಲಿ ಕರ್ತವ್ಯವನ್ನು ತಿಳಿದುಕೊಂಡು ವರ್ತಿಸಬೇಕಾಗಿದೆ. ಅಂಥ ಮಹತ್ವದ ಕೆಲಸವಿಲ್ಲದೆ ದೊಡ್ಡದೊಡ್ಡ ಅಧಿಕಾರಿಗಳನ್ನು ಭೆಟ್ಟಿಯಾಗುವದು, ಜನತೆಯ ಮೇಲೆ ಮತ್ತು ಕೆಳಗಿನ ಅಧಿಕಾರಿಗಳ ಮೇಲೆ ವರ್ಚಸ್ಸು ಕೂಡಿಸಲಿಕ್ಕೊ ಏನೊ ಎಂಬಂತೆ ಪತ್ರಿಕೆಗಳಲ್ಲಿ ಅದರ ಪ್ರಚಾರ ಮಾಡುವದು ಕಂಡುಬರುವದು ಇದೆಲ್ಲ ಉಚಿತವಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇದರಿಂದ ಕಾಂಗ್ರೆಸ್ಸಿನ ಹಿಂದಿನ ನಿಷ್ಕಲಂಕ ಕೀರ್ತಿಗೆ ಕಲಂಕಬರುವದು. ಇನ್ನಾದರೂ ಕಾಂಗ್ರೆಸ್ಸಿಗರೆಲ್ಲ ರಾಷ್ಟ್ರಾಧ್ಯಕ್ಷರು ಆದೇಶಿಸಿದಂತೆ ತಮ್ಮ ಕರ್ತವ್ಯವನ್ನು ತಿಳಿದುಕೊಂಡು ತಮ್ಮ ಶೀಲ ಚರಿತ್ರಗಳನ್ನು ವಿಶುದ್ಧಗೊಳಿಸಿಕೊಂಡು ತಮ್ಮ ಮತ್ತು ದೇಶದ ಕೀರ್ತಿಯನ್ನು ನೊಳಗಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ಚೀನದಲ್ಲಿ ಶಾಂತಿಸಂಧಾನ

ಚೀನದಲ್ಲಿ ಯಾದವೀ ಯುದ್ಧವು ಭೀಕರ ಸ್ವರೂಪವನ್ನು ತಾಳಿ ಇಡೀ ರಾಷ್ಟ್ರವೆ ಹಾಳಾಗುವ ದುಸ್ಥಿತಿ ಪ್ರಾಪ್ತವಾಗಿತ್ತು. ಇದನ್ನು ತಪ್ಪಿಸುವುದಕ್ಕಾಗಿ ಚೀನ ಸರಕಾರವಿಂದು ಶಾಂತಿ ಸಂಧಾನಕ್ಕೆ ಸಿದ್ಧವಾಗಿದೆ. ಸಂಧಾನದ ಮಾತುಕತೆಗಳ ಬಗ್ಗೆ ಪ್ರತಿನಿಧಿಗಳನ್ನು ನೇಮಿಸಬೇಕೆಂಬ ಅಭಿಪ್ರಾಯವುಳ್ಳದ್ದಾಗಿದೆ ಸರಕಾರವು ಕಮ್ಯುನಿಸ್ಟರೊಡನೆ ಸಂಧಾನ ನಡೆಸಲು ಒಬ್ಬ ಶಾಂತಿದೂತನನ್ನೂ ಇಷ್ಟರಲ್ಲಿಯೆ ಅವರೆಡೆ ಕಳಿಸಲಿರುವದೆಂದು ತಿಳಿಯುತ್ತದೆ. ಕಮ್ಯುನಿಸ್ಟರು ಶಾಂತಿಗಾಗಿ ಈ ಆಶಯದ ಕರಾರುಗಳನ್ನು ಹಾಕಿರುವರು: ಯುದ್ಧಾಪರಾಧಿಗಳನ್ನು ಶಿಕ್ಷಿಸಬೇಕು, ಸದ್ಯದ ನಾಟಕೀ ರಾಜ್ಯಘಟನೆಯನ್ನು ರದ್ದುಪಡಿಸಬೇಕು, ಕೌಮಿಂಟಂಗವು ಸ್ಥಾಪಿಸಿದ ಕಾಯದೆ ಸಂಸ್ಥೆಗಳನ್ನು ವಿಸರ್ಜಿಸಬೇಕು, ಸೈನ್ಯ ಪಡೆಯನ್ನು ಪುನರ್ಘಟಿಸಬೇಕು ಬಂಡವಲುದಾರರ ಬಂಡವಲನ್ನು ಜಪ್ತಮಾಡಬೇಕು, ಭೂಸುಧಾರಣೆ ಮಾಡಬೇಕು ಮತ್ತು ಚೀನೀ ಸರಕಾರದ ಒಡಂಬಡಿಕೆಗಳನ್ನು ರದ್ದುಪಡಿಸಬೇಕು. ಕಮ್ಯುನಿಸ್ಟ ಧುರೀಣರಾದ ಮಾವೊತ್ಸೆಟಂಗರು ಈ ಕರಾರುಗಳನ್ನು ಆಕಾಶವಾಣಿ ಮೂಲಕ ಬಿತ್ತರಿಸುತ್ತ ಕೌಮಿಂಟಂಗದ ಸೈನ್ಯವನ್ನು ನಿರ್ನಾಮ ಮಾಡುವ ಶಕ್ತಿಯು ಕಮ್ಯುನಿಸ್ಟರಿಗಿದೆಯೆಂದು ಹೇಳಿದರು. ಉಭಯ ಪಕ್ಷದವರು ತಮ್ಮ ತಮ್ಮ ಶಕ್ತಿಯ ಪ್ರಶಂಸೆಯನ್ನೆ ಮಾಡುತ್ತ ಕೂಡ್ರದೆ ಇಡೀ ರಾಷ್ಟ್ರಕ್ಕೆ ಬೇಕಾಗಿರುವ ಶಾಂತಿ ಪ್ರಸ್ಥಾಪನೆಗಾಗಿ ಪ್ರಯತ್ನಿಸುವದು ಕರ್ತವ್ಯವಾಗಿದೆ.

ಇನ್ನೂ ಈ ವರ್ಣದ್ವೇಷವೇ ?

ಜಗತ್ತಿನಲ್ಲಿಯ ಜನರೆಲ್ಲ ಸಮಾನರು ಎಲ್ಲೆಡೆಯಲ್ಲಿಯೂ ಶಾಂತಿಯನ್ನು ಪ್ರಸ್ಥಾಪಿಸಬೇಕು ಎಂದು ಮುಂತಾಗಿ ಯುಕ್ತ ರಾಷ್ಟ್ರಸಂಘವು ಒಂದೇ ಸವನೆ ಕಂಠಶೋಷ ಮಾಡುತ್ತ ನಡೆದಿದ್ದರೂ ಬಿಳಿಯರ ವರ್ಣದ್ವೇಷ ಭೂತವು ಇನ್ನೂ ಮಾಯವಾಗದಿದ್ದುದು ಶೋಚನೀಯವಾಗಿದೆ. ಬ್ರಿಟಿಶ ಕಾಮನ್‌ವೆಲ್ಥ ರಾಷ್ಟ್ರಗಳ ಸದಸ್ಯ ರಾಷ್ಟ್ರವಾದ ದಕ್ಷಿಣ ಆಫ್ರಿಕಾ ಸರಕಾರವು ಇಂದು ಅಲ್ಲಿರುವ ಭಾರತೀಯರನ್ನು ಬಗೆಬಗೆಯಿಂದ ಛಲಿಸುತಿರುವದು ವರ್ಣದ್ವೇಷದ ಮದಾಂಧತನದ ನಿದರ್ಶನವಾಗಿದೆ. ನಾತಾಳದ ರಾಜಧಾನಿಯಾದ ಡರ್ಬಾನದಲ್ಲಿ ಒಂದು ಕ್ಷುಲ್ಲಕ ಕಾರಣಕ್ಕಾಗಿ ನಡೆದ ಭಾರತೀಯರ ಹತ್ಯಾಕಾಂಡವನ್ನು ನೋಡಿದರೆ ಯಾರಿಗಾದರೂ ತ್ವೇಷವುಂಟಾಗದಿರದು. ಅನೇಕ ವರ್ಷಗಳ ಹಿಂದೆ ಆಫ್ರಿಕೆಗೆ ಹೋಗಿ ತಮ್ಮ ಬೆವರು ಸುರಿಸಿ ಅಲ್ಲಿನ ವಿವಿಧ ಸಂಪತ್ತಿಯನ್ನು ಬಹಳ ಮಟ್ಟಿಗೆ ಹೆಚ್ಚಿಸಿದ ಶ್ರೇಯಸ್ಸನ್ನು ಪಡೆದ ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರನ್ನು ಅಲ್ಲಿಯ ಬಿಳಿ ಸರಕಾರದವರು ವಿವಿಧ ರೀತಿಯಿಂದ ಛಲಿಸುತಿರುವರು. ಒಡಕು ಹುಟ್ಟಿಸಿ ಆಳುವ ಧೋರಣವನ್ನು ಆ ಸರಕಾರವು ತಾಳಿ ಆಫ್ರಿಕೆಯಲ್ಲಿಯ ಮೂಲನಿವಾಸಿಗಳನ್ನು ಎಬ್ಬಿಸಿ ಅವರಿಂದ ಭಾರತೀಯರನ್ನು ಛಲಿಸುವ ಉಪಕ್ರಮವನ್ನು ಕೈಕೊಂಡಿದೆ. ಡರ್ಬಾನದಲ್ಲಿ ನಡೆದ ಛಲನೆಯಿಂದ ಇಡೀ ಜಗತ್ತಿನ ಲಕ್ಷ್ಯವೇ ಅತ್ತ ವೇಧಿಸಿದೆ. ಬ್ರಿಟನ್‌ವೂ ಡಾ. ಮಾಲನ್‌ರ ಸರಕಾರದ ಈ ಅನ್ಯಾಯ ಧೋರಣವನ್ನು ಬಿಡಿಸಲು ಸಮರ್ಥವಾಗಿಲ್ಲ. ಕಾಮನ್‌ವೆಲ್ಥ ರಾಷ್ಟ್ರಗಳೆಲ್ಲ ಕೂಡಿ ಆಫ್ರಿಕೆಯಲ್ಲಿಯ ಬೆಳೆಯುವ ಈ ಒಳಸಂಚನ್ನು ಮೂಲದಲ್ಲಿಯೇ ಕತ್ತಿ ಹಾಕುವದು ಅತ್ಯವಶ್ಯವಾಗಿದೆ.

ಸರ್ವೋದಯ ದಿನ

(ಧುಳೇದಲ್ಲಿ ಗಾಂಧೀ ತತ್ವಜ್ಞಾನ ಸಂಸ್ಥೆಯ ಆಶ್ರಯದಲ್ಲಿ ಜನೇವರಿ ೭ ನೇ ತಾರೀಕು ಸೇರಿದ ಪ್ರಾರ್ಥನಾ ಸಭೆಯಲ್ಲಿ ಶ್ರೀ ವಿನೋಬಾ ಇವರು ಸರ್ವೋದಯ ದಿನದ ಕಾರ್ಯಕ್ರಮವನ್ನು ವಿವರಿಸಿದರು.)

ಗಾಂಧೀಜಿ ಮರೆಯಾದ ದಿನ ಅಂದರೆ ಶುಕ್ರವಾರ ದಿನ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸುವುದು ಹಲವು ಕಡೆ ವಾಡಿಕೆಯಾಗಿದೆ. ಪ್ರಾರ್ಥನೆಯು ಪ್ರತಿ ಮನೆಯಲ್ಲಿ ಪ್ರತಿ ಗುಂಪಿನಲ್ಲಿ ಜೀವನದಲ್ಲಿ ಮಾಡತಕ್ಕ ಒಂದು ಕಾರ್ಯಕ್ರಮವಾಗತಕ್ಕದ್ದು. ಆದರೆ ಸ್ವಯಂ ಇಟ್ಟುಕೊಂಡ ಈ ಕಾರ್ಯಕ್ರಮವನ್ನು ಕಾರ್ಯಬಾಹುಳ್ಯದ ಮೂಲಕ ಆಚರಿಸಲು ಕಠಿನವೆನಿಸಹತ್ತಿದರೆ ವಾರಕ್ಕೊಂದು ಸಲವಾದರೂ ಅವರು ಒಂದೆಡೆ ಸಮ್ಮಿಲಿತರಾಗತಕ್ಕದ್ದು—

ಆದರೆ ಇಂದು ನಾನು ಬೇರೆ ವಿಷಯದ ಬಗ್ಗೆ ಮಾತಾಡಬಯಸುವೆ. ಜನೆವರಿ ಮೂವತ್ತನೆಯ ತಾರೀಕು ಗಾಂಧೀಜಿಯ ಕೊನೆಯ ಪ್ರಯಾಣ ದಿನವು. ಅಂದು ಅವರ ಮೊದಲನೆಯ ಪುಣ್ಯತಿಥಿ. ದೇಶದಲ್ಲಿಯ ಪ್ರತಿಯೊಂದು ಹಳ್ಳಿಯಲ್ಲಿ ಅಂದು ಒಂದಿಲ್ಲೊಂದು ಬಗೆಯ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗುವದು; ಹಾಗೆ ಮಾಡುವದು ನ್ಯಾಯ್ಯವೇ ಅಗಿದೆ. ಪುಣ್ಯಪುರುಷರ ಸ್ಮರಣೆಯೆಂದರೆ ನಮ್ಮಂಥ ಪಾಮರರಿಗೆ ಒಂದು ಬಗೆಯ ಸ್ಫೂರ್ತಿಪ್ರದ ಶಕ್ತಿಯೇ: ಇಂಥ ಮಹಾತ್ಮರ ಪುಣ್ಯಸ್ಮರಣೆ ಮಾಡುವದು ಮತ್ತಷ್ಟು ಅವಶ್ಯವೇ. ಆದರೆ ಇದಕ್ಕೆ ಗಾಂಧಿದಿನವೆಂದು ನಾನು ಕರೆಯದೆ ಸರ್ವೋದಯ ದಿನವೆಂದು ಕರೆಯುವೆ. ಏಕೆಂದರೆ ಯಾವುದೊಂದು ವ್ಯಕ್ತಿಯನ್ನು ಲಕ್ಷ್ಯವಾಗಿಟ್ಟುಕೊಳ್ಳದೆ ಧ್ಯೇಯವನ್ನು ಮುಂದಿಟ್ಟುಕೊಂಡು ನಡೆಯುವದು ಹೆಚ್ಚು ಸಹಾಯಕವಾದುದು. ಕೆಲ ದಿನಗಳ ಹಿಂದೆ ದಾದೂ ಸಮಾಜದ ಒಂದು ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಅಲ್ಲಿ ನನ್ನ ಗೆಳೆಯರಿಗೆ ನಾನು ಹೇಳಿದೆ. "ದಾದೂನ ಹೆಸರು ಮಾಯವಾಗಿ ಪರಮಾತ್ಮನ ಹೆಸರು ಸ್ಥಿರವಾಗಿ ಉಳಿಯಲಿ" ಎಂದು. ಇಲ್ಲಿಯೂ ಅದನ್ನೆ ನಾನು ಮತ್ತೆ ಹೇಳಬಯಸುವೆ. ಗಾಂಧೀಜಿ ಈ ಬಗ್ಗೆ ಬಹಳ ದಕ್ಷತೆ ವಹಿಸುತಿದ್ದರು. ಅವರ ಜನ್ಮದಿನಕ್ಕೆ ಗಾಂಧೀ ಜಯಂತಿ ಎಂದು ಕರೆಯಬೇಕೆಂದು ಜನ ಬಹಳ ಪ್ರಯತ್ನಪಟ್ಟರು ಆದರೆ ಅದಕ್ಕೆ ಚರಖಾ ಜಯಂತಿ ಎಂದು ಕರೆಯಲು ಗಾಂಧೀಜಿ ಸಲಹೆ ಇತ್ತರು. ಏಕೆಂದರೆ ಹಾಗೆ ಕರೆಯುವದರಿಂದ ವ್ಯಕ್ತಿಯ ಸ್ಮರಣೆಗಿಂತ ಹೆಚ್ಚು ಮಹತ್ವದ್ದಾದ ಒಂದು ತತ್ವವನ್ನು ವ್ಯಾವಹಾರಿಕ ರೀತಿಯಲ್ಲಿ ಮನ್ನಿಸಿದಂತಾಗುವದೆಂದು ಅವರ ಅಭಿಪ್ರಾಯವಾಗಿತ್ತು. ಅವರು ದಕ್ಷಿಣ ಆಫ್ರಿಕೆಯಿಂದ ಬರೆದಿದ್ದ ಪತ್ರಗಳಲ್ಲಿ ಒಂದನ್ನು ತೀರ ಇತ್ತೀಚೆ ನೋಡುವ ಪ್ರಸಂಗ ನನಗೆ ಬಂದಿತು. ಅದರಲ್ಲಿ ಅವರು "ನನ್ನ ಹೆಸರು ಮಾಯವಾದ ಬಳಿಕವೇ ನನ್ನ ಧ್ಯೇಯವು ಪ್ರಗತಿ ಹೊಂದುವದು" ಎಂದು ಬರೆದಿದ್ದಾರೆ. "ನನ್ನ ಹೆಸರು ಅಳಿದು ಹೋಗುವಂತೆ ವರವನ್ನು ದಯಪಾಲಿಸು" ಎಂದು ಜ್ಞಾನೇಶ್ವರರು ಬೇಡಿಕೊಂಡಿರುವರು. ತಮ್ಮ ಹೆಸರು ದೆಸೆ ಮತ್ತು ದೇಹ ಕೂಡ ಮಾಯವಾಗಿ ಹೋಗಲಿ ಎಂದು ಅವರು ಬಯಸಿದರು. ಮನುಷ್ಯ ಸಾಯಲೇ ಬೇಕಾದ್ದರಿಂದ ಅವನ ತತ್ವಗಳು ಮಾತ್ರ ಉಳಿಯಲಿ. ವ್ಯಕ್ತಿಗಳ ಸ್ಮರಣೆಯನ್ನೆ ನಾವು ಮಾಡುತ್ತ ನಡೆದರೆ, ಗೊಂದಲದಲ್ಲಿ ಬೀಳುವ ಸಂಭವವಿದೆ, ಸಂಕುಚಿತ ಭಾವನೆ ನಮ್ಮಲ್ಲಿ ಬೆಳೆದು ಸಮಾಜವು ಛಿನ್ನವಿಚ್ಛಿನ್ನವಾಗಿ ಹೋಗಬಹುದು. ಈಗಾಗಲೆ ನಮ್ಮ ದೇಶದಲ್ಲಿ ಒಂದಕ್ಕಿಂತ ಹೆಚ್ಚು ಜೀವಂತ ಅವತಾರಗಳು ಇರುವವು. ಅವರು ಜೀವಂತ ಇರುವ ಕಾಲದಿಂದಲೆ ಭಕ್ತರು ಅವರ ಪೂಜೆಯನ್ನು ಮಾಡುತ್ತ ಬಂದಿರುವರು. ಇದು ಯಾವ ರೀತಿಯಿಂದಲೂ ನ್ಯಾಯ್ಯವಲ್ಲ.

ತಾವೊಬ್ಬ ಸಾಮಾನ್ಯ ಮಾನವ ಪ್ರಾಣಿಯೆಂದು ಗಾಂಧೀಜಿ ತಿಳಿದುಕೊಂಡಿದ್ದರು. ಅವರೂ ಒಬ್ಬ ಮನುಷ್ಯರೆಂದೇ ನಾವು ಭಾವಿಸಿಕೊಳ್ಳುವಾ. ಅದರಲ್ಲಿ ಗಾಂಭೀರ್ಯವಿದೆ, ಗೌರವವಿದೆ. ಆ ದಿನ ಪವಿತ್ರ ನಾಮಸ್ಮರಣೆ ಮಾಡುವದೇ ಆದರೆ, ಆ ಘಾತಕನ ಗುಂಡು ಗಾಂಧೀಜಿಯವರ ಎದೆಯಲ್ಲಿ ನಡುವಾಗ ಅವರ ಬಾಯಿಂದ ಯದೃಚ್ಛೆಯಿಂದ ಮತ್ತು ಭಕ್ತಿಪೂರ್ವಕವಾಗಿ ಯಾವ ಪವಿತ್ರ ನಾಮವು ಹೊರಹೊಮ್ಮುತಿದ್ದಿತೋ ಅದೇ ನಾಮವನ್ನು ನಾವೇಕೆ ಆರಿಸಿಕೊಳ್ಳಬಾರದು? ಆದುದರಿಂದ ಅವರ ವರ್ಷಾಂತ್ಯ ದಿನಕ್ಕೆ ನಾನು ಸರ್ವೋದಯ ದಿನವೆಂದು ಕರೆಯುವೆ. ಕಾರ್ಯಕಾರಿಯಾದ ಧ್ಯಾನದಲ್ಲಿಯೆ ನಾವು ಆದಿನವನ್ನು ಕಳೆಯುವುದರಿಂದ ಹೆಚ್ಚು ಕಲ್ಯಾಣವಾಗಬಲ್ಲುದು. ನಮ್ಮ ಜೀವನದಲ್ಲಿ ನಿಷ್ಕ್ರಿಯ ಧ್ಯಾನಾಚರಣೆ ಬೇಕಾದಷ್ಟಿದೆ. ಕಾರ್ಯಮೂಲಕವೆ ಪೂಜಿಸಿರಿ, ಎಂಬುದು ಎಲ್ಲ ಧರ್ಮಗಳ ಸಂದೇಶ. ಆದರೆ ನಾವದನ್ನು ಮರೆಯುತಿದ್ದೇವೆ.

ಗಾಂಧೀಜಿ ಸಾಕ್ಷಾತ್ತಾಗಿ ಸಂದೇಶವಾಗಿದ್ದರು. ನಮ್ಮ ಜೀವನದಲ್ಲಿ ಅದನ್ನು ಅರಗಿಸಿಕೊಳ್ಳಬೇಕು. ಆದುದರಿಂದ ಆ ದಿನ ಎಲ್ಲರೂ ಸಾರ್ವಜನಿಕವಾಗಿ ಭಂಗಿ ಮತ್ತು "ಸಫಾಯಿ" ಕೆಲಸವನ್ನು ಮಾಡಬೇಕೆಂದು ನಾನು ಸೂಚಿಸುತ್ತೇನೆ. ನಾವೆಲ್ಲರೂ ಕಸಗುಡಿಸುವವರಾಗುವಾ ಮತ್ತು ದೇಶದಲ್ಲಿಯ ಹೊಲಸು ಮತ್ತು ಕೊಳೆಯನ್ನು ಹೋಗಲಾಡಿಸುವಾ. ಕಸಗುಡಿಸುವವರು ಅಸ್ಪೃಶ್ಯರು ಎಂದು ಭಾವಿಸಿ ನಾವು ಭಯಂಕರ ಪಾಪ ಮಾಡಿದ್ದೇವೆ ಮತ್ತು ಆದರಿಂದ ಯಾವ ನಾಗರಿಕ ರಾಷ್ಟ್ರದಲ್ಲಿಯೂ ಕಾಣಸಿಗಲಾರದಷ್ಟು ನಮ್ಮ ದೇಶದಲ್ಲಿ ಕೊಳೆಯನ್ನು ತುಂಬಿದ್ದೇವೆ. ಅದಕ್ಕಾಗಿ ನಾವು ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬೇಕಾಗಿದೆ. ಎಲ್ಲ ಹಿರಿಕಿರಿಯರು ವಿನಮ್ರರಾಗಿ, ಜಗತ್ತಿನಲ್ಲಿ "ಪಾಮರರೊಳು ಪಾಮರ ನಾನೆಲೊ" ಎಂಬ ಭಾವನೆಯಿಂದ ನಾವೀ ಕಾರ್ಯವನ್ನು ಮಾಡತಕ್ಕದ್ದು.

ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವದು ಆತ್ಯವಶ್ಯವಾಗಿದೆ. ಆದುದರಿಂದ ಪ್ರತಿಯೊಬ್ಬನು ನೂಲು ತೆಗೆಯಬೇಕು ಮತ್ತು ನಮ್ಮೆಲ್ಲರ ಹೃದಯಗಳು ಪ್ರೇಮದಿಂದ ಬದ್ಧವಾಗಿ ಕೂಡಿಕೊಳ್ಳಲಿ. ನೂಲುವದು ಬೇನೆಯಿಂದ ಬಳಲುವವರು ಹೊರತು ಪ್ರತಿಯೊಬ್ಬ ಹಿರಿಯ ಕಿರಿಯರು ಮಾಡತಕ್ಕ ಕರ್ತವ್ಯವು. ಆದುದರಿಂದ ಅದನ್ನು ಉತ್ಪಾದನೆಯ ಉದ್ಯೋಗದಲ್ಲಿ ಪರಿಗಣಿಸಲಿಕ್ಕೆ ಬೇಕು.

ಮೇಲಿನ ಎರಡು ಕ್ರಿಯಾತ್ಮಕವಾದ ಕಾರ್ಯಕ್ರಮಗಳು. ಇವಲ್ಲದೆ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸಬೇಕು, ಅವುಗಳಲ್ಲಿ ನಾವೆಲ್ಲರೂ ಸೇರತಕ್ಕದ್ದು ಮತ್ತು ಪರಮಾತ್ಮನ ಸ್ಮರಣೆ ಮಾಡಿ ನಮ್ಮ ಅಂತಃಕರಣಗಳನ್ನು ವಿಶುದ್ಧಗೊಳಿಸಿ ನಮ್ಮ ಹೃದಯಗಳನ್ನು ಒಂದುಗೂಡಿಸಿಕೊಳ್ಳಬೇಕು.

ಈ ಕಾರ್ಯಕ್ರಮದಲ್ಲಿ ಸರ್ವೋದಯ ಧ್ಯೇಯದ ನಿದಿಧ್ಯಾಸವನ್ನು ಕೂಡಿಸಬೇಕು. ನಿದಿಧ್ಯಾಸದ ಮಾರ್ಗಗಳು ಒಂದಕ್ಕಿಂತ ಹೆಚ್ಚು ಇವೆ. ಸರ್ವೋದಯ ಶಬ್ದವು ಅತ್ಯಂತ ಅರ್ಥಪೂರ್ಣವಾಗಿದ್ದು ಅವರಲ್ಲಿ ಬೇಕಾದಷ್ಟು ಆಳವಾಗಿ ವಿಹರಿಸಬಲ್ಲೆವು. ಉದಾಹರಣಾರ್ಥವಾಗಿ ಯಾವದೊಂದೇ ವರ್ಗದ ಜನರ ಉದ್ಧಾರಕ್ಕಾಗಿ ಪ್ರಯತ್ನಿಸುವದು ನಮ್ಮ ಧ್ಯೇಯವಲ್ಲ ಎಂಬುದು ನಮ್ಮ ಸ್ಮರಣೆಯಲ್ಲಿ ಇರಬಹುದು. ಸರ್ವ ಮಾನವ ಪ್ರಪಂಚದ ಹಿತಕ್ಕಾಗಿಯೆ ನಾವು ದುಡಿಯುತ್ತೇವೆ. ತತ್ವತಃ ಸತ್ಯವಾಗಿರುವ ಹಿತಸಂಬಂಧಗಳಲ್ಲಿ ಯಾವದೇ ಬಗೆಯ ತಿಕ್ಕಾಟವಿಲ್ಲ ಎಂಬುದನ್ನೂ ನಾವು ನೆನಪಿನಲ್ಲಿಡತಕ್ಕದ್ದು. ಆಯಾವ್ಯಕ್ತಿಗಳ ಮಾನಸಿಕ ಬೆಳವಣಿಗೆಗೆ ಅನುಸಾರವಾಗಿ ಸುಖದ ಕಲ್ಪನೆಯಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿರುವವು. ಚಿಂತನೆಯ ಮೂರನೆಯ ಮಾರ್ಗವೆಂದರೆ ಜೀವನದ ಏಕತೆಯನ್ನು ತಿಳಿದುಕೊಳ್ಳುವದು ಮತ್ತು ಆದುದರಿಂದಲೆ ಸ್ವಾರ್ಥವನ್ನು ಮರೆತು ಎರಡನೆಯವರ ಸೇವೆಯಲ್ಲಿಯೇ ನಿರತರಾಗುವದು ಕರ್ತವ್ಯವಾಗಿದೆ. ಸತ್ಯಪ್ರತಿಜ್ಞರಾಗುವದು ಮತ್ತು ಎರಡನೆಯವರ ಮೇಲೆ ಆಕ್ರಮಣ ಮಾಡದಿರುವುದು ಇದಕ್ಕೆ ಮುಖ್ಯ ಸಾಧನಗಳೆಂಬುದು ಇದರಿಂದ ಹೊರಡತಕ್ಕ ದುರ್ನಿವಾರ್ಯವಾದ ನಿಷ್ಪತ್ತಿ. ಸಂಯಮವನ್ನೂ ಅನುಷ್ಠಾನದಲ್ಲಿ ಇಳಿಸಬೇಕು. ಈ ರೀತಿಯಾಗಿ ಈ ದಿನವು ಸರ್ವೋದಯ ಚಿಂತನೆಯಲ್ಲಿಯೇ ಕಳೆಯಲಿ.

ಪರಮಾತ್ಮನು ಕರುಣಾಪೂರ್ಣನು. ಯುಗಯುಗಗಳಿಂದ ಅವನು ಕಾಲಕಾಲಕ್ಕೆ ನಮ್ಮ ದೇಶದಲ್ಲಿ ಸಾಧುಸಂತರನ್ನು ಕಳಿಸುತಿರುವನು. ಇಂದಿನ ನಿರಾಶಾಮಯ ಸ್ಥಿತಿಯಲ್ಲಿಯೂ ಅವನು ನಮ್ಮಲ್ಲಿ ಅನೇಕ ಸತ್ಪುರುಷರ ಮಳೆಗರೆದಿರುವನೆಂದು ಹೇಳಬಹುದು. ನಮ್ಮ ಹೃದಯವನ್ನು ತೆರೆದಿಟ್ಟಾದರೆ ಅವರ ಚೈತನ್ಯವು ಒಳಹೊಕ್ಕು ನಮ್ಮ ಜೀವನವನ್ನೇ ಸಾರ್ಥವಿಸುವದು. ಪರಮಾತ್ಮನ ಅನುಗ್ರಹವಿದ್ದರೆ ಯಾವುದು ತಾನೇ ಅಶಕ್ಯ?

ಡಿ. ಎಂ.

(ಹಿಂದುಸ್ತಾನೀ ಮೂಲದಿಂದ ಅನುವಾದಿತ)

ಸರ್ವೋದಯ ದಿನಕ್ಕಾಗಿ ಕಾಂಗ್ರೆಸ್ ಸಂದೇಶ

ಕಾಂಗ್ರೆಸ ಕಾರ್ಯ ಸಮಿತಿಯವರು ಸರ್ವೋದಯ ದಿನಾಚರಣೆಯ ಸಂಬಂಧದಲ್ಲಿ ಈ ಕೆಳಗಿನ ಸಂದೇಶವನ್ನು ಬಿತ್ತರಿಸಿದ್ದಾರೆ:

ಮಹಾತ್ಮಾ ಗಾಂಧಿಯವರ ನಿಧನವಾಗಿ ಒಂದು ವರ್ಷವಾಗುತ್ತ ಬಂದಿದೆ. ಅವರ ಪ್ರಥಮ ಪುಣ್ಯತಿಥಿಯ ದಿನವಾದ ಜನೆವರಿ ೩೦ ನ್ನು ದೇಶದಲ್ಲೆಲ್ಲ "ಸರ್ವೋದಯ ದಿನ" ಎಂದು ಆಚರಿಸತಕ್ಕದ್ದು. ಗಾಂಧೀಜಿ ಉಪದೇಶಿಸಿದ ಮತ್ತು ತಮ್ಮ ಜೀವಮಾನವೆಲ್ಲ ಆಚರಿಸಿ ತೋರಿಸಿದ ಧ್ಯೇಯಗಳಿಗಾಗಿ ಅಂದಿನ ದಿನ ಮೀಸಲಾಗಿರತಕ್ಕದ್ದು. ಎಂದಿಗಿಂತಲೂ ಹೆಚ್ಚಾಗಿ ಅಂದು, ಸತ್ಯ ಅಹಿಂಸೆಗಳ ಮೂಲಕವಾಗಿ ನರನಾರಿಯರೆಲ್ಲರಲ್ಲಿ ಐಕ್ಯ ಸೌಹಾರ್ದಗಳನ್ನು ನೆಲೆಗೊಳಿಸಬೇಕೆಂಬ ಗಾಂಧೀಜಿಯ ಮಹಾ ಸಂದೇಶದತ್ತ ರಾಷ್ಟ್ರದ ಚಿತ್ತವು ವೇಧಿಸಬೇಕು. ಆ ದಿನವನ್ನು ಅವರ ಪವಿತ್ರ ಜೀವಂತ ಸ್ಮೃತಿಗೆ ಒಪ್ಪುವಂತೆ ಪ್ರಾರ್ಥನಾಪೂರ್ವಕವಾಗಿ ಆಚರಿಸಬೇಕಲ್ಲದೆ ಸೂತ್ರಯಜ್ಞ ಮತ್ತು ಸಮಾಜ ಸೇವೆಗಳಲ್ಲಿ ಕಳೆಯಬೇಕು. ಸಾರ್ವಜನಿಕ ಸಭೆಗಳನ್ನೂ ಸೇರಿಸಬಹುದು. ಅಲ್ಲಿ ಕೆಳಗಿನ ಸಂದೇಶವನ್ನು ಓದಿ ಹೇಳಬೇಕು:

ಮಹಾತ್ಮರ ಗುಣಗಾನ

"ಪೀಳಿಗೆ ಪೀಳಿಗೆಗಳಿಂದ ನಡೆದ ಸ್ವಾತಂತ್ರ್ಯ ಸಮರದ ಸುದೀರ್ಘ ಅವಧಿಯಲ್ಲಿ ಭಾರತಕ್ಕೆ ದುಃಖಗಳಂತೆ ಸಾಫಲ್ಯಗಳ ಮತ್ತು ಅನೇಕ ವಿಜಯಗಳಂತೆ ಪರಾಭವಗಳ ಅನುಭವ ಬಂದಿದೆ. ಆದರೆ ರಾಷ್ಟ್ರಪಿತನ ಅಧಿನೇತೃತ್ವದ ಮೂಲಕ, ದುಃಖಗಳು ಪ್ರಾಯಶ್ಚಿತ್ತರೂಪವಾಗಿ ಜನರ ಹೃದಯಗಳನ್ನು ಪರಿಶುದ್ಧಗೊಳಿಸುವಂತಾಯಿತು, ಪ್ರತಿಯೊಂದು ಪರಾಭವವೂ ದ್ವಿಗುಣಿತ ಪ್ರಯತ್ನಕ್ಕೆ ಪ್ರೇರಕವಾಗಿ ವಿಜಯದ ಪೀಠಿಕೆಯೆನಿಸುವಂತಾಯಿತು.

"ಈಚಿಗಿನ ವರ್ಷಗಳು ಕಷ್ಟನಿಷ್ಠುರವಾದ ಪರೀಕ್ಷಾಕಾಲವಾಗಿ ಒದಗಿದರೂ ಗಾಂಧೀಜಿಯ ಸಂದೇಶ ರಾಷ್ಟ್ರಕ್ಕೆ ಪುನಃ ಸ್ಫೂರ್ತಿಯಿತ್ತಿತು. ಈ ವರ್ಷಗಳು ಸ್ವಲ್ಪ ಮಟ್ಟಿಗೆ ಅಭೀಷ್ಟಸಿದ್ಧಿಯನ್ನು ತಂದಿವೆ, ಮತ್ತು ಪೀಳಿಗೆ ಪೀಳಿಗೆಗಳು ಯಾವುದಕ್ಕಾಗಿ ಹೋರಾಡಿ ಕ್ಲೇಶವನ್ನು ಸೈರಿಸಿದವೊ ಆ ಸ್ವಾತಂತ್ರ್ಯ ಕೈಗೂಡಿದೆ. ಆದರೆ ಆ ಸಿದ್ಧಿಗಾಗಿ ತೆತ್ತ ಬೆಲೆ ಅಗಾಧವೇ ಆಯಿತು, ಏಕೆಂದರೆ ನಮ್ಮ ಮಾತೃಭೂಮಿ ಇಬ್ಭಾಗವಾಗಿ ಸೀಳಲ್ಪಟ್ಟು ಆ ದುರ್ದೈವಿ ವಿಭಜನೆಯ ಪರಿಣಾಮವಾಗಿ ಜನರ ಮನಸ್ಸು ಉನ್ಮಾತ್ತಾವಸ್ಥೆಯನ್ನೈದಿತು ಮತ್ತು ಗಾಂಧೀಜಿಯವರು ಪ್ರತಿಪಾದಿಸಿದ ಎಲ್ಲ ಉನ್ನತಧ್ಯೇಯಗಳೂ ಕ್ಷಣಕಾಲ ರಾಹುಗ್ರಸ್ತವಾದಂತೆ ತೋರಿತು. ಆ ಕಗ್ಗತ್ತಲೆಯಲ್ಲಿ ಗಾಂಧೀಜಿಯ ಧೀರವಾಣಿ ಪ್ರಕಾಶವನ್ನು ಬೀರಿತು, ಅಸಂಖ್ಯ ದುಃಖಿ ಹೃದಯಗಳು ಆದರಿಂದ ಧೈರ್ಯವನ್ನೂ ಸಮಾಧಾನವನ್ನೂ ಹೊಂದಿದವು.

ಘೋರತಮ ಆಘಾತ

"ಆಗ ಬಂದಿತು ಘೋರತಮ ಆಘಾತ—ಪ್ರೇಮಮೂರ್ತಿಯಾಗಿದ್ದ, ಭಾರತದ ಮೃದುವಾದರೂ ಅದಮ್ಯವಾದ ಅಂತರಾತ್ಮದ ಅವತಾರದಂತಿದ್ದ ಅವರ ಕೊಲೆ. ಈ ಪ್ರಕಾರ, ಸಂತತ ಶ್ರಮದಿಂದ ಯಾವುದು ಸಾಧ್ಯವಾಗಿತ್ತೊ, ದೀರ್ಘ ಹೋರಾಟದಿಂದ ಯಾವುದು ಫಲಿಸಿತ್ತೊ ಅದು ಸ್ವಾತಂತ್ರ್ಯದ ಕಳೆಯನ್ನು ತಾರದೆ ಬರಿ ದುಃಖವನ್ನೂ ವ್ಯಾಕುಲತೆಯನ್ನು ಉಂಟುಮಾಡಿತು.

"ಗಾಂಧೀಜಿಯ ಸಾದರ ಸ್ಮರಣವನ್ನೂ ಅವರ ಉಪದೇಶಗಳ ಮೇಲಿನ ಭಕ್ತಿ ವಿಶ್ವಾಸಗಳನ್ನೂ ನೆಮ್ಮಿ, ದೇಶವು ಭಯಾನಕ ವಿಪತ್ತುಗಳನ್ನು ಎದುರಿಸಲು ಮುಂದಾಯಿತು. ಅವುಗಳಲ್ಲಿ ಭಾರತದ ಮನಸನ್ನು ಅವರಿಸಿ ಆ ಗುರುಶ್ರೇಷ್ಠನ ಮಹಾ ಉಪದೇಶವನ್ನೆ ಕೆಲಕಾಲ ಮರೆಸಿಬಿಟ್ಟ ಆಧ್ಯಾತ್ಮಿಕ ವಿಪತ್ತೇ ಎಲ್ಲಕ್ಕಿಂತಲೂ ಭಯಾನಕವಾಗಿತ್ತು.

"ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಆದರಲ್ಲಿ ಪ್ರಾಣ ಪ್ರತಿಷ್ಠೆ ಮಾಡಿದ ಅವರು ತೀರಿ ಹೋಗಿ ಒಂದು ವರ್ಷವಾಯಿತು. ಅವರ ಪ್ರಥಮ ಪುಣ್ಯತಿಥಿಯ ಈ ದಿನದಲ್ಲಿ ಮಹಾ ಆತ್ಮನನ್ನು ಆದರ ಮತ್ತು ... ರತನ್ನು ನಾವು ಗೌರವಾದರಗಳನ್ನು ಸಮರ್ಪಿಸುವೆವು, ಮತ್ತು ಆ ಜೀವದಾನದ ... ದ ಬೆಳಕಿನಲ್ಲಿ ನಾವು ಭಾರತದ ... ಮತ್ತು ಮಾನವಕುಲದ ಸೇವೆಯಲ್ಲಿ ... ರಾಗುವ ಸಂಕಲ್ಪವನ್ನು ಮಾಡುವೆವು.

"ಗಾಂಧೀಜಿಯ ನೇತೃತ್ವದಲ್ಲಿ ಅಹಿಂಸಾ ... ಕ್ರಿಯೆಯಿಂದ ರಾಷ್ಟ್ರಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿದ ನಾವು, ಈ ಭಾರತದ ಸಮಸ್ತ ಜನರಿಗೂ ಜಾತಿ ಧರ್ಮ ಭೇದವಿಲ್ಲದೆ ಸಮಾನ ಸಂಧಿ ಸುಸಂಧಿಗಳೂ ಪ್ರಗತಿಯೂ ದೊರೆಯುವಂತೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಹೆಣಗಬೇಕಾಗಿದೆ. ಈ ಕಾರ್ಯ ಸಾಧಿಸಬೇಕಾದರೆ ಹೊಸ ಕಾರ್ಯಪದ್ಧತಿಯೂ ದ... ನಾತ್ಮಕಭಾವಪ್ರೇರಿತವಾದ ಸೇವಾಶಕ್ತಿಯೂ ಅವಶ್ಯವಾಗಿದೆ.

"ಭಾರತದ ಜನರು ಸ್ವಾತಂತ್ರ್ಯವನ್ನು ಸಾಧಿಸಿದ್ದಾರೆ. ಆದರೆ ಅದರ ಸುಫಲಗಳನ್ನು ಅನುಭವಿಸಬೇಕಾದರೆ ಅವರು ತಮ್ಮ ಹೊಣೆಗಳನ್ನೂ ಕರ್ತವ್ಯಗಳನ್ನೂ ನೆರವೇರಿಸಬೇಕಾಗುವದು. ಜನರ ಸೇವೆ ಮಾಡಿ ... ಹೊಣೆಗಳ ಮತ್ತು ಕರ್ತವ್ಯಗಳ ಭಾರ ಹೊರುವದೇ ಈ ವರೆಗೆ ನಮಗೆ ಅಭಿಮಾನದ ... ನಾತಾಗಿತ್ತು, ಇನ್ನಾದರೂ ಇರಬೇಕು; ಆ ಕರ್ತವ್ಯಗಳನ್ನು ಮರೆತು ಪದವಿ ಅಧಿಕಾರಗಳಿಗೆ ಹಾತೊರೆಯುವವರು ದೇಶಕ್ಕೆ ಅಹಿತವನ್ನು ಮಾಡುತ್ತಾರೆಂದು ನಾವು ನೆನಪಿನಲ್ಲಿಡಬೇಕು.

ನೈತಿಕ ವಿವೇಕದ ಪಾಠ

"ಗಾಂಧೀಜಿಯವರ ಉಪದೇಶಗಳಲ್ಲಿ ವಿಶಿಷ್ಟವಾದುದೆಂದರೆ, ಭಾರತದ ಎಲ್ಲ ಜನರಲ್ಲಿ ಐಕ್ಯ ಸೌಹಾರ್ದಗಳನ್ನು ಸ್ಥಾಪಿಸುವ, ವರ್ಗಭೇದಗಳನ್ನೂ ಜನ್ಮಮೂಲ ಜಾತಿಮೂಲ ಅಥವಾ ಧರ್ಮಮೂಲವಾದ ಭೇದಗಳನ್ನೂ ನಿರ್ನಾಮ ಮಾಡುವ, ಮತ್ತು ಶಾಂತಿಯುಕ್ತವಾಗಿ ವರ್ಗರಹಿತ ಸಮಾಜವನ್ನು ಕಟ್ಟುವ ಕೆಲಸಕ್ಕಾಗಿ ನಮ್ಮ ಸೇವೆಯನ್ನು ನಿಯೋಜಿಸಬೇಕೆಂಬುದು. ಎಲ್ಲಕ್ಕೂ ಮಿಗಿಲಾಗಿ ಅವರು ಕಲಿಸಿದ ಪಾಠವೆಂದರೆ, ಎಂಥ ಪ್ರಸಂಗದಲ್ಲಿಯೂ ನೈತಿಕ ವಿವೇಕವನ್ನು ಬಿಡದಿರುವ ಶಪಥ. ಏಕೆಂದರೆ ಅದರಿಂದಲೇ ಜೀವನ ಅರ್ಥವತ್ತೆನಿಸುವದು.

"ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಂಗಗಳಲ್ಲಿ ಇಂದು ಉಂಟಾಗಿರುವ ಬಿಕ್ಕಟ್ಟುಗಳನ್ನೂ ತೊಡಕುಗಳನ್ನೂ ಅವರ ಆ ಸಂದೇಶದ ಬೆಳಕಿನಲ್ಲಿ ಬಿಡಿಸುವ ಮೂಲಕ ಭಾರತದ ಸ್ವಾತಂತ್ರ್ಯವೂ ನೈತಿಕ ಪ್ರಭಾವವೂ ವರ್ಧಮಾನವಾಗುವಂತೆ ಮತ್ತು ಗಾಂಧೀಜಿಯವರು ನಂಬಿದ ಆ ಧನ ... ಉದ್ದೇಶಗಳು ಸಫಲವಾಗುವಂತೆ ನಾವು ಮನಃಪೂರ್ವಕವಾಗಿ ಶ್ರಮಿಸುವೆವು."

ಆ ದಿನ ಜರಗುವ ಸಾರ್ವಜನಿಕ ಸಭೆಗಳಲ್ಲಿ ಮೇಲಿನ ಸಂದೇಶವನ್ನೋದಿ ಹೇಳಬೇಕೆಂದೂ ಬೇರಾವ ಭಾಷಣಗಳೂ ಆ ಸಂದರ್ಭದಲ್ಲಿ ಸಲ್ಲವೆಂದೂ ಕಾರ್ಯ ಸಮಿತಿ ನಿರ್ಣಯಿಸಿದೆ.

ಜೇನು ಸಾಕುವದರಲ್ಲಿ ಒಂದು ತಿಂಗಳ ಶಿಕ್ಷಣ

೧೯೪೯ ೭ ಫೆಬ್ರುವರಿಯಲ್ಲಿ ವರ್ಧಾದಲ್ಲಿಯ ಗ್ರಾಮಸೇವಕ ವಿದ್ಯಾಲಯದಲ್ಲಿ ಜೇನು ಸಾಕುವದರಲ್ಲಿ ಸೈದ್ಧಾಂತಿಕ ಮತ್ತು ಪ್ರಾತ್ಯಕ್ಷಿಕ ಶಿಕ್ಷಣವನ್ನು ಒಂದು ತಿಂಗಳ ಅವಧಿಯಲ್ಲಿ ಕೊಡಲಾಗುವುದು. ವಾಸಿಸುವ, ... ಮತ್ತು ನೀಕಸದ ವೆಚ್ಚ ಪಲವತ್ತು ... ಗಳಾಗುತ್ತವೆ.

ಹೆಚ್ಚಿನ ಸಮಾಚಾರಕ್ಕೆ ಕಾರ್ಯದರ್ಶಿ ಅ. ಭಾ. ಗ್ರಾಮೋದ್ಯೋಗ ಸಂಘ, ಮಗನವಾಡಿ ವರ್ಧಾ, ಸಿ. ಪಿ. ಇವರಿಗೆ ಬರೆದುಕೊಳ್ಳತಕ್ಕದ್ದು.

ಸರ್ ತೇಜ ಬಹಾದೂರ ಸಪ್ರೂರ ನಿಧನ

ಸರ್ ತೇಜ ಬಹಾದ್ದೂರ ಸಪ್ರೂ ಇವರು ... ೨೦ ನೆಯ ತಾರೀಕು ಸ್ವರ್ಗಸ್ಥರಾದರು, ಅ... ೭೩ ವರುಷಗಳಾಗಿದ್ದವು. ... ಅವರ ಸ್ಮಾರಕಯಾತ್ರೆ ಯಾದರು ...

ಜಯಪುರ ಕಾಂಗ್ರೆಸ್ಸು

ಸಮ್ಮೇಲನವಾದ ನಂತರ, ಕಾಂಗ್ರೆಸ್ಸಿನ ವಿಷಯವಾಗಿ ನಾನು ಏನನ್ನೂ ಹೇಳಿಲ್ಲವೆಂಬುದು ನನಗೆ ಮರೆತು ಹೋಗಿಲ್ಲ. ನಾನು ಅದರ ಮುಖ್ಯ ಠರಾವುಗಳ ಪಾಠವನ್ನು ಪ್ರಕಟಿಸಬೇಕೆಂದು ಮಾಡಿದ್ದೆ. ಆದರೆ ಸಮ್ಮೇಲನವಾದನಂತರ ಬಹಳ ತಡವಾಗಿ ಅದು ನನ್ನ ಕೈಗೆ ಬಂದಿತು. ಸಂದೇಶ, ಜಾತೀಯತೆ ಮತ್ತು ನಡತೆಯ ಮಟ್ಟಗಳಿಗೆ ಸಂಬಂಧಿಸಿದ ಗೊತ್ತುವಳಿಗಳು ನಮ್ಮ ಬಹು ದೊಡ್ಡದೆನಿಸುವ ಈ ರಾಷ್ಟ್ರೀಯ ಸಂಸ್ಥೆಗೆ ತಕ್ಕವೇ ಆಗಿವೆ. ಅವು ಆರ್ಜವಯುಕ್ತವಾಗಿವೆ. ಅವು ನಾವು ಸಾಧಿಸಿದ್ದನ್ನೂ ನಮಗಾದ ನಿರಾಶೆಗಳನ್ನೂ ಒಳಗೊಂಡಿವೆ. ಅಂಥ ನಿರಾಶೆಗಳು! ಆ ನಿರಾಶೆಗಳು ಪರಿಸ್ಥಿತಿಯಿಂದಲೂ ನಮ್ಮ ನ್ಯೂನತೆಗಳಿಂದಲೂ ಸಂಭವಿಸಿದವು. ಜಯಪುರದ ಸಂದೇಶದ ಗೊತ್ತುವಳಿಯನ್ನು ಸರ್ವೋದಯದಿನಕ್ಕಾಗಿ ಕಾಂಗ್ರೆಸ್ ಕಾರ್ಯಸಮಿತಿಯಲ್ಲಿ ಸಾರತಃ ಪುನರುದ್ಘೋಷಿಸಲಾಗಿದೆ. ಅದನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಪ್ರಕಟಿಸಲಾಗಿದೆ. ಆರ್ಥಿಕ ಕಾರ್ಯಕ್ರಮದ ಮೇಲಿನ ಠರಾವು ಅರ್ಥಗರ್ಭಿತವಾಗಿದೆ. ನನಗೆ ಅ. ಭಾ. ಚರಕ ಸಂಘ ಮತ್ತು ಅ. ಭಾ. ಗ್ರಾಮೋದ್ಯೋಗ ಸಂಘಗಳ ಇಷ್ಟವೇನೆಂಬುದು ಗೊತ್ತಿಲ್ಲ. ಆದರೆ ಅದು ಅವುಗಳ ಸಮ್ಮತಿಯನ್ನು ಪಡೆಯಲಾರದೆಂದು ನನಗೆ ಭಯ. ಶ್ರೀ ಜೆ. ಸಿ. ಕುಮಾರಪ್ಪನವರು ಇತ್ತೀಚೆಗೆ ಈ ಪತ್ರಿಕೆಯ ವಿಭಾಗಗಳಲ್ಲಿ ಹೇಳಿದಂತೆ ಅವರ ಪ್ರಕಾರ ಮತ್ತು ಅವರಂತೆಯೇ ವಿಚಾರ ಮಾಡುವವರ ಪ್ರಕಾರ ಅದು ತಪ್ಪುದಾರಿ. ಅದು ಈ ಸಂಸ್ಥೆಗಳಿಗೆ ತೀರ ವಿರುದ್ಧವಿದೆ ಎಂದು ಹೇಳಬಹುದಾಗಿದೆ ಎಂದು ನೀವು ಕರೆದರೂ ಕರೆಯಬಹುದು. ಠರಾವನ್ನು ಅರ್ಥಗರ್ಭಿತವಾಗಿದೆಯೆಂದು ನಾನು ಹೇಳಿದ್ದೇನೆ ಏಕೆಂದರೆ ಅದು ಖಾದಿಗ್ರಾಮೋದ್ಯೋಗ ಮತ್ತು ಕಾಂಗ್ರೆಸ್ಸಿಗಳ ಮಾರ್ಗಗಳಲ್ಲಿಯ ವ್ಯತಿರೇಕಗತಿಯನ್ನು ಸೂಚಿಸುತ್ತದೆ. ವಿದ್ಯಾಭ್ಯಾಸದ ಪ್ರಶ್ನೆಯ ಬಗ್ಗೆ ಕಾಂಗ್ರೆಸ್ಸು ಯಾವ ವಿಚಾರವನ್ನಿಟ್ಟುಕೊಂಡಿದೆ ಎಂಬುದಕ್ಕೆ ಅದರಲ್ಲಿ ಏನೂ ಸೂಚನೆಯಿಲ್ಲ. ಈಗ ವಿಧಿಸಿದ ಮತ್ತು ವಹಿಸಿದ ಧೋರಣವನ್ನು ಕಾಂಗ್ರೆಸ್ಸು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆಯೆಂದು ನನ್ನ ಮತ. ನಿಯಂತ್ರಣ, ಸೀದಾಪದ್ಧತಿ, ಅತಿಮೂಲ್ಯ, ಅಧಿಕಾರದ ದಮನಾತ್ಮಕ ಪ್ರಯೋಗ ಮುಂತಾದ ಕೆಲವು ಮುಖ್ಯವೆನಿಸುವ ಸಾಮಾನ್ಯ ಮನುಷ್ಯನ ತಾಪತ್ರಯಗಳ ಬಗ್ಗೆ ಕಾಂಗ್ರೆಸ್ ಏನನ್ನೂ ಹೇಳದಿದ್ದದ್ದು ನನಗೆ ಸಂತೆ ಆಶ್ಚರ್ಯಗಳನ್ನುಂಟು ಮಾಡಿತು. ಇತ್ತೀಚೆಗೆ ಸರಕಾರಗಳು ಹೈಕೋರ್ಟುಗಳ ಹಿತವಾದ ಟೀಕೆಗಳಿಗೆ ಗುರಿಯಾಗಿವೆಯೆಂಬುದನ್ನು ಕಾಂಗ್ರೆಸ್ಸು ಗಮನಕ್ಕೆ ತಂದುಕೊಳ್ಳಬೇಕು. ಆ ವಿಷಯದಲ್ಲಿ ಕಾಂಗ್ರೆಸ್ಸು ಹೇಳುವುದು ಏನು ಎಂಬುದನ್ನು ಕೇಳಲು ಜನರು ತುಂಬ ಸಂತೋಷಪಡುತ್ತಿದ್ದರು.

ಇನ್ನು ಮೇಲೆ ಈ ವಿಷಯಗಳ ಬಗ್ಗೆ ಕಾಂಗ್ರೆಸ್ ವರಿಷ್ಠರು ನಿಶ್ಚಿತ ಮಾರ್ಗದರ್ಶನ ಮಾಡುವರೆಂದು ಆಶಿಸುತ್ತೇನೆ.

ಇವರ ನಡುವೆ, "ಸಂಕಟಗಳನ್ನೂ ತೊಂದರೆಗಳನ್ನೂ ಅರ್ಧಮಾರ್ಗ ಚಿಕಿತ್ಸೆಗಳಿಂದ ಇಲ್ಲವೆ ಸಂಧಿಸಾಧಕ ಪದ್ಧತಿಗಳಿಂದ ಬಿಡಿಸಲಾಗದು, ತೆಗೆದೊಗೆಯಲು ಸುಲಭವಲ್ಲ. ತೊಂದರೆಗಳ ಮೂಲಕಾರಣಗಳನ್ನು ತೆಗೆದೊಗೆಯುವುದರಿಂದ ಮತ್ತು ಅತ್ಯುನ್ನತವಾದ ನೈತಿಕ ಅಂತಃಸ್ಫೂರ್ತಿ ಪಟ್ಟುಕೊಳ್ಳುವುದರಿಂದ ಮಾತ್ರ ಕೊನೆಯ ಭಾಗವನ್ನು ಇಲ್ಲದಂತೆ ಮಾಡಬಹುದು" ಎಂಬುದನ್ನು ನೆನಪಿನಲ್ಲಿಟ್ಟುಕೊಂಡು" ರಾಷ್ಟ್ರವನ್ನು ರೂಪಿಸಿರುವ ವಿವಿಧ ಜಾತಿಗಳಲ್ಲಿ ಸದಾಶಯ, ಶಾಂತಿ

ಹೆಚ್ಚು ಕೆಲಸ ಕಡಿಮೆ ಮಾತು

ಬಾಪುವಿನ ಧ್ಯೇಯ ಮತ್ತು ಕಾರ್ಯಕ್ರಮಗಳನ್ನು ಅತ್ಯುತ್ತಮವಾಗಿ ಮುಂದುವರಿಸಬಲ್ಲ ರೀತಿಯಲ್ಲಿ ನಾವು ಜನವರಿ ೩೦ ನೆಯ ತಾರೀಕನ್ನು ವ್ರತದಿನವೆಂದು ಆಚರಿಸುವಲ್ಲಿ ಎಲ್ಲರೂ ಒಪ್ಪುತ್ತಾರೆ. ಆದರೆ ಆಚರಣೆಯ ವಿವರಗಳತ್ತ ನಾವು ಹರಿದರೆ ಆಗ ನಮಗೆ ನಿಜವಾದ ಒಂದು ಕಷ್ಟ ಎದುರಾಗುತ್ತದೆ.

ಮಾತು ಮತ್ತು ಚರ್ಚೆಗಳಲ್ಲಿ ನಾವು ವಿಷಮಪ್ರಮಾಣದ ಹೆಚ್ಚು ಕಾಲವನ್ನು ಕಳೆಯುತ್ತಿದ್ದೇವೆ ಎಂದು ಸ್ವಲ್ಪ ಮೊದಲು ನಾ ಭಾವಿಸುತ್ತಾ ಇದ್ದೆ. ಆದರ ಫಲವಾಗಿ, ಕಾರ್ಯ ಮಾಡಲು ವಸ್ತುತಃ ಒಂದು ನಿಮಿಷ ಕೂಡ ಉಳಿಯುವದಿಲ್ಲ. ಬಾಪುವನ್ನು ಪ್ರೀತಿಸುತ್ತೇವಾದರೂ ಅವರನ್ನು ನಮ್ಮ ಮುಖಂಡರೆಂದು ಸ್ವೀಕರಿಸಿದ್ದರೂ ನಾವು ಈಗ ಅವರಿಂದ ದೂರ ದೂರ ಸರಿಯುತ್ತಿದ್ದೇವೆ ಎನಿಸುತ್ತಿದೆ.

ಆದುದರಿಂದ ಈ ದಿನದ ನ್ಯಾಯೋಚಿತ ಆಚರಣೆಗೆ ಮೊದಲು ಅವಶ್ಯಕವಾದುದೆಂದರೆ, ಸಭೆ, ಭಾಷಣ, ಯೋಜನೆಗಳ ಚರ್ಚೆ, ಪ್ರದರ್ಶನ ಇವುಗಳನ್ನು ಬಿಟ್ಟು, ಬಾಪುವನ್ನು ಪ್ರೀತಿಸುವ ಮತ್ತು ಮೆಚ್ಚುವ ಪ್ರತಿಯೊಬ್ಬನೂ ದೇಹಶ್ರಮ ವ್ಯಯವಾಗುವಂತಹ ಯಾವುದಾದರೊಂದು ಸೇವೆಯನ್ನು ಮಾಡಲು ಆ ಕಾಲ ಮತ್ತು ಶಕ್ತಿಗಳನ್ನು ಉಳಿಸಿಕೊಳ್ಳಬೇಕು. ತಾನು ಯಾವ ಉತ್ತಮ ಕಾರ್ಯವನ್ನು ಮಾಡಬಲ್ಲೆನೆಂಬುದನ್ನು ಪ್ರತಿಯೊಂದು ವ್ಯಕ್ತಿಯೂ ತಾನೇ ನಿರ್ಣಯಿಸಿಕೊಳ್ಳಬಹುದು.

ಅನುಕೂಲವುಳ್ಳವರು ೨-೩ ಜನರಿಗಿಂತ ಹೆಚ್ಚಿಲ್ಲದ ಗುಂಪುಗಳಲ್ಲಿ ಹಳ್ಳಿಗಳನ್ನು ಸಂದರ್ಶಿಸಿ, ಸಾಧ್ಯವಾದಷ್ಟು ಹಳ್ಳಿಗಳನ್ನು ಹೊಕ್ಕು ಇಡೀ ದಿನವನ್ನು ಹಳ್ಳಿಗರೊಡನೆ ಕಳೆಯಬಹುದು. ಗ್ರಾಮನೈರ್ಮಲ್ಯ, ನೂಲುವುದು ಮುಂತಾದ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಹುದು. ಸಂದರ್ಶಕರು ಪ್ರಾರ್ಥನೆಗಳನ್ನು ನಡೆಸಬಹುದು, ತುಲಸೀರಾಮಾಯಣವನ್ನು ಓದಬಹುದು, ಬಾಪುವಿನ ಜೀವನದ ಧ್ಯೇಯ ಮತ್ತು ಕಾರ್ಯಕ್ರಮಗಳ ಮೇಲೆ ಹಳ್ಳಿಗರಿಗೆ ಉಪನ್ಯಾಸ ಕೊಡಬಹುದು ಮತ್ತು ಈ ಪ್ರಕಾರ ಹಳ್ಳಿಬಾಳಿನ ಮತ್ತು ಹಳ್ಳಿಗರ ಹತ್ತಿರ ಹತ್ತಿರ ಹೋಗಲು ಪ್ರಯತ್ನಿಸಬಹುದು. ಹಳ್ಳಿಗರ ನಿತ್ಯಜೀವನದಲ್ಲಿಯ ತೊಂದರೆಗಳನ್ನು ತಿಳಿದುಕೊಳ್ಳುವುದನ್ನು ಅಂಥ ಸಂದರ್ಶನಗಳು ನಮಗೆ ಸಾಧ್ಯಮಾಡಿಕೊಡುತ್ತವೆ. ಸಾಮಾನ್ಯ ಮನುಷ್ಯ ಅಪೇಕ್ಷಿಸುವುದೆಂದರೆ, ತನ್ನ ಜೀವನಸ್ಥಿತಿಯಲ್ಲಿ ಕಣ್ಣಿಗೆ ಕಾಣುವಂಥ ಏಳಿಗೆಯುಂಟಾಗುವದು ಮತ್ತು ತನ್ನದೇ ಆಗಿ ಇದೆ ಎಂದು ತಿಳಿದುಕೊಳ್ಳಲು ಅವನಿಗೆ ಹೇಳಲಾದ ಸರಕಾರದ ದಯಾಮಯತೆಯ ಒಂದು ಜೀವಂತ ಸ್ಪರ್ಶ. ಇಷ್ಟನ್ನೇ.

ಅಹಮದಾಬಾದ, ಜಿ. ವಿ. ಮಾವಲಣಕರ್
೨೬-೧೨-೪೮

ಒಂದು ಗಂಟೆಯ ಮೌನ

"ಸರ್ವೋದಯದ ದಿನ ಯಾವ ಭಾಷಣವನ್ನೂ ಮಾಡಬಾರದೆಂದು ಕಾಂಗ್ರೆಸ್ಸು ಬಹಿಷ್ಕಾರವನ್ನು ಹಾಕಿದ್ದಕ್ಕೆ ನನಗೆ ಸಂತೋಷವಾಗಿದೆ. ಆತ್ಮನಿಯಮನವೆಂದು ಪ್ರತಿಯೊಂದು ವ್ಯಕ್ತಿಯೂ ಅಂದು ಕೊನೆಯ ಪಕ್ಷ ಒಂದು ಗಂಟೆಯ ಕಾಲವಾದರೂ ಮೌನವನ್ನು ಆಚರಿಸಬೇಕು. ಮೌನಾಚರಣೆಗೆ ಬಾಪು ಎಷ್ಟು ಪ್ರಾಧಾನ್ಯ ಕೊಡುತ್ತಿದ್ದರೆಂಬದನ್ನು ನಾವೆಲ್ಲರೂ ಬಲ್ಲೆವು" ಎಂದು ಒಬ್ಬ ಪತ್ರಕಾರ ಬರೆಯುತ್ತಾನೆ. ಅದು ಒಂದು ಒಳ್ಳೆಯ ಸಲಹೆ. ಆ ದಿನ ಒಂದು ಗಂಟೆ ಮುಂಚಿತವಾಗಿಯೇ ಆಕಾಶವಾಣಿಯ ಕಾರ್ಯಕ್ರಮಗಳೆಲ್ಲವನ್ನೂ ನಿಲ್ಲಿಸಿಬಿಟ್ಟರೆ ಅದರಿಂದ ನಮ್ಮ ಕಿವಿಗಳಿಗೆ ಬಹಳ ವಿರಾಮ ಸಿಕ್ಕಿದಂತಾಗುವುದು ಎಂದು ನಾನು ಆ ಸಲಹೆಗೆ ಮತ್ತೊಂದು ಅಂಶವನ್ನು ಜೋಡಿಸಬಯಸುತ್ತೇನೆ.

ಮುಂಬಯಿ, ೧೪-೧-೪೯ ಕಿ. ಘ. ಮ.

ರಾಷ್ಟ್ರೀಯ ಸ್ವಯಂಸೇವಕಸಂಘದ ಸತ್ಯಾಗ್ರಹವನ್ನು ಯಾವ ಕರಾರುಗಳೂ ಇಲ್ಲದೆ ಹಿಂತೆಗೆದುಕೊಳ್ಳಲಾಗುವದೆಂದು ಸಾರಲಾಗಿದೆ.

ಸಾಮರಸ್ಯಗಳನ್ನು ಪುನಃ ಪ್ರಸ್ಥಾಪಿಸಲು ಅತ್ಯುನ್ನತ ಪ್ರಯತ್ನವನ್ನು ಮಾಡಿರಿ" ಎಂಬ ಕಾಂಗ್ರೆಸ್ಸಿನ ಕರೆಗೆ ಹೃತ್ಪೂರ್ವಕ ಮಾರುಹೋಗೋಣ.

ಕಿ. ಘ. ಮಶ್ರುವಾಲಾ

ಮುಂಬಯಿ, ೧೪—೧—೪೯

ವಿಲೀನ ಸಂಸ್ಥಾನಗಳನ್ನೊಳಗೊಂಡ ಹೊಸ ಜಿಲ್ಲೆಗಳು

ಮುಂಬಯಿ ಪ್ರಾಂತದಲ್ಲಿ ವಿಲೀನ ಹೊಂದಿದ ಸಂಸ್ಥಾನ ಪ್ರದೇಶಗಳನ್ನೊಳಗೊಂಡು ಪ್ರಾಂತದ ಜಿಲ್ಲೆಗಳನ್ನು ಪುನರ್ಘಟಿಸಲಾದ ಪ್ರಕಟನೆಯು ಕರಡು ಇದೇ ೧೩ ನೇ ತಾರೀಖಿನ ಗ್ಯಾಜೆಟ್ಟಿನಲ್ಲಿ ಪ್ರಸಿದ್ಧವಾಗಿದೆ. ಈ ಜಿಲ್ಲೆಗಳ ಪುನರ್ರಚನೆಯ ಬಗ್ಗೆ ತಕರಾರು ಕಳಿಸ ಬಯಸುವವರು ಇದೇ ಫೆಬ್ರುವರಿ ೧೫ರೊಳಗಾಗಿ ಕಳಿಸಬೇಕೆಂದು ತಿಳಿಸಲಾಗಿದೆ.

ಸಾಂಗಲಿ, ಮಿರಜಿ (ಹಿರಿ) ಮಿರಜಿ (ಕಿರಿ) ಕುರಂದವಾಡ (ಹಿರಿ) ಕುರುಂದವಾಡ (ಕಿರಿ) ಔಂಧ, ಜತ್ತ ಪ್ರದೇಶಗಳನ್ನೊಳಗೊಂಡು ಸಾಂಗಲಿ ಜಿಲ್ಲೆಯನ್ನು ಹೊಸದಾಗಿ ರಚಿಸಲಾಗುವದು. ಇದರಲ್ಲಿ ಮಿರಜಿ, ಜತ್ತ, ತಾಸಗಾಂವ, ಖಾನಾಪುರ, ವಾಳವಾ ಈ ಐದು ತಾಲೂಕುಗಳು ಶಿರಾಳ ಮಹಾಲ ಇರುವವು.

ಸೊಲ್ಲಾಪುರ ಜಿಲ್ಲೆಯಲ್ಲಿ ಅಕ್ಕಲಕೋಟ ಸಂಸ್ಥಾನ, ಕುರುಂದವಾಡದ ವೈಂದರಗಿ ಸಾಂಗಲಿಯ ಮಂಗಳವೇಡೆ, ಮಿರಜಿ (ಕಿರಿ) ಯ ಕುಂಡಾಳಿ ತಾಲೂಕು ಸೇರುವವು..

ಬೆಳಗಾವಿ ಜಿಲ್ಲೆಯಲ್ಲಿ ಶಹಾಪುರ ಹೊಸ ತಾಲೂಕನ್ನು ಮಾಡಲಾಗುವದು. ಶಹಾಪುರ ಎಳ್ಳೂರ, ಅನಗೋಳ ತಾಲೂಕು ಮತ್ತು ಬೆಳಗಾವಿ ತಾಲೂಕಿನ ಕೆಲ ಹಳ್ಳಿಗಳು ಇದರಲ್ಲಿ ಸೇರುವವು. ಅಥಣಿ ತಾಲೂಕಿನ ಖೂರಪಾಲಿ, ಪಡಸಲಗಿ (ಚಿಕ್ಕ-ದೊಡ್ಡ) ಹಿಪ್ಪರಗಿ ಗ್ರಾಮಗಳನ್ನು ವಿಜಾಪುರ ಜಿಲ್ಲೆಯ ಜಮಖಂಡಿ ತಾಲೂಕಿಗೆ ಸೇರಿಸಲಾಗುವದು, ಜಮಖಂಡಿ, ವಾಡಿ, ಸಾಂಗಲಿ, ಮಿರಜಿ, ಜತ್ತ ಸಂಸ್ಥಾನಗಳ ಕೆಲಭಾಗ ಕೂಡಿಸಿ ಅಥಣಿ ತಾಲೂಕನ್ನು ಪುನರ್ರಚಿಸಲಾಗುವದು. ಬೆಳಗಾವಿ ಜಿಲ್ಲೆಯಲ್ಲಿ ಶಹಾಪುರ, ಚಿಕ್ಕೋಡಿ ಬೆಳಗಾವಿ ಹೀಗೆ ಮೂರು ಪ್ರಾಂತಗಳನ್ನು ಮಾಡಲಾಗುವದು.

ವಿಜಾಪೂರ ಜಿಲ್ಲೆಯಲ್ಲಿ ಜಮಖಂಡಿ, ರಾಮದುರ್ಗ ಸಂಸ್ಥಾನಗಳ ಕೆಲವು ಪ್ರದೇಶ ಮತ್ತು ಮುಧೋಳ ಸಂಸ್ಥಾನ ಕೂಡಿಸಲಾಗುವದು. ಔಂಧ ಸಂಸ್ಥಾನದ ಗುಣದಾಳ ತಾಲೂಕಿನ ೧೭ ಹಳ್ಳಿಗಳು ವಿಜಾಪುರ ತಾಲೂಕಿಗೆ ಸೇರುವವು. ಬದಾಮಿ ತಾಲೂಕಿನ ೫೭ ಹಳ್ಳಿಗಳನ್ನು ಮತ್ತು ರಾಮದುರ್ಗ ಸಂಸ್ಥಾನದ ಹಳ್ಳಿಗಳನ್ನು ಕೂಡಿಸಿ ೮೯ ಹಳ್ಳಿಗಳ ರಾಮದುರ್ಗ ತಾಲೂಕನ್ನು ಹೊಸದಾಗಿ ರಚಿಸಲಾಗುವದು. ಹೊಸದಾಗಿ ರಚಿತವಾಗುವ ಜಮಖಂಡಿ ತಾಲೂಕಿನಲ್ಲಿ ಸಂಸ್ಥಾನದ ೫೨ ಹಳ್ಳಿ ಅಥಣಿ ತಾಲೂಕಿನ ೪ ಹಳ್ಳಿ ತೇರದಾಳ ಮಹಾಲಿನ ಹತ್ತು ಹಳ್ಳಿ ಕುರಂದವಾಡದ ಒಂದು ಹಳ್ಳಿ ಸೇರುವವು. ಮುಧೋಳ ಸಂಸ್ಥಾನದ ೮೧ ಹಳ್ಳಿಗಳನ್ನೊಳಗೊಂಡು ಮುಧೋಳ ತಾಲೂಕನ್ನು ರಚಿಸಲಾಗುವದು. ವಿಜಾಪುರ ಜಿಲ್ಲೆಯಲ್ಲಿ ವಿಜಾಪೂರ, ಜಮಖಂಡಿ, ಬಾಗಲಕೋಟೆ ಮೂರು ಪ್ರಾಂತಗಳನ್ನು ಮಾಡಿ ವಿಜಾಪೂರ ಪ್ರಾಂತದಲ್ಲಿ ವಿಜಾಪುರ, ಇಂಡಿ ಸಿಂದಗಿ ಬಾಗೇವಾಡಿ ತಾಲೂಕು ಬಾಗಲಕೋಟ ಪ್ರಾಂತದಲ್ಲಿ ಬಾಗಲಕೋಟ ಮುದ್ದೇಬಿಹಾಳ, ಹುನಗುಂದ, ಬದಾಮಿ, ಜಮಖಂಡಿ ಪ್ರಾಂತದಲ್ಲಿ ಜಮಖಂಡಿ, ರಾಮದುರ್ಗ ಮುಧೋಳ ತಾಲೂಕುಗಳು ಸೇರುವವು.

ಶಿರಹಟ್ಟಿ ಲಕ್ಷ್ಮೇಶ್ವರ, ಕುಂದಗೋಳ, ಗುಡಗೇರಿ ತಾಲೂಕು ಸವಣೂರು ಸಂಸ್ಥಾನ ಒಳಗೊಂಡು ಧಾರವಾಡ ಜಿಲ್ಲೆಯನ್ನು ಹೊಸದಾಗಿ ರಚಿಸಲಾಗುವದು. ಶಿರಹಟ್ಟಿ ತಾಲೂಕು ಮತ್ತು ಬ್ಯಾಡಗಿ ಮತ್ತು ಕುಂದಗೋಳ ಮಹಾಲುಗಳನ್ನು ಮಾಡಲಾಗುವದು. ಶಿರಹಟ್ಟಿ ತಾಲೂಕಿನಲ್ಲಿ ಶಿರಹಟ್ಟಿ ತಾಲೂಕಿನ ೬೦, ಲಕ್ಷ್ಮೇಶ್ವರದ ೧೪, ಗುಡಗೇರಿಯ ೧೦ ಬಂಕಾಪುರ ತಾಲೂಕಿನ ೪, ಹಾವೇರಿಯ ೪ ಹಳ್ಳಿಗಳು ಸೇರುತ್ತವೆ. ಕುಂದಗೋಳ ಮಹಾಲಿನಲ್ಲಿ ಕುಂದಗೋಳದ ೨೦, ಬಂಕಾಪುರ ತಾಲೂಕಿನ ೨೪, ಶಿರಹಟ್ಟಿ ತಾಲೂಕಿನ ೬, ಲಕ್ಷ್ಮೇಶ್ವರದ ೩, ಗುಡಗೇರಿಯ ೪ ಮತ್ತು ಹುಬ್ಬಳ್ಳಿ ತಾಲೂಕಿನ ೧೧ ಹಳ್ಳಿ ಸೇರಿ ೬೬ ಹಳ್ಳಿಗಳಾಗುವವು. ಬ್ಯಾಡಗಿ ಮಹಾಲಿನಲ್ಲಿ ರಾಣೇಬಿನ್ನೂರ ತಾಲೂಕಿನ ೧೫, ಹಾವೇರಿಯ ೯, ಹಿರೇಕೆರೂರಿನ ೪೪ ಹಳ್ಳಿಗಳು ಸೇರುವವು. ಬಂಕಾಪುರ ತಾಲೂಕಿನಲ್ಲಿ ಉಳಿದ ೧೪೪ ಹಳ್ಳಿ, ಸವಣೂರ ಸಹಿತವಾಗಿ ಸಂಸ್ಥಾನದ ೨೨ ಹಳ್ಳಿ ಹಾವೇರಿಯ ೧ ಹೀಗೆ ೧೬೩ ಹಳ್ಳಿಗಳು ಸೇರುವವು. ಪುನಾರಚಿತವಾದ ಧಾರವಾಡ ಜಿಲ್ಲೆಯಲ್ಲಿ ರಾಣೇಬಿನ್ನೂರ, ಸವಣೂರು, ಗದಗ ಮತ್ತು ಧಾರವಾಡ ಪ್ರಾಂತಗಳನ್ನು ಮಾಡಿ ರಾಣೇಬಿನ್ನೂರು ಹಾನಗಲ್ಲ ಹಿರೇಕೆರೂರ ತಾಲೂಕುಗಳು ಮತ್ತು

ಕರ್ನಾಟಕ ಪ್ರಾಂತವು ಕೂಡಲೆ ನಿರ್ಮಾಣವಾಗಲಿ

ಪ್ರಾಂತೀಯ ಕಾಂಗ್ರೆಸ ಸಮಿತಿಯ ನಿರ್ಣಯ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ವಿಶೇಷ ಸಾಧಾರಣ ಸಭೆಯು ಹರಿಹರದಲ್ಲಿ ೧೯ ನೇ ತಾರೀಕು ಕೂಡಿ, ಮೈಸೂರು ಮಹಾರಾಜರು ಘಟನಾಬದ್ಧ ಅಧಿಪತಿಗಳಾಗಿ ಮೈಸೂರನ್ನೊಳಗೊಂಡು ಇಡೀ ಕರ್ನಾಟಕ ಪ್ರಾಂತ ಕೂಡಲೆ ಸ್ಥಾಪಿತವಾಗಬೇಕೆಂದು ಮಹತ್ವದ ನಿರ್ಣಯ ಕೈಕೊಂಡಿತು. ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ ಈ ಸಭೆಗೆ ೪೦ ಜನ ಸದಸ್ಯರು ಮತ್ತು ಶಾಸನ ಸಭೆಗಳ ಹಲವು ಸದಸ್ಯರು ಬಂದಿದ್ದರು. ಪ್ರಾಂತೀಕರಣದ ಗೊತ್ತುವಳಿಯ ಆಶಯ ಇಂತಿದೆ—

ಹಿಂದುಸ್ತಾನ ಸರಕಾರವು ಮೊನ್ನೆ ಸೂಚಿಸಿದ ೧೯೩೫ ನೇ ಇಸ್ವಿ ಕಾಯದೆಯ ತಿದ್ದುಪಡಿಯನ್ವಯ ಒಕ್ಕೂಟ ಸರಕಾರದ ಆಡಳಿತೆಯಲ್ಲಿರುವ ಕನ್ನಡ ಭಾಷೆಯಾಡುವ ಜನತೆಯನ್ನೆಲ್ಲ ಒಂದೇ ಪ್ರಾಂತದಾಡಳಿತೆಯಲ್ಲಿ ತರುವದು ಸಾಧ್ಯವಿದ್ದು ಕೇಂದ್ರ ಸರಕಾರವು ಕೂಡಲೆ ಈ ಪ್ರಾಂತವನ್ನು ರಚಿಸಬೇಕು. ದರ್ ಸಮಿತಿಯು ಸ್ವೀಕರಿಸಿದ ವರದಿಯು ಸಂಪೂರ್ಣ ಅಗ್ರಾಹ್ಯವಿದ್ದು ಪ್ರಾಂತಗಳನ್ನು ಭಾಷಾವಾರ ತಳಹದಿಯ ಮೇಲೆ ರಚಿಸುವ ತತ್ವವನ್ನೇ ಅದು ನಿರಾಕರಿಸುತ್ತದೆ. ಸರಕಾರವು ಇದನ್ನು ಒಪ್ಪಬಾರದು. ಕಾಂಗ್ರೆಸ್ಸು ೧೯೨೦ ರಿಂದಲೂ ಈ ತತ್ವಕ್ಕೆ ಮನ್ನಣೆಯಿತ್ತು ಅದರಂತೆ ಆಚರಿಸುತ್ತ ಬಂದಿರುತ್ತದೆ. ಈಗ ಭಾಷಾವಾರ ಪ್ರಾಂತಗಳು ರಚಿತವಾಗದೇ ಹೋದಲ್ಲಿ ಅದರ ಪರಿಣಾಮಗಳು ವಿಪರೀತವಾಗಿ ಜನತೆಯಲ್ಲಿ ಅಪಾರ ಅಸಂತೃಪ್ತಿ ಅಸಂತೋಷಗಳು ಬೆಳೆಯುತ್ತವೆ.

ಮೈಸೂರ ಕಾಂಗ್ರೆಸ ಸಮಿತಿಯು ಸ್ವೀಕರಿಸಿದ ನಿರ್ಣಯದನ್ವಯ ಒಕ್ಕೂಟ ಕರ್ನಾಟಕದ ಭಾಗಗಳನ್ನೆಲ್ಲ ಮೈಸೂರ ಮಹಾರಾಜರ ಘಟನಾಬದ್ಧ ಅಧಿಪತ್ಯದಲ್ಲಿ ಸೇರಿಸಿ ಸಂಯುಕ್ತ ಕರ್ನಾಟಕ ಪ್ರಾಂತವನ್ನು ಕೂಡಲೇ ರಚಿಸಬೇಕೆಂಬುದನ್ನು ಈ ಸಭೆಯು ಸ್ವಾಗತಿಸುತ್ತದೆ. ಮತ್ತು ಈ ನಿರ್ಣಯವನ್ನನುಸರಿಸಿ ಮೈಸೂರ ಮಹಾರಾಜರು ಹಾಗೂ ಕೇಂದ್ರ ಸರಕಾರದೊಡನೆ ವಿವರಗಳನ್ನು ನಿರ್ಧರಿಸಲು ಕ. ಪ್ರಾಂ. ಕಾಂಗ್ರೆಸ ಸಮಿತಿಯು ನೇಮಿಸಿದ ಸಂಧಾನ ಸಮಿತಿ ಮತ್ತು ಮೈಸೂರ ಕಾಂಗ್ರೆಸ್ಸಿನ ಸಂಧಾನ ಸಮಿತಿಗಳಿಗೆ ಅಧಿಕಾರ ಕೊಡುತ್ತದೆ.

ಕಾಂಗ್ರೆಸ ನಿಧಿಸಂಗ್ರಹ

ಅಧ್ಯಕ್ಷರು ಸ್ವತಃ ಇನ್ನೊಂದು ಗೊತ್ತುವಳಿಯನ್ನು ಮಂಡಿಸುತ್ತ ಕಾಂಗ್ರೆಸ್ಸಿನ ಹೊಸ ಘಟನೆಯನ್ವಯ ಕಾಂಗ್ರೆಸ ಸದಸ್ಯತ್ವಕ್ಕೆ ಹಣದ ವಂತಿಗೆಯಿಲ್ಲದ್ದರಿಂದ ಕಾಂಗ್ರೆಸ ಸಂಘಟನೆಗಾಗಿ ನಿಧಿ ಸಂಗ್ರಹಿಸಲು ಬೇರೆ ಕ್ರಮಗಳನ್ನು ಕೈಕೊಳ್ಳುವದು ಅವಶ್ಯವೆಂದು ನುಡಿದು ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ಸಿಗರು ಕಾಂಗ್ರೆಸ ನಿಧಿಗಾಗಿ ತಮ್ಮ ವಾರ್ಷಿಕ ಆದಾಯದಲ್ಲಿ ನೂರಕ್ಕೆ ಒಂದರಷ್ಟು ಹಣವನ್ನು ಕೊಡಬೇಕೆಂಬ ಗೊತ್ತುವಳಿಯನ್ನು ಓದಿದರು. ಸಭಾಸದರ ಅಭಿಪ್ರಾಯ ಕೇಳಲಾಗಿ ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾಯಿತು.

ಮಹಾತ್ಮರ ಪೂರ್ಣಾಕಾರದ ಭಾವಚಿತ್ರ

ಸರ್ವೋದಯ ದಿನಕ್ಕಾಗಿ ಮಹಾತ್ಮರ ಪೂರ್ಣಾಕಾರದ ಭಾವಚಿತ್ರವನ್ನು ಆರ್ಟ ಪೇಪರಿನಲ್ಲಿ ಬೆಳ್ಳಿ ಬಣ್ಣದಲ್ಲಿ ಸುಂದರವಾಗಿ ಮುದ್ರಿಸಲ್ಪಟ್ಟು ಮಾರಾಟಕ್ಕೆ ಇಡಲಾಗಿದೆ. ಪ್ರತಿ ಬೇಕಾದವರು ಮತ್ತು ಹೆಚ್ಚಿನ ಮಾಹಿತಿಗಾಗಿ ಭುವನೇಂದ್ರ ಪ್ರಾಡಕ್ಟ್ಸ, ಮರಾಠಾಗಲ್ಲಿ ಹುಬ್ಬಳ್ಳಿ ಇವರಿಂದ ತಿಳಿದುಕೊಳ್ಳತಕ್ಕದ್ದು.

ಬ್ಯಾಡಗಿ ಮಹಾಲ ರಾಣೇಬಿನ್ನೂರ ಪ್ರಾಂತದಲ್ಲಿ, ಬಂಕಾಪುರ, ಶಿರಹಟ್ಟಿ ಹಾವೇರಿ ತಾಲೂಕು ಮತ್ತು ಕುಂದಗೋಳ ಮಹಾಲ ಸವಣೂರ ಪ್ರಾಂತದಲ್ಲಿ, ಗದಗ, ರೋಣ ತಾಲೂಕು ಮುಂಡರಗಿ ಮತ್ತು ನರಗುಂದ ಮಹಾಲುಗಳು, ಗದಗ ಪ್ರಾಂತದಲ್ಲಿ ಮತ್ತು ಧಾರವಾಡ ಹುಬ್ಬಳ್ಳಿ ನವಲಗುಂದ ಕಲಘಟಗಿ ತಾಲೂಕುಗಳು ಧಾರವಾಡ ಪ್ರಾಂತದಲ್ಲಿ ಬರುವವು.

ರೂಪರಂಗ

ಇಂಡೊನೇಶಿಯದ ನೃತ್ಯನಾಟಕ

ಇಂಡೊನೇಶಿಯದ ಆಟ ಅಥವಾ ನಾಟಕ ನೃತ್ಯಪ್ರಧಾನವಾದುದು. ಅಭಿನಯದ ಸ್ಥಾನ ಗೌಣ. ಆದರೆ ಯಕ್ಷಗಾನ ನಾಟಕ ಅಥವಾ ಬಯಲಾಟಗಳಲ್ಲಿರುವಂತೆ ನಾಟಕದ ಪಾತ್ರಗಳು ತಮ್ಮ ಭಾವನೆಗಳನ್ನು ನೃತ್ಯದಲ್ಲಿಯೇ ಅಭಿವ್ಯಕ್ತಮಾಡಬೇಕು. ಈ ನಾಟಕದ ಕಥಾ ವಸ್ತುಗಳನ್ನು ರಾಮಾಯಣ ಇಲ್ಲವೆ ಮಹಾಭಾರತದಿಂದ ಆಯ್ದುಕೊಳ್ಳಲಾಗುತ್ತದೆ. ಅವುಗಳಲ್ಲಿಯ ವೀರರು ಜಾವಾ, ಸುಮಾತ್ರಾ ಮೊದಲಾದ ಪ್ರದೇಶಗಳನ್ನು ಆಳಿದ್ದರೆಂದು ಅಲ್ಲಿಯ ನಂಬಿಗೆ. ಕೆಲ ಕಥಾನಾಯಕ ನಾಯಿಕೆಯರನ್ನು ಹೊಸ ದೃಷ್ಟಿಯಿಂದ ನೋಡಿ ರಚಿಸಲಾದ ನವ್ಯ ನಾಟಕಗಳನ್ನು ಆಡುವುದೂ ಉಂಟು. ಇದಕ್ಕೆ "ಲಕನ್‌ಕ್ಯರಂಗನ್" ಎನ್ನುತ್ತಾರೆ. (ಲಕನ್= ಕತೆ, ಕ್ಯರಂಗನ್= ಕಲ್ಪನೆ) ಪೂರ್ಣವಾದ ಕಲ್ಪಿತ ಕಥೆಗಳನ್ನು ಪರಂಪರೆಯ ನಾಟಕಗಳಗಲ್ಲಿ ತರಲಾಗುವುದಿಲ್ಲ. ಈ ನಾಟಕಗಳು ಅಭಿಜಾತವಾಙ್ಮಯ ಪ್ರಧಾನವಿದ್ದು ಎಲ್ಲೂ ಇಲ್ಲದಷ್ಟು ಜನಪ್ರಿಯವೆನಿಸಿವೆ. ಅವು ಹೀಗೆ ಅತ್ಯಂತ ಜನಪ್ರಿಯವಾಗಲು ರಾಮಾಯಣ ಮಹಾಭಾರತಗಳಲ್ಲಿಯ ಉದಾತ್ತಾದರ್ಶ ಮತ್ತು ಸುನೀತಿಸೌಂದರ್ಯಗಳೇ ಕಾರಣ. ಅದರಲ್ಲೂ ಮಹಾ ಬುದ್ಧಿಮತ್ತೆಯನ್ನೂ ಅಗಾಧ ತತ್ವಜ್ಞತೆಯನ್ನೂ ಬೆಳಕಿಗೆ ತರುವ ಸಂವಾದಗಳಿಗೆ ಅಲ್ಲಿಯ ರಸಿಕರು ಬಹಳ ಮೆಚ್ಚಿಕೊಳ್ಳುತ್ತಾರೆ. ಕುರಾನಿಗಿಂತಲೂ ಹಳೆಯವಾದ ಈ ನಾಟಕಗಳೇ ಇಂಡೊನೇಶಿಯನ್ನರ ಧರ್ಮಗ್ರಂಥಗಳೆನ್ನಬಹುದು. ಅಲ್ಲಿಯ ಬಹುಸಂಖ್ಯರಿಂದು ಮುಸಲ್ಮಾನರಾಗಿಯವರಾದರೂ ಈ ನಾಟಕಗಳು ಈಗಲೂ ತಮ್ಮ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ. ನೂರಕ್ಕೆ ೯೦ ರಷ್ಟು ಜನರು ನಿರಕ್ಷರರಿರುವ ಆ ನಾಡಿನಲ್ಲಿ ಕೇವಲ ಈ ನಾಟಕಗಳಿಂದಲೇ ಅವರು ತಮ್ಮ ನಾಗರಿಕ ರೀತಿನೀತಿಗಳನ್ನು ಬಹಳ ಉನ್ನತ ಮಟ್ಟದಲ್ಲಿಟ್ಟುಕೊಳ್ಳಲು ಶಕ್ತರಾಗಿರುವುದು ಆಶ್ಚರ್ಯಕರವಲ್ಲವೆ?

ಒಡ್ಡೋಲಗ

ಈ ನಾಟಕ ಪ್ರಾರಂಭವಾಗುವುದು ಕತೆಗಾರನಾದ "ಧಲಂಗ್" ಅಥವಾ ಭಾಗವತನ ಪದದಿಂದ. ಅವನು ಪದಹೇಳ ಹೊರಟಾಕ್ಷಣ 'ಗಮೇಲನ್' ಎಂಬ ಪಕ್ಕವಾದ್ಯ ಪ್ರಾರಂಭವಾಗುತ್ತದೆ. ಮೊದಲಿನ ದೃಶ್ಯ ರಾಜನೊಬ್ಬನ ಒಡ್ಡೋಲಗ. ಮಂತ್ರಿ, ಆಸ್ಥಾನದ ಸರದಾರರು, ಯೋಧರು ಇವರ ಸಭೆಯಲ್ಲಿ ರಾಜನು ರಾಜ್ಯದ ಆಡಳಿತೆಯ ವಿಷಯವಾಗಿ ಮಾತಾಡುತ್ತಾನೆ. ದೂತನೊಬ್ಬನು ಪರದೇಶದ ಸೈನ್ಯ ದಂಡೆತ್ತಿ ಬಂದಿದೆಯೆಂಬ ದುರ್ವಾರ್ತೆಯನ್ನು ತರುತ್ತಾನೆ. ಆ ಸೈನ್ಯದಲ್ಲಿ ರಾಕ್ಷಸರೂ ಭೂತಗಣಗಳೂ ಇದ್ದಾರೆಂದು ಅವನು ಹೇಳುತ್ತಾನೆ. ಇದು ಮೊದಲನೆಯ ದೃಶ್ಯದಲ್ಲಿಯೇ ಬರುತ್ತದೆ. ಅನಂತರ ಆಗಿಂದಾಗ ಮುಂದೊತ್ತಿ ಬರುತ್ತಿರುವ ಶತ್ರುಸೈನ್ಯವನ್ನು ತಡೆಯಲು ರಾಜನು ತಕ್ಕ ಕ್ರಮವನ್ನು ಕೈಗೊಳ್ಳಲು ಸಿದ್ಧತೆ ನಡೆಸುತ್ತಾನೆ. ಸೇನಾಪತಿ ಮತ್ತು ಸರದಾರರನ್ನು ರಣರಂಗಕ್ಕೆ ಕಳಿಸಲಾಗುತ್ತದೆ. ಹೆಂಗಸರಿಗೆ ಕೂಡ ಅವರ ಕರ್ತವ್ಯದ ಬಗ್ಗೆ ಆಜ್ಞೆಯನ್ನು ಹೊರಡಿಸಲಾಗುತ್ತದೆ

ಕಾಳಗ

ಎರಡನೆಯ ಅಂಕದ ಆರಂಭದಲ್ಲಿ ಪುರೋಹಿತನ ಪಾತ್ರ ಬರುತ್ತದೆ. ಅವನು ಅರಣ್ಯಕ್ಕೆ ತೆರಳಿ ತಪಸ್ಸು ಮಾಡಿ [illegible] ಪರಿವಾರವನ್ನು ರಾಜಶಕ್ತಿಯನ್ನೂ [illegible] ತ್ತಾನೆ. ಅವನು ತನ್ನ ಜೊತೆ[illegible] ಸಂಪೂರ್ಣ ಸ್ವಾತಂತ್ರ್ಯವನ್ನು [illegible] ಅರಸನ ಕೈಕೆಳಗಿನವರಿಗೆ ಕಳಿಸುತ್ತಾನೆ. ಮೂರನೆಯ ಅಂಕದಲ್ಲಿ ಅರಸನ ಸೈನ್ಯಕ್ಕೂ ಭೂತಗಣಗಳಿಗೂ ಘೋರ ಯುದ್ಧ ಸಂಭವಿಸಿ, ಅದರಲ್ಲಿ ಅನೇಕ ಬಾರಿ ಅರಸನ ಸೈನ್ಯ ಸೋತು ಹಿಮ್ಮೆಟ್ಟಬೇಕಾಗುತ್ತದೆ. ಈ ಯುದ್ಧ ದೃಶ್ಯವನ್ನು ಕುಣಿತಗಾರರು ಯಕ್ಷಗಾನದಲ್ಲಿಯಂತೆ ಬಿಲ್ಲು ಬಾಣ ಬರ್ಚಿ ಮುಂತಾದ ಆಯುಧಗಳಿಂದ ಯುದ್ಧ ಮಾಡಿ ತೋರಿಸುತ್ತಾರೆ. ಆಗ ಚಂಡೆ ಬಾರಿಸುವಂತೆ 'ಗಮೇಲನ್' ಹೊಸದೊಂದು ಹುರುಪಿನ ಗತ್ತಿನಲ್ಲಿ ಏಳುತ್ತದೆ. ಅದರಿಂದ ವೀರ ಶೃಂಗಾರ ಭಾವಗಳು ಪುಷ್ಟಿಹೊಂದುತ್ತವೆ. ಸೇನಾಧಿಕಾರಿಗಳು ಓಡಿಬಂದು ರಾಜನಲ್ಲಿ ಮೊರೆಯಿಟ್ಟಾಗ ರಾಜಪುರೋಹಿತನು ರಾಜನು ಅರಮನೆಯನ್ನು ಬಿಟ್ಟು ಕಾಡಿನಲ್ಲಿ ವಾಸಿಸಬೇಕೆಂದು ಉಪದೇಶಿಸುತ್ತಾನೆ. ನಾಲ್ಕನೆಯ ಅಂಕದಲ್ಲಿ ಕ್ಷತ್ರಿಯ ವೀರನೊಬ್ಬನು ಆಕಸ್ಮಿಕವಾಗಿ ರಾಜನಿಗೆ ಭೆಟ್ಟಿಯಾಗಿ ಅವನಿಂದ "ಧುರವೀಳ್ಯ"ವನ್ನು ಸ್ವೀಕರಿಸಿ ರಣಾಂಗಕ್ಕೆ ಸೈನ್ಯ ಸಮೇತನಾಗಿ ತೆರಳುತ್ತಾನೆ. ಐದನೆಯ ಅಂಕದಲ್ಲಿ ಆ ವೀರನು ಪರಚಕ್ರದೊಡನೆ ಕಾದುವ, ವಾಗ್ವಾದ ಮಾಡುವ, ಅಸ್ತ್ರಪ್ರತ್ಯಸ್ತ್ರಗಳನ್ನು ಬಿಡುವ, ಹಾಡಿನಲ್ಲೇ ಸಂಭಾಷಿಸುವ ಮತ್ತು ಭಾಗವತನು ಚಂಡೆಯ (Kettle Drum) ಏರುಗತಿಗನುಗುಣವಾಗಿ ಹಿಮ್ಮೇಳದ ರಾಗ ಕೂಡಿಸುವ ದೃಶ್ಯ ಕಾಣುತ್ತದೆ. ಸಂಭಾಷಣೆಯಲ್ಲಿ ಬಳಸುವುದು ಆಡುಮಾತಲ್ಲ; ಧಲಂಗ ಅಥವಾ ಭಾಗವತನ ಭಾಷೆ. ಅದು ಜನರಿಗೆ ಬಹಳ ಮೆಚ್ಚಿಗೆಯಾದದ್ದು. ಅಂತ್ಯದಲ್ಲಿ ಕ್ಷತ್ರಿಯನು ರಾಕ್ಷಸಾದಿಗಳನ್ನು ಜಯಿಸುತ್ತಾನೆ.

ಪರಿಣಯಾಂತ

೬-೭ ನೆಯ ಅಂಕಗಳಲ್ಲಿ ಅರಸನು ಅರಮನೆಯಲ್ಲಿ ಸಕುಟುಂಬ ಒಡ್ಡೋಲಗ ಕೊಡುತ್ತಾನೆ. ಮೊದಲಿನಂತೆ ಅರಸನ ಅನುಯಾಯಿಗಳಾದ ವೀರ ಸರದಾರರು, ಮಂತ್ರಿ ಸೇನಾಪತಿಗಳು, ದೂತ ಧಾರೇಯರು ಒಟ್ಟುಗೂಡುತ್ತಾರೆ. ಯುದ್ಧವನ್ನು ಗೆದ್ದುಕೊಟ್ಟ ಕ್ಷತ್ರಿಯನೆಂದರೆ ಅರ್ಜುನ. ಅದಕ್ಕಾಗಿ ಅವನ ಸಹೋದರ ಇಲ್ಲವೆ ಮಗನಿಗೆ ಪಾರಿತೋಷಕವನ್ನು ಕೊಡಲಾಗುತ್ತದೆ ಮತ್ತು ಅವನಿಗೆ ರಾಜಪುತ್ರಿಯನ್ನು ಮದುವೆಮಾಡಿ ಕೊಡಲಾಗುತ್ತದೆ. ಅವನ ಮದುವೆಯ ವೈಭವ [illegible] ಯನ್ನು ಬಂದೀಜನರು ಅತ್ಯುತ್ಸಾಹದಿಂದ ಅದನ್ನು ಪ್ರತಿಭಟಿಸುವ ಉತ್ಸಾಹಿಗಳನ್ನು ಕಲಿಸಲಾಗುತ್ತಿದೆ. ನಾಟಕಗಳೇ ಅವರಿಗೆ ವೇದ, ಉಪನಿಷತ್ತು, ನೀತಿಶಾಸ್ತ್ರ, ಧರ್ಮದರ್ಶಕ.

[illegible] ಉದ್ದಕ್ಕೂ ಪದಹೇಳುವುದಿಲ್ಲ; ಆಗಾಗ ಮಾತ್ರ. ಉಳಿದ ಕಾಲಗಳಲ್ಲಿ ಎಂದರೆ ಗಾಯನ ಮತ್ತು ನೃತ್ಯ; ಪಾತ್ರಗಳ ಸಂಭಾಷಣೆ, ಇಷ್ಟೆ.

ಕಲ್ಕತ್ತದ ಕೃಷ್ಣ ಫಿಲಂ ಪ್ರೊಡಕ್ಷನ್ಸ್‌ರ "ಕಲ್ಕಿ" ಎಂಬ ಚಿತ್ರದಲ್ಲಿ ಕರನ್ ದಿವಾನ್ ಮತ್ತು ಸುರೈಯ್ಯಾ.

ಲಂಗೇಂದ್ರಿಯ

ಇದಲ್ಲದೆ ಸಂಪೂರ್ಣ ಪದಮಯವಾದ ನಾಟಕ ಪದ್ಧತಿಯು ಇಂಡೊನೇಶಿಯನ್ನರ ಬಳಕೆಯಲ್ಲಿದೆ. ಇದರಲ್ಲಿ ಯಕ್ಷಗಾನದಲ್ಲಿರುವ ಎಲ್ಲ ಅಂಗಗಳನ್ನೂ ಕಾಣಬಹುದು. ಪದ, ನೃತ್ಯ ಮತ್ತು ಸಂಗೀತ ಈ ಮೂರೂ ಇದರಲ್ಲಿ ಹಾಸು ಹೊಕ್ಕಾಗಿವೆ. ಇದು ಅಲ್ಲಿಯ ಅತ್ಯುತ್ತಮ ನಾಟಕವಂತೆ. ಇದನ್ನು ಅಲ್ಲಿ "ಲಂಗೇಂದ್ರಿಯ" ಎಂದು ಕರೆಯುತ್ತಾರೆ. ಇದರಲ್ಲಿ ಸಾಮಾನ್ಯವಾಗಿ ಆಟಕ್ಕೆ ತೆಗೆದುಕೊಳ್ಳುವ ಕಥೆ ವೀರ ಶೃಂಗಾರಮಯವಾದ ಜಾವಾರಾಜ ಮಧ್ಯಪಹಿತನದು.

ವಿದ್ಯೆ, ಸಂಸ್ಕಾರ, ಧರ್ಮಪ್ರಸಾರಕ್ಕೆ ಭಾರತೀಯ ಸಾಧನಗಳನ್ನು ಇಂಡೊನೇಶಿಯನ್ನರು ಬಳಸಿಕೊಳ್ಳುತ್ತಿರುವುದು ಭಾರತಕ್ಕೂ ಆ ನಾಡಿಗೂ ಇರುವ ಸಾಂಸ್ಕೃತಿಕ ಸಂಬಂಧಕ್ಕೆ ಜೀವಂತ ನಿದರ್ಶನವಾಗಿದೆ. ಪ್ರಾಚೀನ ಕಾಲದಿಂದ ನಡೆದುಬಂದ ಈ ಸಂಬಂಧ ಪುನರ್ಘಟಿತವಾಗಿ ಸ್ಥಿರ ಮೈತ್ರಿ ಬೆಳೆಯಲು ಭಾರತದ ಮುಖ್ಯ ಮಂತ್ರಿ ನೆಹರು ತಳೆದಿರುವ ವಿದೇಶ ಧೋರಣ ಮತ್ತಷ್ಟು ಸಹಕಾರಿಯಾಗಿದೆ. ಎಂಬುದನ್ನು ಏಶಿಯ ರಾಷ್ಟ್ರಗಳ ಪರಿಷತ್ತು ಉದಾಹರಿಸುತ್ತದೆ.

— ಚಿತ್ರಭಾನು

'ಸಂಸಾರ' ಚಿತ್ರಾಲಯದಲ್ಲಿ 'ಅಪೂರ್ವ' ಎಂಬ ಚಿತ್ರ ತಯಾರಾಗಿದೆ. ಅದರಲ್ಲಿ ಮಾನವ ಗುಣದ ವೈವಿಧ್ಯ, ಕೇಡಿಗತನದ ಕೌಶಲ್ಯ ಎರಡು ತಪ್ಪುಗಳು ಒಂದು ಸರಿಯನ್ನುಂಟು ಮಾಡುವುದು ಈ ಮೊದಲಾದ ಅದ್ಭುತಗಳನ್ನು ಕಾಣಬಹುದು.

ಜನಮತ

[illegible]

[illegible]


— [illegible]

ಚಂದಾದಾರರಲ್ಲಿ ವಿನಂತಿ

[illegible]

ಕರ್ಮವೀರ ಚಂದಾ ವಿವರ

[illegible]



ಭ್ರಮತ್ಯಾಗ

[illegible] Empty Expressions [illegible]

ಮಾನಸದಾಸ್ಯದ ಅಂತ

[illegible] Fair Sex [illegible] (It is hard for a slave to have any conception of emancipation) [illegible]

ಅನುಭವದ ಮಾತು

[illegible]

ಶಿಕ್ಷಣಶಾಲೆಯಗಳಲ್ಲಿಯೂ ಕಲಿಸ್ಯ ಕಲಿಸ್ಯ ಪತ್ರ ಅಕ್ಕ್ಯ ಮಾಡುವುದು, ಮನೆಯ ಒಡೆಯರು ಬಾಡಿಗೆದಾರರನ್ನು ಗೋಳು ಹುಯ್ದುಕೊಳ್ಳುವುದು, ಮುಂತಾದ ಯಾವ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸದೆ ಸ್ತ್ರೀಯ ಕಾಲಯಾಪನೆ ಮಾಡುತ್ತವೆ. ಅಲ್ಲದೆ, ಸದಸ್ಯರು ಪಕ್ಷಕಟ್ಟಿಕೊಂಡು ಜಗಳಾಡುವ ದನ್ನು 'ಕ್ಲಬ್ಬ'ಗಳಲ್ಲಿ ಕಾಣಬಹು ದಾಗಿದೆ. ಅವುಗಳಿಂದ ಸಾಂಸ್ಕೃತಿಕ, ಬೌದ್ಧಿಕ ಅಥವಾ ರಾಜಕೀಯ-ಈ ಯಾವ ಉನ್ನತಿಯನ್ನೂ ನಾವು ಸಾಧಿಸಲಾರೆವು."

ಮೂಲಕಾರಣ ಶೋಧವಿಲ್ಲ

ಮೇಲೆ ಹೇಳಿದ್ದೆಲ್ಲ ಅನುಭವಸಹಜವಿದೆ ಯಲ್ಲವೆ "ಸ್ತ್ರೀ ನೇತೃಗಳು ದೊಡ್ಡ ಪ್ರಶ್ನೆ [illegible] ಬಾಯಿ ಹಾಕುವುದು" ಕೂಡ ಅಜ್ಞಾನ, ಅರ್ಧಜ್ಞಾನ, ಪಕ್ಷಪಾತ, ನಿರಾಶೆ, ದ್ವೇಷ ಮುಂತಾದ ಹೃಬ್ದುದ್ಧಿ ದೌರ್ಬಲ್ಯ ಗಳಿಗೆ ವಶರಾಗಿ ಸಣ್ಣ ಪ್ರಶ್ನೆಗಳನ್ನು ದೊಡ್ಡ ವೆಂದು ತಿಳಿದು, ಅವುಗಳ ಮೂಲಕಾರಣ ಮತ್ತು ಆಭ್ಯಂತರ ಪರಿಹಾರಗಳನ್ನು ತರ್ಕಿಸ ಲಾರದೆ, ಇಲ್ಲದಲ್ಲಿಯೂ ಸೀಚೋಹಂಬುದ್ಧಿ ಯನ್ನು ಹುಟ್ಟಿಸಿ, ಅದನ್ನು ಮುಚ್ಚಿಕೊಳ್ಳಲು (ದೇಹ ಬುದ್ಧಿ ಸಾಮರ್ಥ್ಯಗಳನ್ನು ಹೆಚ್ಚಿಸಿ ಕೊಂಡು ಯೋಗ್ಯತೆಯನ್ನು ಬೆಳೆಸಿಕೊಳ್ಳ ಬಚ್ಚದೆ) ಕೃತಕವಾದ ಶ್ರೇಷ್ಠೋಹಂ ಬುದ್ಧಿ ಯನ್ನು ಪ್ರದರ್ಶಿಸಲು ಪ್ರಚೋದಿಸುವುದು ಸಮಾಜ, ಕುಟುಂಬಗಳಿಗೆ ಘಾತಕವಾಗಿದೆ ಎಂದು ಕಲಿತ ಹುಡುಗಿಯರು ಮುಂದಟ್ಟ ಮಾಡಿಕೊಳ್ಳಬೇಕು. ಸ್ತ್ರೀ ಪುರುಷರಿಗೆ ಈಗ ಇರುವ ಅಸುಖಗಳಿಗೆ ಯಾವ ಕಾಲದ, ಯಾರ ತಪ್ಪುಗಳು ಎಷ್ಟೆಷ್ಟು ಮಟ್ಟಿಗೆ ಹೊಣೆ; ಸ್ವತಃ ಅವರ ಬುದ್ಧಿ ಭಾವನೆಗಳು ಎಷ್ಟರ ಮಟ್ಟಿಗೆ; ಇವುಗಳ ಪರಿಹಾರಕ್ಕೆ ಯಾರ ಸಹಾಯ ಪಡೆದು ಯಾವ ರೀತಿ ಯಿಂದ ದುಡಿಯಬೇಕು ; ತಂತಮ್ಮ ಭಾವ ಶುದ್ಧಿಗೆ, ಪರಸ್ಪರರ ಬುದ್ಧಿಶುದ್ಧಿಗೆ ಯಾವ ಮಾನಸಿಕ ಶಿಕ್ಷಣ ಅಗತ್ಯ ಎಂಬ ಒಂದು ಅಂಶವನ್ನೂ ಲಕ್ಷ್ಯಕ್ಕೆ ತಂದುಕೊಳ್ಳದೆ ಬಡಾಯಿ ಕೊಚ್ಚುವವರು ಶುದ್ಧ ಮಂದಾ ತ್ಮರೇಸರಿ. ಇಂಥ ಉದ್ಧತ ನೇತೃಗಳ ಬಲೆಗೆ ಬೀಳುವ ಭ್ರಮೆಯನ್ನು ಬಿಟ್ಟಲ್ಲದೆ ನಮ್ಮ ಕಲಿತ ಹುಡುಗಿಯರ ಮನಸ್ಸಿಗೆ ಶಾಂತಿ ಲಭಿಸದು, ಅವರ ಪ್ರಿಯತಮರಿಗೆ ಅವರು ಪ್ರಿಯತಮೆಯರೆನಿಸರು ಎಂಬುದು ತರ್ಕ ಶುದ್ಧವೂ ಅನುಭವಸಿದ್ಧವೂ ಆದ ಮಾತು. ಬುದ್ಧಿಮತಿಯರಾದ ಸಹೋದರಿಯರು ಈ ಮಾತನ್ನು ಚೆನ್ನಾಗಿ, ಆಳವಾಗಿ ಮಥಿಸಿ ಮನನ ಮಾಡುವರೆಂದು ನನ್ನ ದೃಢ ವಿಶ್ವಾಸ.

— ಹಿರಿಯಕ್ಕ

ಲೆವಿ ವಸೂಲಿ
ಜಿಲ್ಲಾ ಮ್ಯಾಜಿಸ್ಟ್ರೇಟರ ಪ್ರಕಟನೆ

ಗೋದಿ, ಅಕ್ಕಿ, ಜೋಳ, ಸಜ್ಜೆ ಇವು ಗಳನ್ನು ೧೦೦ ಕ್ಕೆ ೧೦೦ ರಷ್ಟು ಮತ್ತು ಸಾವಿ ಸಮೆ, ರಾಗಿಗಳನ್ನು ೧೦೦ ಕ್ಕೆ ೧೫ ರಷ್ಟು ಲೆವಿ ಎಂದು ತೆಗೆದುಕೊಳ್ಳಲಾಗುವದು. ಅಕ್ಕಿ ಬದಲು ಭತ್ತ ಕೊಡುವದಾದರೆ ಅಕ್ಕಿಯ ೨ ತೂಕಕ್ಕೆ ಭತ್ತದ ೩ ತೂಕ ಕೊಡಬೇಕು- ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ಶಿಗ್ಗಾವಿ, ರೋಣ ನವಲಗುಂದ ತಾಲೂಕು ಹಾಗು ಮುಂಡರಗಿ ನರಗುಂದ ಪೇಟಾಗಳ ಲ್ಲಿಯ ರೈತರು ಲೆವಿ ವಸೂಲಿ ಪತ್ರಿಕೆಯಲ್ಲಿ ತೋರಿಸಿದಂತೆ ಜನೇವರಿ ೩೧ ರೊಳಗಾಗಿ ಮುಂಗಾರಿ ಧಾನ್ಯ ಮತ್ತು ಮಾರ್ಚ ೩೧ ರೊಳ ಗಾಗಿ ಹಿಂಗಾರಿ ಧಾನ್ಯವನ್ನು ಕೊಡಬೇಕು [illegible] ಮುಖಿತಾಗಿ ಧಾರವಾಡ ಜಿಲ್ಲಾ ಮ್ಯಾಜಿ ಸ್ಟ್ರೇಟರು ಪ್ರಕಟಿಸಿದ್ದಾರೆ.

ಹುಬ್ಬಳ್ಳಿಯ [illegible] ವ್ಯಾಪಾರಸ್ಥರಾದ ಶ್ರೀ [illegible] ಕೆಂಪಣ್ಣವರ ಇವರು [illegible] ದಲ್ಲಿ ಸರಕಾರೀ ಯೋಗ್ಯ [illegible] ಕಾಟಾಕಲ್ಲುಗಳಿಂದ ವ್ಯಾಪಾರ [illegible] ಶಿಕ್ಷೆ [illegible]

ಭಾರತದ ಆರ್ಥಿಕ ದುರವಸ್ಥೆಯ ಮೂಲವೇನು ?

(೩ ನೇ ಪುಟದಿಂದ)

ನಷ್ಟದ ವ್ಯಾಪಾರ

[illegible] ಸಂಖ್ಯೆಗಳನ್ನು [illegible] ಹಾಕಿದ 'ಈಸ್ಟರ್ನ್ ಇಕಾನಮಿಸ್ಟ' ಪತ್ರಿಕೆಯ ವರು ಇನ್ನೊಂದು ಅರ್ಥವತ್ತಾದ ಅಂಶವನ್ನು ಹೊರಗೆಡಹಿದ್ದಾರೆ. ಅದೆಂದರೆ ಈಗೆರಡು ವರ್ಷಗಳಿಂದ ನಮ್ಮ ರಾಷ್ಟ್ರೀಯ ವ್ಯವಹಾರ ಲಾಭದ್ದಾಗಿರದೆ ಹಾನಿಯದಾಗಿದೆ. ೧೯೩೯ ರಿಂದ ೪೭-೪೮ ರ ವರೆಗೆ ನಮ್ಮ ರಾಷ್ಟ್ರೀಯ ಉತ್ಪನ್ನ ಕ- ಉಳಿತಾಯ (ಸೇವಿಂಗ್ಸ)ದ ಸೇಕಡಾ ಪ್ರಮಾಣ ಕೆಳಗಿನಂತಿದೆ:

೧೯೩೯-೪೦	೯.೩%	೪೪-೪೫	೭.೮%
೪೦-೪೧	೧೧.೩%	೪೫-೪೬	೬.೮%
೪೧-೪೨	೧೮.೫%	೪೬-೪೭	-೫ ೦/೦ (ನಷ್ಟ)
೪೨-೪೩	೧೨.೦%	೪೭-೪೮	-೧.೦/೦
೪೩-೪೪	೧೩.೮ ೦/೦		

ಉಳಿತಾಯವೇ ಇಲ್ಲವೆಂದ ಮೇಲೆ ಹೊಸದಾಗಿ ಹಣ ತೊಡಗಿಸಿ ಉದ್ಯಮಗಳನ್ನು ಕಟ್ಟುವ ಕೆಲಸ ಕಠಿಣವಾಗುವದಿಲ್ಲವೆ ?

ಇದೆಲ್ಲವನ್ನು ನೋಡಿ ನಮ್ಮ ಮನಸಿನ ಮೇಲೆ ಮೂಡುವ ಚಿತ್ರ ಅಸುಂದರವೇ ಆಗಿ ತೋರುವದು ಖಂಡಿತ- ದೇಶದ ವಿಭಜನೆ ಯಿಂದ ಮುಖ್ಯವಾಗಿ ನಮ್ಮ ಕೃಷಿ ಉತ್ಪಾದನೆಗೂ ಗೌಣವಾಗಿ ಇತರ ಉದ್ಯೋಗಗಳಿಗೂ ಧಕ್ಕೆ ತಟ್ಟಿರುವದು ನಿಜ. ಅನೇಕ ದೊಡ್ಡ ದೊಡ್ಡ ಯೋಜನೆಗಳು-ಮುಖ್ಯವಾಗಿ ನೀರಾವರಿಯವು-ಸರಕಾರದ ವಿಚಾರದಲ್ಲಿರುವದೂ ನಿಜ. ಆದರೆ ಬರಿ ಇಷ್ಟರಿಂದಲೇ ಸುಧಾರಿಸದಷ್ಟು ಕೈಮೀರಿ ಹೋಗಿದೆ ಪರಿಸ್ಥಿತಿ. ಈಸ್ಟರ್ನ ಇಕಾನಮಿಸ್ಟ 'ಲೇಖಕನು' ಹೇಳುವಂತೆ ರಾಜಕೀಯ ವಿಚಾರದಲ್ಲಿ ನಾವು ಅತಿರೇಕವಾಗಿ ಮಗ್ನರಾಗಿದ್ದು ದೀರ್ಘ ಕಾಲದವರೆಗೆ ಆರ್ಥಿಕ ಪ್ರಶ್ನೆಯನ್ನು ಮೂಲೆಗೊತ್ತಿದ್ದು ತಪ್ಪಾಯಿತೆಂದು ತೋರುತ್ತದೆ. ಇಂದು ರಾಜಕೀಯಪರಿಸ್ಥಿತಿ ನಮ್ಮ ಮನೋಗತದಂತೆಯೆ ಆಗಿದೆ. ಆದರೆ ಆರ್ಥಿಕ ಸ್ಥಿತಿಯನ್ನು ಸರಿಪಡಿಸುವದು ಅಷ್ಟು ಸುಲಭವಾಗಿಲ್ಲ. ಅದು ಸಾಧಿಸಬೇಕಾದರೆ ಸರಕಾರ ಕೆಲ ವರ್ಷಗಳ ಮಟ್ಟಿಗಾದರೂ ನಿರ್ದಿಷ್ಟ ಧೋರಣೆಯನ್ನು ಹಾಕಿಕೊಂಡು ಕೆಲಸ ಮಾಡುತ್ತ ಹೋಗಬೇಕು ಪ್ರಸಂಗಕ್ಕೆ ನೇರವಾಗಿ ಸಂಬಂಧಿಸಿರದ ಸದ್ಯಃ ಫಲದಾಯಿಯಾಗದ ಆದರೆ ವಿಶಿಷ್ಟ ವರ್ಗಗಳಲ್ಲಿ ಶಂಕೆ ಅಸಮಾಧಾನಗಳನ್ನು ಮೂಡಿಸಬಹುದಾದ ಕೆಣಕುವ ಶಾಸನಗಳನ್ನು ಮಾಡುವದನ್ನು ಸದ್ಯಕ್ಕೆ ಬದಿಗಿರಿಸಿ ಉತ್ಪಾದನೆಯನ್ನು ಬೆಳೆಸುವ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು. ಕ್ರಾಂತಿಕಾರಿ ರಶಿಯಾ ಕೂಡ "ನೂತನ ಆರ್ಥಿಕ ಧೋರಣೆ"ಯೆಂದು ಕೆಲಕಾಲ ಬಂಡವಳಗಾರ ಪದ್ಧತಿಗೆ ಹಿಂದಿರುಗಿದ ಕಥೆಯನ್ನೂ ಅದರ ಸಾಫಲ್ಯವನ್ನೂ ನಾವು ಅರಿತಿದ್ದೇವೆ. ಜನತೆಯೂ ಪರಿಸ್ಥಿತಿಯ ಗಾಂಭೀರ್ಯವನ್ನು ಮನಗಂಡು, ರಾಜಕೀಯ ಅಭೀಷ್ಟಸಿದ್ಧಿಗಾಗಿ ಹೆಣಗಿದಂತೆ ಆರ್ಥಿಕ ಅಭಿವೃದ್ಧಿಗಾದರೂ ದೃಢಚಿತ್ತದಿಂದ ಪ್ರವೃತ್ತವಾಗಬೇಕು. ಇದೊಂದೇ ತರಣೋಪಾಯ.

ಮರಾಠಿ ಪತ್ರಕಾರರ ೯ ನೇ ಪರಿಷತ್ತು
ಶ್ರೀ. ದಿವಾಕರರಿಂದ ಪ್ರಾರಂಭ
ಶ್ರೀ. ಗಾಡಗೀಳರು ಅಧ್ಯಕ್ಷರು

ಮರಾಠಿ ಪತ್ರಕಾರರ ೯ ನೇ ಪರಿಷತ್ತು ಇದೇ ೧೫ ಕ್ಕೆ ಸಾಂಗಲಿಯಲ್ಲಿ ಸಾಂಗವಾಯಿತು ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿಗಳಾದ ಶ್ರೀ. ದಿವಾಕರ ರಂಗರಾಯರು ಪರಿಷತ್ತನ್ನು ಪ್ರಾರಂಭಿಸುತ್ತ ಮನನೀಯ ಭಾಷಣ ಮಾಡಿದರು. ಭಾರತದ ದಾಸ್ಯ ವಿಮೋಚನೆಗೆ ಪತ್ರಿಕೆಗಳು ಮಾಡಿದ ಕಾರ್ಯ ಅಷ್ಟಿಷ್ಟಲ್ಲ. ಈಗ ಜನತೆಯಲ್ಲಿ ವಿಚಾರ ಮತ್ತು ಭಾವನೆಗಳನ್ನು ಪ್ರಚೋದಿಸುವ ಶ್ರೇಷ್ಠ ಕಾರ್ಯವನ್ನು ಪತ್ರಿಕೆಗಳು ಮಾಡಬೇಕಾಗಿದೆ. ಈ ಕಾರ್ಯವನ್ನು ತಾವು ಎಷ್ಟರ ಮಟ್ಟಿಗೆ ಮಾಡಬಲ್ಲರೆಂಬ ಬಗ್ಗೆ ಪತ್ರಿಕೋದ್ಯಮಿಗಳು ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ಹಿಂದೆ ಆಂಗ್ಲಭಾಷಾ ಪತ್ರಿಕೆಗಳಿಗಿದ್ದ ಸ್ಥಾನವಿಂದು ದೇಶಭಾಷಾ ಪತ್ರಿಕೆಗಳಿಗೆ ಬಂದಿದೆ. ಅದನ್ನು ಅವರು ಯೋಗ್ಯವಾಗಿ ನಿರ್ವಹಿಸಬೇಕು. ಬಂಡವಲುದಾರರು ಪತ್ರಿಕೆಗಳನ್ನು ಗುತ್ತಿಗೆ ಹಿಡಿಯಲು ಪ್ರಯತ್ನಿಸುತ್ತಿರುವರು. ಇದರಿಂದ ಸ್ವತಂತ್ರ ವಿಚಾರ ಪ್ರಸಾರಕ್ಕೆ ವ್ಯತ್ಯಯ ಬರುವದು. ಅಮೇರಿಕೆಯಲ್ಲಿಯಂತೆ ಇಲ್ಲಿಯೂ ಬಂಡವಲುದಾರರ ಕೃಪಾಕಟಾಕ್ಷದಲ್ಲಿ ಪತ್ರಿಕೆಗಳು ಉಳಿಯುವಂತಹ ಪ್ರಸಂಗ ಬಾರದಿರಲಿ ಎಲ್ಲ ಭಾಷೆಗಳ ಗುಂಪಿನವರೂ ವಿಶಾಲ ಭಾವನೆಯನ್ನು ತಾಳಿ ಭಾಷಾನ್ವಯ ಪ್ರಾಂತಗಳನ್ನು ಪಡೆಯಬೇಕು ಎಂದು ಮುಂತಾಗಿ ಅವರು ಹೇಳಿದರು.

ಅಧ್ಯಕ್ಷರಾದ ಶ್ರೀ. ಪಾಂ. ವಿ. ಗಾಡಗೀಳರು ಪತ್ರಿಕೋದ್ಯಮದಲ್ಲಿಯೂ ರಾಷ್ಟ್ರೀಕರಣವಾಗಬೇಕೆಂದು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪ್ರತಿಪಾದಿಸಿದರು. ಈ ಸೂಚನೆ ಹೊಸದೆಂದು ಕಾಣಬಹುದಾದರೂ 'ಬಂಡವಲುದಾರರ ಕೈಯಲ್ಲಿ ಸಿಕ್ಕ ಪತ್ರಿಕಾ ವ್ಯವಸಾಯದ ಮೇಲೆ ಆಗುತ್ತಿರುವ ಗದಾಪ್ರಹಾರವನ್ನು ತಡೆಯಬೇಕಾದರೆ ರಾಷ್ಟ್ರೀಕರಣವೇ ಮದ್ದು ಎಂದು ಅವರು ಅಭಿಪ್ರಾಯಪಟ್ಟರು. ಸರಕಾರದವರು ಪತ್ರಿಕೆಗಳನ್ನು ನಡೆಸಬೇಕೆಂದು ನನ್ನ ಅಭಿಪ್ರಾಯವಿಲ್ಲ. ಆದರೆ ವಿಶ್ವವಿದ್ಯಾಲಯಗಳು ಈ ಹೊಣೆಗಾರಿಕೆಯನ್ನು ಹೊರಬೇಕು. ವಿಶ್ವವಿದ್ಯಾಲಯಗಳ ವಶದಲ್ಲಿ ಪತ್ರಿಕೆಗಳಿರುವದರಿಂದ ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವದಿಲ್ಲ. ಅಲ್ಲದೆ ಅದರಿಂದ ವಿಶ್ವವಿದ್ಯಾಲಯಗಳ ಉತ್ಪನ್ನವೂ ಹೆಚ್ಚುವದೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು. ಕಾರ್ಯನಿರತ ಪತ್ರಿಕೋದ್ಯಮಿಗಳು ಜಾಗತಿಕ ಮತ್ತು ನಗರ ಸಮಸ್ಯೆಗಳಿಗೇ ಮಹತ್ವ ಕೊಡಬೇಕು ಎಂದು ಮುಂತಾಗಿ ಅವರು ನುಡಿದರು. ಶ್ರೀ. ಪಟ್ವರ್ಧನರು ಸ್ವಾಗತಾಧ್ಯಕ್ಷ ಪೀಠದಿಂದ ಸಜ್ಜನರನ್ನು ಸ್ವಾಗತಿಸಿದರು.

ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧಗಳ ಪುನರ್ವಿಮರ್ಶೆಯಾಗಬೇಕು, ಪತ್ರಿಕೆಗಳ [illegible] ತೆಗೆದುಕೊಂಡ ಕ್ರಮದ ಬಗೆ ನ್ಯಾಯಾಲಯಗಳಲ್ಲಿ ವಿಮರ್ಶೆ ಮಾಡಿಸಿಕೊಳ್ಳುವ ಅಧಿಕಾರ ಅವುಗಳಿಗೆ ಇರಬೇಕು, ಪತ್ರಿಕಾಕರ್ತರು ಜಾತೀಯತೆ ಮತ್ತು ಹಿಂಸೆಗೆ ಪ್ರೋತ್ಸಾಹ ಕೊಡುವಂತೆ ವಿನಂತಿಸಲಾಗುವದು ಎಂದು ಪರಿಷತ್ತು ಸ್ವೀಕರಿಸಿದ ಮಹತ್ವದ ಗೊತ್ತುವಳಿಯಲ್ಲಿ ಹೇಳಲಾಗಿದೆ. ದರ್ ಸಮಿತಿಯ ವರದಿಯನ್ನು ನಿಷೇಧಿಸಿ ಸಂಯುಕ್ತ ಮಹಾರಾಷ್ಟ್ರ ಪ್ರಾಂತರಚನೆಗೆ ಪುರಸ್ಕಾರ ಕೊಡಲಾಯಿತು. ಪತ್ರಿಕೋದ್ಯಮಿಗಳ ಪರಿಸ್ಥಿತಿಯನ್ನು ಸುಧಾರಿಸಲು ಉಪಾಯ ಸೂಚಿಸಲು ಮುಂಬಯಿ ಸರಕಾರದವರೂ ಸಮಿತಿಯನ್ನು ಸ್ಥಾಪಿಸಬೇಕೆಂದು ಕೇಳಿಕೊಳ್ಳಲಾಯಿತು.

ಕರ್ನಾಟಕ

ಧಾರವಾಡ

[illegible] ಕಾಲೇಜಿನ ಮುಖ್ಯಾಧ್ಯಾಪಕರಾದ ಶ್ರೀ ಡಿ. ಡಿ. ಗುರುಮೂರ್ತಿಯವರು ಗದುಗಿನಲ್ಲಿ ಭಾರತವು ಶಿಕ್ಷ ಸಂಸ್ಕೃತಿಗೆ ಕೊಟ್ಟ ಕಾಣಿಕೆ; ಭಾರತವು ಕವಲುದಾರಿ [illegible] ದರು. ರೋಟರಿ ಕ್ಲಬ್ಬು ಹಾಗೂ ಮುನಿಸಿಪಲ್ ಹಾಯಸ್ಕೂಲಿನಲ್ಲಿಯೂ ಅವರ ಭಾಷಣಗಳಾದವು.

ಗದುಗಿನ ಕಾರ್ಪೋರೇಶ ಲಾಯಬ್ರರಿಯು ಸರಕಾರದಿಂದ ತಾಲೂಕವಾಚನಾಲಯವೆಂದು ಮನ್ನಣೆ ಹೊಂದಿದೆ.

ಧಾರವಾಡ ನಗರದಲ್ಲಿಯ ವಿದ್ಯುತ್ಕಂಪನಿ ಮತ್ತು ನಗರ ಸಮಿತಿಯವರಲ್ಲಿ ಬೀದಿಗಳಿಗೆ ದೀಪಹಚ್ಚುವದರ ಸಂಬಂಧದಲ್ಲಿ ತಕರಾರು ಉಂಟಾದ್ದರಿಂದ ನಗರದಲ್ಲಿ ಬೀದಿಗಳಿಗೆ ದೀಪವಿಲ್ಲದಂತಾಗಿದೆ ಇದನ್ನು ವಿಚಾರಿಸಲು ನಗರ ಹಿತರಕ್ಷಕ ಸಂಸ್ಥೆಯವರು ನೇಮಿಸಿದ ಸಮಿತಿಯವರು ವಿದ್ಯುತ್ಕಂಪನಿಯನ್ನು ನಗರ ಸಭೆಯವರೆ ಕೊಂಡುಕೊಳ್ಳಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಕಂಪನಿಯನ್ನು ಕೊಳ್ಳಲು ೭ ಲಕ್ಷ ರೂ. ಸಾಲ ತೆಗೆದು ೨೦ ವರುಷಗಳಲ್ಲಿ ಬಡ್ಡಿ ಸಹಿತ ಸಾಲ ಮುಟ್ಟಿಸಿದರೂ ವರುಷಕ್ಕೆ ೫೦ ಸಾವಿರ ರೂಪಾಯಿ ಲಾಭವಾಗುವದೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಶಿರಹಟ್ಟಿ ತಾಲೂಕ ರೈತರ ಪರಿಷತ್ತು ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಅಂಗಡಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಅವರ ಪತ್ನಿ ಶ್ರೀಮತಿ ಪದ್ಮಾವತಿ ಬಾಯಿ ಅಂಗಡಿಯವರೂ ಆ ಕಾಲಕ್ಕೆ ಮಾತಾಡಿದರು. ಶ್ರೀ ಅಂಗಡಿಯವರು ಸದ್ಯದ ಪರಿಸ್ಥಿತಿಯನ್ನು ವಿವರಿಸಿದರು. ಪದ್ಮಾವತಿ ಬಾಯಿಯವರು ಶೀಲದ ಮಹಿಮೆಯನ್ನು ಕುರಿತು ಮಾತಾಡಿದರು.

ಕರ್ನಾಟಕದಲ್ಲಿ [illegible] ಮತ್ತು [illegible] (ಬೆಳಗಾವಿ) ಈ [illegible] ಸ್ಥಳಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಟ್ಟಿಸುವ ಕಾರ್ಯವು ಪ್ರಾರಂಭವಾಗುವದು. ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ಕಟ್ಟಿಸುವ ಯೋಜನೆಯನ್ನು ಕೇಂದ್ರ ಸರಕಾರದವರು ಯುದ್ಧೋತ್ತರ ಯೋಜನೆಯಲ್ಲಿ ಹಾಕಿದ್ದು [illegible] ಕ್ಕಿಂದ ಮೊದಲು ಅದು ಕೈಕೊಳ್ಳಲ್ಪಡಲಿಕ್ಕಿಲ್ಲೆಂದು ಮುಂದಾಗಿ ಮುಂಬಯಿ ಸರಕಾರದ ಲೋಕೋಪಯೋಗಿ ಖಾತೆಯವರು [illegible] ತಿಳಿಸಿರುವರು.

ಹುಬ್ಬಳ್ಳಿಯಲ್ಲಿ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯವರು ನಡೆಸುತ್ತಿರುವ [illegible] ಪಾಲಿಟೆಕ್ನಿಕ್ ಕಾಲೇಜಿಗೆ [illegible] ಕಾಲೇಜಿನ [illegible] ದರು [illegible] ವಿದ್ಯಾರ್ಥಿಗಳು [illegible] ಈ ಕಾಲೇಜಿನಿಂದ ಹೊರಗಾಕಿದ್ದಾರೆ.

ಬೆಳಗಾವಿ

ಶ್ರೀ ಮಧ್ವಾಚಾರ್ಯರು ಬರೆದ ೩೭ ಗ್ರಂಥಗಳನ್ನು ಶ್ರೀ ಜಯತೀರ್ಥರ ಟೀಕಾ ಸಹಿತ, ಅವರ ಟೀಕೆ ಇಲ್ಲದಿದ್ದ ಗ್ರಂಥಗಳನ್ನು [illegible] ಪರೀಕ್ಷೆ ಕೊಟ್ಟವರಿಗೆ [illegible] ರೂಪಾಯಿ [illegible] ಈ ಸೌಲಭ್ಯ ಶ್ರೀ ಉತ್ತರಾದಿಮಠದ [illegible]

[illegible] ಗೋವಿಂದರಾವ ಕುಲಕರ್ಣಿ ವಕೀಲರ ಅಧ್ಯಕ್ಷತೆಯಲ್ಲಿ [illegible] ಕುಲಕರ್ಣಿಯವರು [illegible] ಕಾರಣಗಳನ್ನು [illegible] ಗೊತ್ತುವಳಿ ಸ್ವೀಕರಿಸಲಾಯಿತು. ಸರಕಾರದ ಅದಕ್ಕೆ [illegible]

ವಿಜಾಪುರ

ಹುನಗುಂದ ತಾಲೂಕಿನಲ್ಲಿ ಗೋಡಿಗೆ ಇಟ್ಟಂಗಿ ರೋಗ ತಗಲಿದ್ದರಿಂದ ಚಿಕಿತ್ಸೆಯನ್ನು ಬಾರದಂತಾಗಿದೆ. ದೀಪದ ಹಿಲುವಾಗಿ ಸರಕಾರದವರು ಈಗಿಂದಲೇ ವ್ಯವಸ್ಥೆ ಮಾಡುವದು ಉಚಿತವಾಗಿದೆ, ಬೆಳೇ ಹೋಳದ ಬೆಳೆ ಸಾಧಾರಣವಿದೆ.

ಬಾಗಲಕೋಟೆಯಲ್ಲಿ ಆರ್. ಎಸ್. ಎಸ್‌ದ ೨೦ ಹುಡುಗರಿಗೆ ರೆಸಿಡೆಂಟ ಮ್ಯಾಜಿಸ್ಟ್ರೇಟರು ೩ ರಿಂದ ೬ ತಿಂಗಳ ವರೆಗೆ ಶಿಕ್ಷೆ ವಿಧಿಸಿದರು. ೭ ಹುಡುಗರನ್ನು ಕಾಲಕರಿಂದ ಜಾಮೀನ ತೆಗೆದುಕೊಂಡು ಬಿಡುಗಡೆ ಮಾಡಲಾಯಿತು. ೩೮ ಹುಡುಗರು ಕ್ಷಮೆ ಬೇಡಿ ಬಂಧಮುಕ್ತರಾದರು.

[illegible] ಸ್ಟಿಟ್ಯೂಟನ್ನು ತಾಲೂಕ ವಾಚನಾಲಯವೆಂದು ಮುಂಬಯಿ ಸರಕಾರದವರು ಮನ್ನಿಸಿ ೪೫೦ ರೂಪಾಯ ಧನ ಸಹಾಯ ಮಾಡಿರುವರು.

ವಿಜಾಪುರದಲ್ಲಿ ಹರಿಜನ ಕನ್ಯಾ ಮಂದಿರದ ಹೊಸ ಕಟ್ಟಡದ ಪ್ರಾರಂಭ ಮಹೋತ್ಸವವು ಹರಿಜನ ಮಂತ್ರಿ ಶ್ರೀ ತಪಾಸೆಯವರಿಂದ ಮಕರ ಸಂಕ್ರಮಣದ ಶುಭ ಮುಹೂರ್ತದಲ್ಲಿ ಸಾಂಗವಾಯಿತು. ಹರಿಜನೊದ್ಧಾರದ ಬಗ್ಗೆ ಕಾಯದೆಗಳಿಗಿಂತ ಶ್ರೀ ಕಾರಖಾನೀಸರಂತಹ ನಿಷ್ಠ ಕಾರ್ಯಕರ್ತರ ಕಾರ್ಯವೇ ಹೆಚ್ಚೋಪಯುಕ್ತವೆಂದು ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು.

ಹರಿಜನ ಕಾರ್ಯಕರ್ತರಾದ ಕಾಕಾ ಕಾರಖಾನೀಸರ ಷಷ್ಠ್ಯಬ್ದಿ ಮಹೋತ್ಸವಕ್ಕಾಗಿನಿಧಿಸಂಗ್ರಹಿಸಬೇಕು ಹರಿಜನ ಕನ್ಯಾ ಮಂದಿರದಲ್ಲಿ ಅವರ ತೈಲಚಿತ್ರದ ಅನಾವರಣ ಮಾಡಬೇಕು. ಎಂದು ವಿಜಾಪುರದಲ್ಲಿ ಶ್ರೀ ಘೋರ್ಪಡೆಯವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಹರಿಜನ ಕಾರ್ಯಕರ್ತರ ಸಭೆಯಲ್ಲಿ ನಿರ್ಧರಿಸಲಾಯಿತು.

ಉತ್ತರ ಕನ್ನಡ

ಕಾರವಾರ ವೃತ್ತಪತ್ರಿಕಾಕರ್ತರು ಕಳೆದ ಸೋಮವಾರ ಸಭೆ ಸೇರಿ ಮುಂಬಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ. ಬ್ರೆಲ್ವಿಯವರ ನಿಧನಕ್ಕಾಗಿ ದುಃಖ ಪ್ರದರ್ಶಿಸಿದರು. ಪತ್ರಿಕಾ ವ್ಯವಸಾಯಕ್ಕಾಗಿ ಅವರು ಪಟ್ಟ ಪರಿಶ್ರಮಕ್ಕಾಗಿ ಅವರ ಗುಣಗಾನ ಮಾಡಲಾಯಿತು.

ಗೋವಾ ಸೀಮೆಯೊಳಗಿನ ರಾಷ್ಟ್ರೀಯ ಪ್ರವೃತ್ತಿಯ ಅನೇಕ ಜನರು ಹಿಂದೀ ಪ್ರದೇಶಕ್ಕೆ ಗುಳೇ ಬರುವ ಹವಣಿಕೆಯಲ್ಲಿ ಇರುತ್ತಾರೆಂದು ತಿಳಿದು ಬರುತ್ತದೆ. ಸ್ವಲ್ಪ ದಿವಗಳಲ್ಲಿ ಗೋವೆಗೆ ಸಿದ್ದೀ ಜನರ ಪಡೆಯೊಂದು ಬರುವದೆಂದು ಕೇಳಿ ಅಲ್ಲಿನ ಜನರು ಗಾಬರಿ ಗೊಂಡಿರುವರಂತೆ.

ಶಿರ್ಸಿಯ ಶ್ರೀ [illegible] ಭಂಡಾರದ ಸಂಬಂಧದ [illegible] ತಾಲೂಕ [illegible] ದೇವಾಲಯ ಕಮಿಟಿಯ ಸದಸ್ಯರ ವರ್ತನೆ ಅಷ್ಟೆ ಪಾರ್ಯವೆಂದು ಕಂಡು ಬಂದದ್ದರಿಂದ ಜಿಲ್ಲಾ ನ್ಯಾಯಾಧೀಶರು ಕಮಿಟಿಯ ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಿದ್ದಾರೆ [illegible] ಯೋಜನೆಯನ್ನು [illegible] ತಿಳಿಸಿದ್ದಾರೆ.

ಬಳ್ಳಾರಿ

[illegible]

[illegible] ಇಲ್ಲವೆ ತೋಂದರೆ ಕೊಡುವದು ನಮ್ಮ ಉದ್ದೇಶವಾಗಿರದೆ ತಮಗೆ ದೊರೆಯತಕ್ಕ ಹೋಟಗಿ ಸದ್ಯದ ಪರಿಸ್ಥಿತಿಯಲ್ಲಿ ಸಾಲುವದಿಲ್ಲೆಂಬುದನ್ನು [illegible] ನಿದರ್ಶನಕ್ಕೆ ತರುವದಕ್ಕಾಗಿಯೇ ರಾಜೀನಾಮೆ ಕೊಡಲಾಗುತ್ತಿದೆಯೆಂದು ಈ ಗೊತ್ತುವಳಿಯಲ್ಲಿ ಸ್ಪಷ್ಟೀಕರಿಸಲಾಗಿದೆ.

ದಕ್ಷಿಣ ಕನ್ನಡ

[illegible] ಕೆ. ಕೆ. ಶೆಟ್ಟಿ ಎಲ್ ಸಿ. [illegible] ನಾರಾಯಣರಾವ ಬಿ. [illegible] ಎಲ್. ಶೆಟ್ಟಿ ಮೊದಲಾದವರು ಮಾತನಾಡಿದರು.

[illegible] ಶ್ರೀ. ಟಿ. ವಿ. ಸುಂದರರಾಯರು ಮಂಗಳೂರಿಗೆ ಬಂದವರನ್ನು ಕಳೆದ ವಾರದಲ್ಲಿ ಆಯಾ ಪತ್ರಿಕೆಯ ಸಂಪಾದಕರು ಸತ್ಕರಿಸಿದರು. ಅದೇ ದಿನ ಶ್ರೀಯುತರು ಎಲೋಸಿಯಸ್ ಕಾಲೇಜಿನ ಕನ್ನಡ ಸಂಘದಲ್ಲಿ “ ಇಂದಿನ ಕಿರುಗಾದ ಸಮಸ್ಯೆಗಳ ” ಕುರಿತು ಭಾಷಣವಿತ್ತರು.

“ ಇಂಡಿಯನ್ ಡೆಂಟಲ್ ಕೌನ್ಸಿಲಿನ ” ಸದಸ್ಯರಾಗಿ ಮದ್ರಾಸ್ ಸರಕಾರವು ನೇಮಕ ಮಾಡಿದ ಡಾ. ಡಬ್ಲ್ಯು. ಎಸ್ ಮಂತಾಯಸ್ (ದಂತಚಿಕಿತ್ಸಾ ಸರ್ಜನ್) ಅವರು ಮಂಗಳೂರಿಗೆ ಬಂದಿದ್ದಾಗ್ಗೆ ಭಾರತ ದಂತ ವೈದ್ಯದ ಸಂಘದ ಜಿಲ್ಲಾ ಶಾಖೆಯವರೊಂದು ಸತ್ಕಾರ ಕೂಟವೇರ್ಪಡಿಸಿದ್ದರು. ಡಾ. ಯು. ಪಿ. ಮಲ್ಯ ಡಾ. ಜಿ. ಎಲ್. ಶಾಲ್ಯಾ ಡಾ. ಡಾ. ಎಸ್. ಎಸ್. ನಗರ್‌ಕರ್ ಡಾ. ರಾಮಚಂದ್ರ ರಾವ್ ಮೊದಲಾದವರ ಭಾಷಣಗಳಾದವು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಗಾಂಧಿ ಸ್ಮಾರಕ ನಿಧಿಗೆ ಈ ವರೆಗೆ ಸುಮಾರು ರೂ ೫೭೩೦೫ ರಷ್ಟೇ ಜಮೆಯಾಗಿದೆಯೆಂದೂ ಇನ್ನು [illegible] ದಿವಸಗಳೊಳಗೆ ಜಿಲ್ಲೆಯವರು ದಾನವಿತ್ತು ಕನಿಷ್ಠ ಪಕ್ಷ ಜಿಲ್ಲೆಯ ನಿಧಿಯನ್ನು ೧ ಲಕ್ಷಕ್ಕಾದರೂ ಏರಿಸಬೇಕೆಂದು ಶ್ರೀ. ಕೆ. ಆರ್. ಕಾರಂತರು ಜಿಲ್ಲೆಯವರಿಗೊಂದು ಮನವಿ ಮಾಡಿರುತ್ತಾರೆ.

ಬಾರಕೂರು ಮಕ್ಕಳ ಮಹಾ ಸಭೆಯೊಂದು ದಿನಾಂಕ ೧ ರಂದು ಶ್ರೀ. ಬಿ. ಅನಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಮಕ್ಕಳ ಪರವಾಗಿ ಬಿ. ಲಾವಿಸ್, ಡಿಸೋಜ, ಕೆ. ಚಂದ್ರಶೇಖರ ಶೆಟ್ಟಿ, ಮತ್ತು ಯಾಕೂಬ್ ಮೊದಲಾದವರ ಭಾಷಣಗಳಾಗಿ ಒಂದು ಮಕ್ಕಳ ಕೂಟ ಸ್ಥಾಪನೆಯಾಯಿತು.

ಸುರತ್ಕಲ್‌ದಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ||೧೫-೧-೪೯ನೇ ಶನಿವಾರ ದಿನ ಸಂಜೆ ಘಂಟೆ ೫ಕ್ಕೆ ಮಂಗಳೂರಿನ ಸುಪ್ರಸಿದ್ಧ ಎಡ್ವೊಕೇಟರಾದ ಶ್ರೀ. ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಅತಿ ಯಶಸ್ವಿಯಾಗಿ ಜರುಗಿತು. ಶ್ರೀ. ಕೆ. ಯಸ್. ಭಂಡಾರಕರ ಸೆಕ್ರೆಟರಿ ಸಿ. ಪಿ. ಸಿ. ಕಂಪನಿ ಲಿಮಿಟೆಡ್ ಇವರು ಶಾಲಾಸ್ತವನದ ಕಾರ್ಯವನ್ನು ನಡೆಸಿದರು.

ತಾ||೧೩-೧-೪೯ ರಲ್ಲು ಇದೇ ಶಾಲೆಯ ವಾರ್ಷಿಕ ಪಂದ್ಯಾಟಗಳ ದಿನಾಚರಣೆಯು, ಸುರತ್ಕಲ್, ರೆವಿನ್ಯೂ ಇನ್ಸ್‌ಪೆಕ್ಟರರಾದ, ಶ್ರೀ ಯನ್. ರಾಮರಾವ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಆಟಗಳ ಬಹುಮಾನ ವಿತರಣ, ಶಿವರಾಗ್ನಿ ಕಾರ್ಯಕ್ರಮಗಳೊಂದಿಗೆ ಜರುಗಿತು.

ಎಗ್ಸಿಕ್ಯುಟಿವ್ ಇಂಜಿನಿಯರ್ ಶ್ರೀ ಪರಬ್ರಹ್ಮಂ ಅವರು ಕಳೆದವಾರ ಮಂಗಳೂರಿಗೆ ಬಂದಿದ್ದು ಇಲ್ಲಿನ ಮತ್ತು ಮಲ್ಪೆಯ ಬಂದರಿನ ಮುನ್ನಿನ ಸಮಗ್ರವಾದ ಪರೀಕ್ಷೆಯನ್ನು ಸುಮಾರು ಒಂದು ವಾರ ನಡೆಯಿಸಿರುವರು. ಇವರು ಪಶ್ಚಿಮ ಕರಾವಳಿಯ ದೊಡ್ಡ ಬಂದರ ನಿರ್ಮಾಣ ಸಮಿತಿಯ ಅಸಿಸ್ಟೆಂಟ ಇಂಜಿನೀಯರಿದ್ದಾರೆ. ಇವರೊಡನೆ ಇಲ್ಲಿಯ ಪೋರ್ಟ್ ಆಫೀಸರ್ ಶ್ರೀ ರಾಮಚಂದ್ರ [illegible] ಸರ್ವೆಯಲ್ಲಿ ಭಾಗವ [illegible]

[illegible] ಆಲಿ, ಪಾಲ್, ಮಹಮ್ಮದ, ಎಂಬ ಮೂವರು ಕೆಲವು ದಿನಗಳ ಹಿಂದೆ ಮಂಗಳೂರಿಗೆ ಬಂದಿದ್ದು ಇಲ್ಲಿಂದ ಸುಮಾರು ೩೦೦ ರೂಪಾಯಿಗಳ ಬೆಲೆ [illegible] ಯನ್ನು [illegible] ಹಿಡಿಯಲ್ಪಟ್ಟರು. ಅವರಿಗೆ [illegible] ಮತ್ತು [illegible] ವಿಧಿಸಲಾಗಿದೆ.



[illegible]

ಹಿಂದುಸ್ತಾನ

ಮುಂಬಯಿ

ಪುಣೆಯ ಪಕ್ಕದ ಕಾಲೇಜಿನ ... ಕಟ್ಟಡಕ್ಕೆ ಮುಂಬಯಿ ಸರಕಾರದವರು ಈ ವರ್ಷಕ್ಕಾಗಿ ... ಸಾವಿರ ರೂಪಾಯಿ ಗ್ರಾಂಟನ್ನು ... ಕೊಟ್ಟಿದ್ದಾರೆ.

ಮುಂಬಯಿ ಸರಕಾರದವರು ಶ್ರೀ ಎಸ್. ... ಅವರ ಅಧ್ಯಕ್ಷತೆಯಲ್ಲಿ ... ಮಂಡಳವನ್ನು ನೇಮಿಸಿದ್ದಾರೆ. ಶ್ರೀ ... ಪ್ರಧಾನ, ... ಅಲ್ಲಿ ... ಬಿ. ಡಿ. ... ಮತ್ತು ಜೆ. ಎಸ್. ... ಇವರು ಮಂಡಳದ ಇತರ ಸದಸ್ಯರು. ಇವರು ಇದೇ ೧೫ ರಿಂದ ಕೆಲಸ ಪ್ರಾರಂಭಿಸುವರು. ಈ ಮಂಡಳವು ಸರ ... ಕಟ್ಟಡಗಳನ್ನು ಕಟ್ಟುವ ಕಾರ್ಯ ... ಮನೆಗಳ ಸಮಸ್ಯೆಯನ್ನು ... ಸಲಹೆ ಸಲ್ಲಿಸುವದು.

... ನ್ಯಾಯಮೂರ್ತಿ ಎನ್. ಎಚ್. ಸಿ. ... ಕಾಯದೆ ಶಿಕ್ಷಣ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

ಶ್ರೀ. ಸಿ. ಜಿ. ಥತ್ತೆಯವರು ಬರೆದು ... ಗಜಾನನ ಮುದ್ರಣಾಲಯದಲ್ಲಿ ... ಸಿದ ಜಯ ಬಲಭೀಮವೆಂಬ ಮರಾಠಿ ... ಕವನ್ನು ಮುಂಬಯಿ ಸರಕಾರದವರು ... ಮಾಡಿದ್ದಾರೆ.

... ಅಜಾದ ಹಿಂದ ದಳದವರು ಯುದ್ಧೋತ್ತರ ... ಪರಿಹಾರ ನಿಧಿಯ ಸವಲತ್ತು ... ಅರ್ಹರೆಂದು ನಿರ್ಣಯಿಸಲಾಗಿದೆ.

ಗುಜರಾಥ ಸಾಹಿತ್ಯ ಪರಿಷತ್ತಿನ ೧೭ ನೇ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಶ್ರೀ. ಕನ್ಹಯ್ಯಲಾಲ ಮುನಶಿಯವರು ಮುಂಬಯಿಯನ್ನು ಯಾವದೇ ಭಾಷಾ ... ಪ್ರಾಂತದಲ್ಲಿ ಸೇರಿಸದೆ ಅದರ ಆಡಳಿತವನ್ನು ಪ್ರತ್ಯೇಕವಾಗಿ ಸಾಗಿಸಿಕೊಂಡು ಹೋಗಬೇಕೆಂದು ಹೇಳಿದರು. ಮಹಾ ಗುಜರಾಥ ... ಪ್ರಾಂತದ ಬೇಡಿಕೆಯಲ್ಲಿ ಸಂಕುಚಿತ ಭಾವನೆ ... ಇರುವದಿಲ್ಲೆಂದೂ ಅವರು ಅಭಿಪ್ರಾಯ ಪಟ್ಟರು.

ಪಾಕಿಸ್ತಾನದಿಂದ ಬರುವ ಹಿಂದುಳಿದ ವರ್ಗ ... ನಿರಾಶ್ರಿತ ವಿದ್ಯಾರ್ಥಿಗಳಿಗೆ ಪ್ರಾಂತದಲ್ಲಿಯ ... ಹಿಂದುಳಿದ ವರ್ಗದ ವಿದ್ಯಾರ್ಥಿಗಳಂ ... ಮಾಧ್ಯಮಿಕ ಶಾಲೆಗಳ ಔದ್ಯೋಗಿಕ ... ಗಳು ಹಾಗು ಒಕ್ಕಲತನ ಪಶುಚಿಕಿತ್ಸೆ ... ವೈದ್ಯಕೀಯ ಕಾಲೇಜುಗಳನ್ನೊಳ ... ಎಲ್ಲ ಕಾಲೇಜುಗಳಲ್ಲಿ ಮಾಫಿ ಮತ್ತು ... ವೃತ್ತಿಗಳು ದೊರೆಯಬೇಕೆಂದು ಮುಂ ... ಸರಕಾರದವರು ವಿಧಿಸಿದ್ದಾರೆ.

ಬಡ ಸಾಗುವಳಿದಾರರಿಗೆ ತಗಾಯಿ ಸಾಲ ... ಕ್ಕಾಗಿ ಪುಣೆಯ ಕಲೆಕ್ಟರರ ಕಡೆಗೆ ... ೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಿತ್ತಲು ಬೀಜ ಮತ್ತು ಗೊಬ್ಬರ ... ವನ್ನು ಕೊಂಡುಕೊಳ್ಳಲು ಸಾಗುವಳಿ ... ರಿಗೆ ಅನುಕೂಲವಾಗಬೇಕೆಂದು ಈ ... ಜನೆ ಮಾಡಿದೆ. ಈಗಾಗಲೆ ಈ ಉದ್ದೇಶಕ್ಕಾಗಿ ಕಲೆಕ್ಟರರ ಕಡೆಗೆ ೧೫ ಲಕ್ಷ ರೂಪಾಯಿ ... ಲಾಗಿದೆ.

ಮಧ್ಯ ಪೂರ್ವದಿಂದ ಬಂದ ಒಂದು ಹಳೆಯ ... ದಲ್ಲಿ ೫ ಲಕ್ಷ ರೂಪಾಯಿಗಳ ಬಂಗಾರದ ... ಗಳು ಹಾಗು ನಾಣ್ಯಗಳು ಮುಚ್ಚಲ್ಪಟ್ಟಿ ... ಮುಂಬಯಿಯಲ್ಲಿಯ ಸುಂಕದ ಅಧಿಕಾರಿಗಳು ಕಂಡು ಹಿಡಿದು ಜಪ್ತ ಮಾಡಿದ್ದಾರೆ ... ಕಾರಿನ ಒಡೆಯರಾರೆಂಬುದು ಇನ್ನೂ ... ಗೊತ್ತಾಗಿಲ್ಲ. ಯಾರನ್ನೂ ಈ ಸಂಬಂಧದಲ್ಲಿ ... ಹಿಡಿದಿಲ್ಲ. ಹಡಗದಿಂದ ಇಳಿದ ಕೂಡಲೆ ... ಕಾರನ್ನು ಸಂಶಯದಿಂದ ತಪಾಸ ಮಾಡಲಾಗಿ ... ಲಿನಂತೆ ಬಂಗಾರ ಸಿಕ್ಕಿತು. ಕಳೆದ ಎರಡು ... ದಿನಗಳಿಂದ ೧೦೦೦೦೦ ರೂಪಾಯಿಗಳ ಬಂಗಾರವು ಇದೇ ರೀತಿ ಪ್ರಯಾಣಿಕರಿಂದ ದೊರೆತಿದೆ.

ಕಾಶ್ಮೀರ ಸೈನಿಕ ನಿಧಿಗೆ ಮತ್ತು ಕಾಶ್ಮೀರ ... ಪರಿಹಾರ ನಿಧಿಗೆ ಹಿಂದೀ ಚಲಚ್ಚಿತ್ರ ನಟ ನಟಿಯರು ಮತ್ತು ಪ್ರಸಿದ್ಧ ಕಲಾವಿದರು ಏರ್ಪಡಿಸಿದ ಮನೋರಂಜಕ ಕಾರ್ಯಕ್ರಮದಿಂದ ೬೦ ... ಸಾವಿರ ರೂಪಾಯಿಗಳು ಸಂಗ್ರಹಿಸಲ್ಪಟ್ಟವು. ... ಕಾಶ್ಮೀರ ಯುದ್ಧ ಸ್ಮಾರಕಗಳ ಶಿಲಾನಿಸಂಧ ... ಸಾವಿರ ಮತ್ತು ಶಿವಲಾಲ ಪ್ರದೇಶದಲ್ಲಿ ... ಸಿಕ್ಕ ಪಠಾಣರಿಂದ ದೊರೆತ ಯುದ್ಧದ ಲಿಖಾ ... ದಿಂದ ೫ ಸಾವಿರ ರೂ. ಸಂಗ್ರಹಿಸಲ್ಪಟ್ಟಿವೆ.

ಮದ್ರಾಸ

ಮದ್ರಾಸ ಕಾರ್ಪೊರೇಶನದವರು ಕೊಟ್ಟ ಮಾನಪತ್ರಕ್ಕೆ ಉತ್ತರಕೊಡುತ್ತ, ರಾಷ್ಟ್ರಾಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯನವರು ನಾಗರಿಕರ ಹಿತವನ್ನು ಗಮನಿಸುವದೇ ಪೌರ ಸಭಾ ಸದಸ್ಯರ ಅದ್ಯಕರ್ತವ್ಯವಾಗಿದ್ದು ಅದನ್ನು ಮಾಡುವವರೇ ಪೌರ ಸಭಾ ಸದಸ್ಯರಾಗಲು ಅರ್ಹರೆಂದು ಹೇಳಿದರು. ದಿಲ್ಲಿಯಂತೆ ಮದ್ರಾಸವು ಪ್ರತ್ಯೇಕವಾಗಿ ಕೇಂದ್ರ ಸರಕಾರಕ್ಕೆ ಹೊಣೆಗಾರವಾದ ಗವರ್ನರರ ಪ್ರದೇಶವಾಗಬೇಕು ಎಂದೂ ಅವರು ಹೇಳಿದರು.

ಮದ್ರಾಸದ ಅರ್ಥಸಚಿವ ಶ್ರೀ. ಬಿ. ಗೋಪಾಳ ರೆಡ್ಡಿಯವರು ಘಟನಾ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರು. ಆ ಸ್ಥಳವನ್ನು ಶ್ರೀ ಕಳಾ ವೆಂಕಟರಾಯರು ಸ್ಪರ್ಧಿಸಲಿರುವರು.

ಕಮ್ಯುನಿಸ್ಟ ಮುಖಂಡತ್ವವುಳ್ಳ ಸೌಥ ಇಂಡಿಯನ್ ಕೂಲಿಕಾರರಲ್ಲಿ ಸಂಪಿನ ಬಗ್ಗೆ ಮತಗಣನೆಯಾಗಿ ಒಟ್ಟು ಮತದಾನವಿತ್ತ ೨೦೩೬೦ ಜನರಲ್ಲಿ ೨೦೩೨೨ ಜನರು ಸಂಪಿನ ಪರವಾಗಿಯೂ ೪೦ ಜನರು ಮಾತ್ರ ವಿರುದ್ಧವಾಗಿಯೂ ಮತಗಳನ್ನು ಕೊಟ್ಟರು. ೫೦ ಸಾವಿರ ಒಟ್ಟು ನೌಕರರಲ್ಲಿ ೨೨೬೧೪ ಜನ ಮಾತ್ರ ಈ ಸಂಘದ ಸದಸ್ಯರಿರುವರು.

ತಿರುವಾಂಕೂರ,ಕೊಚ್ಚಿ ಮತ್ತು ಮಲಬಾರಗಳು ಕೂಡಿ ಸಂಯುಕ್ತ ಕೇರಳ ಪ್ರಾಂತವನ್ನು ಸ್ಥಾಪಿಸಲು ತಮ್ಮ ಒಪ್ಪಿಗೆಯಿದೆಯೆಂದು ಈ ಎರಡೂ ಸಂಸ್ಥಾನಗಳ ಮುಖ್ಯ ಮಂತ್ರಿಗಳು ಸುದ್ದಿಗಾರ ಸಭೆಯಲ್ಲಿ ಹೇಳಿದರು.

ಪಶ್ಚಿಮ ಬಂಗಾಲ

ಪೂರ್ವ ಬಂಗಾಲ ನಿರಾಶ್ರಿತರ ಮೆರವಣಿಗೆಯನ್ನು ಚದುರಿಸಲು ಪೋಲೀಸರು ಅಶ್ರುವಾಯುವನ್ನುಪಯೋಗಿಸಿದ್ದರ ನಿಷೇಧಾರ್ಥವಾಗಿ ೧೮ ನೇ ತಾರೀಕು ಕಲಕತ್ತೆಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮೆರವಣಿಗೆಯನ್ನು ತೆಗೆದಿದ್ದರು. ಪೋಲೀಸರು ಅದನ್ನು ತಡೆದರು. ಆಗ ಪೋಲೀಸರ ಮೇಲೆ ವಿದ್ಯಾರ್ಥಿಗಳು ಕಲ್ಲುಗಳನ್ನು ತೂರಿದರು. ಪೋಲೀಸರು ಅಶ್ರುವಾಯುವನ್ನು ಉಪಯೋಗಿಸಿದ್ದಲ್ಲದೆ ಗೋಳೀಬಾರನ್ನು ಮಾಡಬೇಕಾಯಿತು. ಇದರಿಂದ ಈರ್ವರು ಮರಣಹೊಂದಿದ್ದು ೧೫ ಜನರಿಗೆ ಗಾಯಗಳಾಗಿವೆ.

ಬುದ್ಧಗಯಾದಲ್ಲಿಯ ಮಹಾಬೋಧಿ ಗುಡಿಯನ್ನು ಜಾಗತಿಕ ಬೌದ್ಧ ಪ್ರತಿನಿಧಿಗಳ ಸಂಸ್ಥೆಗೆ ಒಪ್ಪಿಸಿದ್ದಾದರೆ, ಭಕ್ತ ಜನರು ಗುಡಿಯನ್ನು ಪ್ರವೇಶಿಸಿ ಪೂಜೆ ಮಾಡಲು ಅನುಕೂಲವಾಗುವದೆಂದು ಭಾರತ ಸರಕಾರಕ್ಕೆ ಜಾಗತಿಕ ಬೌದ್ಧ ಸಂಸ್ಥೆ ಕೇಳಿಕೊಂಡಿದೆ.

ಬಿಹಾರ

ಬಿಹಾರದಲ್ಲಿಯ ಪಾಟ್ನಾ, ಮುಜಫರ ನಗರ ಮತ್ತು ರಾಂಚಿಗಳಲ್ಲಿ ನಡೆದ ಇನ್‌ಕಂಟ್ಯಾಕ್ಸ ಡಿಪಾರ್ಟಮೆಂಟಿನ ಪರೀಕ್ಷೆಗಳನ್ನು ಒಂದು ನೂರು ವಿದ್ಯಾರ್ಥಿಗಳು ಬಹಿಷ್ಕರಿಸಿರುವರು.


ಪಾಟ್ನಾದಲ್ಲಿಯ ಕಾಲೇಜ ವಿದ್ಯಾರ್ಥಿಗಳು ೧೫ ನೇ ತಾರೀಕಿನಿಂದ ತಮ್ಮ ಟೆಸ್ಟ ಪರೀಕ್ಷೆಗಳನ್ನು ಬಹಿಷ್ಕರಿಸಿದ್ದು ೧೭ ನೇ ತಾರೀಕಿನ ದಿನ ವಿಶ್ವವಿದ್ಯಾಲಯದ ಉಪಕುಲಪತಿಗಳ ಭವನದೆದುರು ೭ ವಿದ್ಯಾರ್ಥಿಗಳು ಅನ್ನ ಸತ್ಯಾಗ್ರಹ ಹೂಡಿರುವರು. ಮುಖ್ಯ ಮಂತ್ರಿಮತ್ತು ಶಿಕ್ಷಣಮಂತ್ರಿಗಳ ಮನೆಗಳೆದುರೂ ಅನ್ನ ಸತ್ಯಾಗ್ರಹ ಪ್ರಾರಂಭವಾಗಿದೆ. ಸರಕಾರೀ ಭವನದ ಎದುರು ಅವರು ಸತ್ಯಾಗ್ರಹ ಹೂಡಲಿರುವರೆಂದೂ ತಿಳಿಯುತ್ತದೆ.

ರೇಲ್ವೆ ಕೆಲಸಗಾರರ ಬೇಡಿಕೆ ಅವ್ಯವಹಾರ್ಯವಾದುದು. ಸರಕಾರವು ಅದನ್ನು ಮನ್ನಿಸುವದು ಶಕ್ಯವಿಲ್ಲ, ಅವರ ಬೇಡಿಕೆಗಳು ನ್ಯಾಯ್ಯವಾಗಿಲ್ಲ ಎಂದು ಮುಂತಾಗಿ ಹಿರಿಯ ಕೂಲಿಕಾರ ಮುಖಂಡರಾದ ಶ್ರೀ ಎನ್. ಎಂ. ಜೋಶಿಯವರು ಇಂಡಿಯನ್ ನ್ಯೂಜ ಪೇಪರ ಅಲಾಯನ್ಸದ ಪ್ರತಿನಿಧಿಗಿತ್ತ ಸಂದರ್ಶನದಲ್ಲಿ ಹೇಳಿದರು.


ಮುಂಬಯಿಯಲ್ಲಿ ಪಿಸ್ತೂಲು ತೋರಿಸಿ ಒರ್ವ ಸರಾಫನ ಹಣವನ್ನು ದೋಚಿಕೊಂಡು ಹೋದದ್ದಕ್ಕಾಗಿ ಒಬ್ಬ ಫೌಜದಾರ ಮತ್ತು ಮೂವರು ಪೋಲೀಸರನ್ನು ಹಿಡಿಯಲಾಗಿದೆ.

ಕಾಂಗ್ರೆಸ ಕಾರ್ಯಸಮಿತಿಯ ಹೊಸ ಕಾರ್ಯದರ್ಶಿಗಳ

... ಪ್ರಾರಂಭ ... ಕ್ಷರು



ಶ್ರೀ. ಶಂಕರರಾವ ದೇವ



ಶ್ರೀ. ಕಳಾ ವೆಂಕಟರಾವ

ಸಂಯುಕ್ತ ಪ್ರಾಂತ

ವೆಸ್ಟ ಇಂಡೀಜ ಮತ್ತು ಈಸ್ಟರ್ಝೋನ ಕ್ರಿಕೆಟ ಸಂಘಗಳಲ್ಲಿ ಅಲಹಾಬಾದದಲ್ಲಿ ನಡೆದ ಕ್ರಿಕೆಟ ಪಂದ್ಯಾಟದಲ್ಲಿ ವೆಸ್ಟ ಇಂಡೀಜದವರು ೧೦ ವಿಕೆಟುಗಳಿಂದ ಪರಾಭವ ಹೊಂದಿದರು. ವೆಸ್ಟ ಇಂಡೀಜದವರು ಹಿಂದುಸ್ತಾನಕ್ಕೆ ಬಂದಂದಿನಿಂದ ಪರಾಭವ ಹೊಂದಿದ್ದು ಇದೇ ಮೊದಲ ಸಲ.

ಸರ್ ಬೆನಗಲ ರಾಮರಾಯರು ರಿಝರ್ವ ಬ್ಯಾಂಕಿನ ಗವರ್ನರರಾಗಿ ನೇಮಕ ಹೊಂದಿದ್ದರಿಂದ ಅವರ ಸ್ಥಳಕ್ಕೆ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಅಮೇರಿಕೆಯಲ್ಲಿ ಹಿಂದಿ ರಾಯಭಾರಿಗಳಾಗಿ ಹೋಗುವರೆಂದು ಸುದ್ದಿ.

ಹಿಂದಿಯನ್ನು ಹಿಂದುಸ್ತಾನದ ರಾಷ್ಟ್ರಭಾಷೆಯನ್ನಾಗಿಸಬೇಕು ಮತ್ತು ದೇವನಾಗರೀ ಲಿಪಿಯನ್ನು ಒಪ್ಪಿಕೊಳ್ಳಬೇಕು ಎಂದು ಹಿಂದೀ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸೇಟ ಗೋವಿಂದದಾಸರು ಅಲಹಾಬಾದದಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು. ಭಾಷೆಯ ಪ್ರಶ್ನೆಯನ್ನು ವಿಚಾರಿಸಲು ಗೋವಿಂದದಾಸರು ಹಿಂದುಸ್ತಾನದಲ್ಲೆಲ್ಲ ಸಂಚರಿಸಲಿರುವರು.

ಸರ್ ತೇಜಬಹಾದ್ದೂರ ಸಪ್ರು ಇವರ ಪ್ರಕೃತಿಯು ಅತ್ಯವಸ್ಥವಾಗಿದ್ದು ಚಿಂತಾಜನಕವಾಗಿದೆಯೆಂದು ತಿಳಿಯುತ್ತದೆ. ಕಳೆದ ಒಂದು ವರುಷದಿಂದ ಅವರು ಹಾಸಿಗೆ ಹಿಡಿದಿದ್ದು ಅವರ ಮೂತ್ರಾಶಯವು ಕೆಲಸ ಮಾಡದಂತಾಗಿದೆ. ಪೆನ್ಸಿಲಿನ್ ಇಂಜಕ್ಶನ್ ಮತ್ತು ಪ್ರಾಣವಾಯುವನ್ನು ಅವರಿಗೆ ಕೊಡಲಾಗುತಿದೆ.

ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಅನೇಕ ವರ್ಷ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿರುವ ಇನಾಮದಾರರು ಕಳೆದ ವಾರ ವಿಶ್ವವಿದ್ಯಾಲಯದಲ್ಲಿ ಒಕ್ಕಲತನ ಸಂಶೋಧನದ ಬಗ್ಗೆ ವಿಚಾರಪರಿಪ್ಲುತ ಭಾಷಣ ಮಾಡಿದರು. ಉಪಕುಲಪತಿಗಳಾದ ಪಂ. ಗೋವಿಂದ ಮಾಲವಿಯವರು ಅಧ್ಯಕ್ಷತೆ ವಹಿಸಿದ್ದರು.

ಯುಕ್ತಪ್ರಾಂತದ ಕ್ರಿಕೆಟ ಅಧ್ಯಕ್ಷರುಗಳಾದ ವಿಜಯನಗರದ ಮಹಾರಾಜರು ವೆಸ್ಟಇಂಡೀಜ ಸಂಘದವರು ಆಟ ಪ್ರಾರಂಭಿಸುವ ಮೊದಲು ವಿಂಧ್ಯಾಚಲದ ವಿಂಧ್ಯವಾಸನಿ ಗುಡಿಯಲ್ಲಿ ಪ್ರಾರ್ಥನೆ ಮಾಡಿ ದೇವರಿಗೆ ಬೇಡಿಕೊಂಡದ್ದರ ಪರಿಣಾಮವಾಗಿ ಅವರು ಸೋತರೆಂದೂ ಹಿಂದೆ ಎಂ. ಸಿ ಸಿ ಯವರು ಸೋತಾಗ ಕೂಡ ಅವರು ಹೀಗೆ ಮಾಡಿದ್ದರೆಂದೂ ಪ್ರಸಿದ್ಧವಾಗಿದೆ.

ಹೊಸದಿಲ್ಲಿ

ಹೈದರಾಬಾದದಲ್ಲಿ ಸದ್ಯಕ್ಕೆ ಜೋಪಾಸನಾ ಸರಕಾರವನ್ನಾಗಲಿ ನಡುಗಾಲ ಸರಕಾರವನ್ನಾಗಲಿ ಸ್ಥಾಪಿಸಲಾಗುವದೆಂದು ಹಬ್ಬಿದ ಸುದ್ದಿಯಲ್ಲಿ ಯಾವ ಸತ್ಯಾಂಶವು ಇಲ್ಲೆಂದು ಅಧಿಕೃತವಾಗಿ ಹೇಳಲಾಗುತ್ತದೆ.

ಭಾರತದಲ್ಲಿಯ ಆಹಾರ ಕೊರತೆಯನ್ನು ಹೋಗಲಾಡಿಸಲು ಹಿಂದುಸ್ತಾನ ಸರಕಾರದವರು ಸಿದ್ಧಪಡಿಸಿದ ಪಡಿಭೂಮಿ ಸಾಗುವಳಿ ಯೋಜನೆಯು ತತ್ವಕ್ಕೆ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸರ ಅಧ್ಯಕ್ಷತೆಯಲ್ಲಿ ಸೇರಿದ್ದ ಪ್ರಾಂತಿಕ ಆಹಾರ ಮಂತ್ರಿಗಳ ಪರಿಷತ್ತಿನಲ್ಲಿ ಒಪ್ಪಿಗೆ ಕೊಡಲಾಯಿತು.

ದಿಲ್ಲಿ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಸಂಘದ ಪ್ರಾರಂಭೋತ್ಸವವು ಡಾ. ವಿಜಯೀಂದ್ರ ರಾಯರ ಹಸ್ತದಿಂದ ಜರುಗಿತು. ಶ್ರೀ. ಎಚ್. ಎಸ್. ಪಾಟೀಲರು ಸಂಘದ ಗೊತ್ತುಗುರಿಗಳನ್ನು ಹೇಳಿದ ಬಳಿಕ ಡಾ॰ ರಾಯರು ಮಾತನಾಡುತ್ತ ನಮ್ಮ ಭಾಷೆ ಮತ್ತು ಪ್ರಾಂತದೊಡನೆ ಸಂಪರ್ಕ ಬೆಳಸಿಕೊಳ್ಳಲು ಈ ಸಂಘವು ಸಹಾಯಕವಾಗುವದೆಂದು ಹೇಳಿದರು. ಡಾ. ರಾಯರು ಈ ವರ್ಷದ ಅಧ್ಯಕ್ಷರಾಗಿದ್ದು ಶ್ರೀ ಸುರೇಂದ್ರನಾಥರು ಆಮಂತ್ರಕರಾಗಿರುವರು.

ಹಿಂದುಸ್ತಾನದ ಮುಖ್ಯ ಸೇನಾಪತಿಗಳಾಗಿ ನೇಮಕ ಹೊಂದಿದ್ದ ಜ. ಕಾರ್ಯಪ್ಪನವರು ಜನರಲ್ ಬುಶರರಿಂದ ೧೫ ನೇ ತಾರೀಖಿನ ದಿವಸ ಅಧಿಕಾರ ಸ್ವೀಕರಿಸಿದರು. ಕಾರ್ಯಪ್ಪನವರು ಸೇನಾಪತಿಗಳ ಹೊಣೆಗೆ ಹೋದ ಕೂಡಲೆ ಅಲ್ಲಿ ಮೊದಲೇ ಉಪಸ್ಥಿತರಾಗಿದ್ದ ಬುಶರರು ಅವರನ್ನು ಬರ ಮಾಡಿಕೊಂಡು ತಾವು ಕೂಡ್ರುತಿದ್ದ ಸೇನಾಪತಿಗಳ ಕುರ್ಚಿಯಲ್ಲಿ ಅವರನ್ನು ಕುಳ್ಳಿರಿಸಿ ಹಸ್ತಾಂದೋಲನ ಮಾಡಿದರು. ನಿವೃತ್ತ ಸೇನಾಪತಿಗಳು ಹೊರಗೆ ಬಂದ ಕೂಡಲೆ ಅವರಿಗೆ ಸೈನಿಕರು ಗೌರವ ರಕ್ಷೆಯನ್ನು ಕೊಟ್ಟರು.

ಶಿವಮೊಗ್ಗೆಯಲ್ಲಿ ೧೪ ನೇ ತಾರೀಖಿನ ದಿನ ಸಭೆ ಜರುಗಿಸಲು ಪ್ರಯತ್ನಿಸಿದ ಮತ್ತು ೧೫ ಕ್ಕೆ ಕೋರ್ಟಿನ ಮುಂದೆ ಪಿಕೆಟಿಂಗ ಮಾಡಲು ಪ್ರಯತ್ನಿಸಿದ ಆರ್. ಎಸ್. ಎಸ್‌ದ ೧೫ ಜನರು ಬಂಧಿಸಲ್ಪಟ್ಟು ತಲಾ ೩ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು. ಈ ವರೆಗೆ ಇಲ್ಲಿ ೨೬೭ ಜನ ಬಂಧಿತರಾಗಿದ್ದಾರೆ.

...ರದ ಭವಿಷ್ಯ

ಜ್ಯೋತಿಷಿ:- ಭಡೆ ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ

ಜನೆವರಿ ತಾ. ೨೪ ರಿಂದ ೩೦ ರ ವರೆಗೆ

ಮೇಷ

ಸ್ವಂತದ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳುಮರಿಗಳ ವಿಷಯದಲ್ಲಿ ಕೊಂಚ ಕ್ಲೇಶವಾಗುವ ಸಂಭವವುಂಟು. ಮಂದಿಯ ಕಾಟದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಗಂಡಹೆಂಡಿರು ತಂತಮ್ಮೊಳಗೆ ಸೋಗಿನ ಜಗಳವಾಡಿಕೊಳ್ಳಬಹುದು. ಈ ವಾರ ಅಧಿಕಾಂಶ ವಿಚಾರಗಳಲ್ಲಿ ಪ್ರಾಪಂಚಿಕ ಸುಖ ಚನ್ನಾಗಿದೆ. ಉದ್ಯೋಗದಲ್ಲಿ ಮಹತ್ವದ ಘಟನೆಗಳು ನಡೆದು ನಿಮ್ಮ ಅಧಿಕಾರ, ವರ್ಚಸ್ಸು, ಪ್ರತಿಷ್ಠೆ ಬೆಳೆಯುವದು. ಮಿತ್ರಸುಖವೂ ಉತ್ತಮವಾಗಿದೆ. ಪ್ರಿಯ ಮತ್ತು ಕಲಾಭಿಜ್ಞ ಜನರ ಸಹವಾಸದಲ್ಲಿ ವಿನೋದದಿಂದ ಕಾಲ ಕಳೆಯುವಿರಿ. ದ್ರವ್ಯಲಾಭವೂ ತುಂಬ. ವಾದ ಸ್ಪರ್ಧೆಗಳಲ್ಲಿ ನಿಮ್ಮ ಕೈ ಮೇಲಾಗುವದು. ಪ್ರವಾಸಾದಿ ಕಾರ್ಯಗಳು ಬಯಸಿದಂತೆ ನೆರವೇರುವವು. ಆದರೆ ನೀವು ಅಶ್ವಿನಿಯ ಕೊನೆಯ ಎರಡು ಮತ್ತು ಭರಣಿಯ ಮೊದಲಿನ ಎರಡು ಚರಣಗಳಲ್ಲಿ ಹುಟ್ಟಿದವರಾಗಿದ್ದರೆ ಮಾತ್ರ ಇಚ್ಛೆ ಈಡೇರಬೇಕಾದರೆ ಸ್ವಲ್ಪ ಕಷ್ಟಪಡಬೇಕಾದೀತು. ತಾ. ೨೬, ೨೭, ೨೯, ೩೦ ಅನುಕೂಲ ದಿನಗಳು.

ವೃಷಭ

ನಿಮ್ಮ ಪ್ರಕೃತಿಯೂ ತುಸು ಕೆಡುವದು, ಸಾಲದ್ದಕ್ಕೆ ಹೆಂಡತಿಯೊಡನೆ ಹೆಜ್ಜೆಹೆಜ್ಜೆಗೆ ಜಗಳ ಹುಟ್ಟುವ ಕಾರಣ ಮನಸು ಅಸ್ಥಿರವಾಗುವದು. ಹೆಂಡತಿಯ ಪ್ರಕೃತಿ ಉತ್ತಮ. ಮಕ್ಕಳ ಉನ್ನತಿಯಿಂದಲೂ ಸ್ಥಾವರ ಸಂಪತ್ತಿಯ ಹೆಚ್ಚಳದಿಂದಲೂ ಸಮಾಧಾನ ಹೊಂದುವಿರಿ. ಉದ್ಯೋಗದಲ್ಲಿ ಪ್ರಗತಿ, ಲಾಭ ಅಷ್ಟಕ್ಕಷ್ಟೇ ಆದರೂ ಪ್ರತಿಷ್ಠೆಗೇನೂ ಕೊರತೆಯಿಲ್ಲ. ಅನಿರೀಕ್ಷಿತತ ಲಾಭವೂ ಆಗುವ ಯೋಗವುಂಟು. ವಾದ ಮತ್ತು ಸ್ಪರ್ಧೆಗಳಲ್ಲಿ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರಗಳೇ ಫಲಪ್ರದವಾದಾವು. ಕೃತ್ತಿಕೆಯ ಎರಡು, ರೋಹಿಣಿಯ ಮೊದಲಿನೆರಡು ಪಾದಗಳಿಗೆ ತೊಂದರೆಯಿಲ್ಲದೆ ಇಷ್ಟಸಿದ್ಧಿಯಾಗದು. ತಾ. ೨೪, ೨೫, ೨೮, ೨೯ ಅನುಕೂಲ.

ಮಿಥುನ

ಆತ್ಮವಿಶ್ವಾಸವಿಲ್ಲದೆ ಯಾವ ಕಾರ್ಯವೂ ಕೈಗೂಡುವದು ಕಠಿಣವೆಂಬ ಮಾತು ಈ ವಾರ ನಿಮ್ಮ ನಿದರ್ಶನಕ್ಕೆ ಬರುವದು. ಏಕೆಂದರೆ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು ಚನ್ನಾಗಿದ್ದರೂ ನಿಮ್ಮ ಆತ್ಮವಿಶ್ವಾಸವೇ ಕುಂದುವ ಮೂಲಕ ಭೀತರಾಗುವಿರಿ. ಶತ್ರುಗಳು ಆಸೆ ತೋರಿಸಿ ಮೋಸಮಾಡುವದರಿಂದ ವಾದ ಸ್ಪರ್ಧೆಗಳಲ್ಲಿ ನಿಮ್ಮ ಕೈಯೇ ಮೇಲಾದರೂ ಅಷ್ಟು ಸಂತೋಷ ಸಿಗದು. ಸಾಲದ್ದಕ್ಕೆ ನಿಮ್ಮ ಪ್ರಕೃತಿ ಸ್ವಲ್ಪ ಕೆಡುವದು. ಹೆಂಡತಿ ಆರೋಗ್ಯವಾಗಿದ್ದು ಮಕ್ಕಳು ಲೌಕಿಕ ಕಾರ್ಯಗಳನ್ನು ಸಾಧಿಸಿದರೂ ಮನೆಯಲ್ಲಿ ಅವರ ವರ್ತನೆ ನಿಮಗೆ ಎಳ್ಳಷ್ಟೂ ಸರಿಹೋಗುವದಿಲ್ಲ. ಉಳಿದ ವಿಚಾರಗಳಲ್ಲಿಯೂ ಪ್ರಾಪಂಚಿಕ ಸುಖಕ್ಕೆ ಕೊರತೆಯೆ. ಮಿತ್ರರು ಉನ್ನತಿ ಹೊಂದುವರು. ಪತ್ರವ್ಯವಹಾರದಲ್ಲಿ ಕಾಲಕಳೆಯುವ ಬದಲು ಹೋಗಿ ಭೆಟ್ಟಿಯಾದರೆ ಒಳಿತು. ಆರ್ದ್ರೆಯ ಕೊನೆಯ ಎರಡು ಮತ್ತು ಪುನರ್ವಸುವಿನ ಮೊದಲಿನೆರಡು ಚರಣಗಳಿಗೆ ತೊಂದರೆ ಕಡಿಮೆ. ತಾ. ೨೬, ೨೭, ೩೦ ಅನುಕೂಲ.

ಕರ್ಕ

"ಧೈರ್ಯಂ ಸರ್ವತ್ರ ಸಾಧನಂ" ಎಂದು ಗಟ್ಟಿ ಮನಸು ಮಾಡಿಕೊಳ್ಳದೆ ಬೇರೆ ಹಾದಿಯಿಲ್ಲ ನಿಮಗೆ. ಈ ವಾರ ನಿಮ್ಮ ಪ್ರಕೃತಿ ನೆಟ್ಟಗಿದ್ದರೆ ಹೆಂಡತಿಯದು ಕೆಡುವದು. ಮಕ್ಕಳಿಂದ ಉತ್ಸಾಹಜನಕ ಕಾರ್ಯಗಳಾದರೆ ಇತರ ವಿಧದ ನಾನಾ ತಾಪತ್ರಯಗಳ ಕಾಟ ತಪ್ಪದು. ಉದ್ಯೋಗದಲ್ಲಿ ಅಧಿಕಾರ ಪ್ರತಿಷ್ಠೆ ಬೆಳೆದರೂ ನಿಜವಾದ ಪ್ರಗತಿ ಅಷ್ಟಕ್ಕಷ್ಟೆ, ಲಾಭದ ಮಾತು ಬಿಡಿರಿ, ನಷ್ಟವೇ ಆಗದಿದ್ದರೆ ಪುಣ್ಯ. ವಾದ ಸ್ಪರ್ಧೆಗಳಲ್ಲಿಯೂ ಎದುರಾಳಿಗಳ ಕೈ ಮೇಲು. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರವೇ ಲೇಸು. ಪುನರ್ವಸುವಿನ ಕೊನೆಯ ಎರಡು, ಪುಷ್ಯದ ಮೊದಲಿನ ಎರಡು ಚರಣಗಳಲ್ಲಿ ಹುಟ್ಟಿದವರು ವಿಶೇಷ ಚಿಂತಿಸಬೇಕಾಗಿಲ್ಲ. ತಾ. ೨೪, ೨೫, ೨೮ ಒಳಿತು.

ಸಿಂಹ

ಪ್ರಕೃತಿಗೆ ಬಹಳ ಕ್ಲೇಶ, ಪ್ರಾಪಂಚಿಕ ಸುಖವೂ ಇಲ್ಲ. ಮಕ್ಕಳು ಏಳಿಗೆ ಹೊಂದುವದೊಂದು ಶುಭ ಫಲವಲ್ಲದೆ ಸಮಾಧಾನದ ಮಾತು ಬೇರೆ ಸಿಗುವದು ದುರ್ಲಭವಾದೀತು. ಉದ್ಯೋಗದಲ್ಲಿ ಪ್ರಗತಿ ಸರಿಯಾಗಿದ್ದರೂ ಲಾಭಕ್ಕೆ ಸಂಚಕಾರವೆ. ಪ್ರತಿಷ್ಠೆಯೂ ಚನ್ನಾಗಿದೆ. ಆದರೆ ಬೆನ್ನ ಹಿಂದೆ ನಿಂದಿಸುವದರ ದೆಸೆಯಿಂದ ಮನಸು ನೊಂದುಕೊಳ್ಳುವದು. ಯಾರಿಗೆ ಯಾರಿಲ್ಲ ಎಂಬಂತೆ ಮಿತ್ರರೇ ನಿಮಗೆ ಅಡ್ಡಗಾಲು ಹಾಕುವರು. ಸ್ಥಾವರದಲ್ಲಿಯೂ ಅಷ್ಟಿಷ್ಟು ಹಾನಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಶತ್ರುವಿಗೆ ಇಮ್ಮಡಿ ಹಾನಿಯಾದರೂ ನಿಮಗೂ ಹಾನಿಯಾಗಿ ತೀರುವದು. ಪ್ರವಾಸ ಮತ್ತು ಭೆಟ್ಟಿಯಿಂದಾಗುವಷ್ಟು ಕೆಲಸ ಪತ್ರವ್ಯವಹಾರದಿಂದ ಆಗದು. ಮಘೆಯ ಕೊನೆಯ ೨ ಮತ್ತು ಪೂರ್ವದ ಮೊದಲಿನೆರಡು ಚರಣಗಳಿಗೆ ಇನ್ನಷ್ಟು ತೊಂದರೆ. ೨೬, ೨೭, ೩೦ ಅನುಕೂಲ.

ಕನ್ಯಾ

ಎಲ್ಲರ ಪ್ರಕೃತಿಯೂ ಸ್ವಸ್ಥವಾಗಿದ್ದರೂ ಮನೆಯಲ್ಲಿ ಇಲ್ಲದ ಕರಕರೆಗಳು ಹುಟ್ಟಿ ಮನಸು ಅಸ್ವಸ್ಥವಾಗುವದು. ಮಕ್ಕಳು ನಿಮ್ಮನ್ನು ಪೀಡಿಸಿ ಸಾಕೋಸಾಕು ಮಾಡಿಬಿಡುವರು. ಇದರ ಮೇಲೆ ಮಾವನ ಮನೆಯವರೂ ನಿಮ್ಮನ್ನು ಕಾಡಿ ತಲೆ ಕೆಡಿಸಿಬಿಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಮೂರೂ ಒಳಿತು. ಮಿತ್ರ ಸುಖವೂ ಇದೆ. ಪ್ರವಾಸಾದಿ ಕಾರ್ಯಗಳಿಗೆ ಮಧ್ಯಮ. ಉತ್ತರೆಯ ಕೊನೆಯ ಎರಡು, ಹಸ್ತದ ಮೊದಲೆರಡು ಚರಣಗಳಿಗೆ ಯಶ ಬೇಕಾದರೆ ಬಹಳ ಹೆಣಗಬೇಕಾದೀತು. ತಾ. ೨೪, ೨೫, ೨೯, ಅನುಕೂಲ.

ತುಲಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯೇನೋ ಸುಖವಾಗಿದ್ದರೂ ನಿಮ್ಮಿಬ್ಬರೊಳಗೆ ಒಂದು ಕ್ಷಣವೂ ಐಕ್ಯವಿರುವದು ಅಶಕ್ಯ. ಸಂತತಿಯಲ್ಲಿಯೂ ಇತರ ಪ್ರಾಪಂಚಿಕ ವಿಷಯಗಳಲ್ಲಿಯೂ ಅಪೇಕ್ಷಿಸಿದಂತೆ ಸುಖ. ಸ್ಥಾವರದಲ್ಲಿಯೂ ಹೆಚ್ಚಳ. ಆದರೆ ದಾಯಾದಿಗಳು ವಿಶೇಷ ಉಪದ್ರವ ಕೊಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಎಲ್ಲವೂ ಧಾರಾಳ. ಆದರೆ ಎಷ್ಟೋ ಪ್ರಸಂಗಗಳಲ್ಲಿ ಮಂದಿಯ ಬೊಗಸೆಯಿಂದ ನೀರು ಕುಡಿಯುವ ಪರಾವಲಂಬನವುಂಟಾದೀತು. ಮಿತ್ರರಲ್ಲಿ ವಿರೋಧ. ಪ್ರವಾಸ ದೂರದ್ದಾಗಿದ್ದರೆ ತ್ರಾಸದಾಯಕವಾಗಿದ್ದರೂ ಭೆಟ್ಟಿ ಪತ್ರವ್ಯವಹಾರಗಳಿಂದ ಅದೇ ಶ್ರೇಷ್ಠ. ವಾದ ಸ್ಪರ್ಧೆಗಳಲ್ಲಿ ಒಳ್ಳೇ ಅನುಕೂಲ. ಸ್ವಾತಿಯ ಕೊನೆಯ ಎರಡು ಮತ್ತು ವಿಶಾಖೆಯ ಮೊದಲಿನೆರಡು ಚರಣಗಳು ಅಷ್ಟು ಭಯಪಡಬೇಕಿಲ್ಲ. ತಾ. ೨೪, ೨೫, ೨೬, ೨೭, ಸುಖ.

ವೃಶ್ಚಿಕ

ಇದು ನಿಮ್ಮ ಪ್ರಸನ್ನ ಕಾಲ. ಪ್ರಕೃತಿ ಎಲ್ಲರದೂ ಆರಾಮವಾಗಿರುವದು. ಪ್ರಾಪಂಚಿಕ ಸುಖ ಮನದಣಿಯೆ. ಪ್ರಿಯ ಮತ್ತು ಪೂಜ್ಯ ಜನರ ಸಹವಾಸದಲ್ಲಿ ಕಾಲ ಕಳೆಯುವಿರಿ. ಉದ್ಯೋಗದಲ್ಲಿ ಪ್ರಗತಿ ಉತ್ತಮ, ಪ್ರತಿಷ್ಠೆ ಸಾಮಾನ್ಯವಾಗಿದ್ದರೂ ಲಾಭ ಧಾರಾಳ. ಧಂದೆಗಾರರಿಗಿಂತ ನೌಕರಿಯವರಿಗೆ ಸುಖ ಹೆಚ್ಚು. ವಾದ ಸ್ಪರ್ಧೆಗಳಲ್ಲಿ ಒಳ್ಳೆ ಯಶಸ್ಸು. ಯೋಗ ದಾದರೊಂದು ಧರ್ಮಕಾರ್ಯವಾಗಲಿ ಪುಣ್ಯಕ್ಷೇತ್ರ ಯಾತ್ರೆಯಾಗಲಿ ನಿಮಗೆ ಲಭಿಸುವದು. ಭೆಟ್ಟಿಗಿಂತ ಪ್ರವಾಸ ಪತ್ರವ್ಯವಹಾರ ಅನುಕೂಲ. ಆದರೆ ಅನುರಾಧೆಯ ಕೊನೆಯ ಎರಡು ಮತ್ತು ಜ್ಯೇಷ್ಠದ ಮೊದಲಿನ ಎರಡು ಚರಣಗಳಿಗೆ ತೊಂದರೆಯಿಲ್ಲದೆ ಇಷ್ಟಸಿದ್ಧಿಯಾಗದು. ತಾ. ೨೪,೨೫,೨೬,೨೭, ಒಳಿತು.

ಧನು

ನಿಮ್ಮ ಪ್ರಕೃತಿ ಸ್ವಸ್ಥವಾಗಿದ್ದರೂ ಹೆಂಡತಿಯದು ಅಷ್ಟು ನೆಟ್ಟಗೆ ಉಳಿಯಲಿಕ್ಕಿಲ್ಲ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಚನ್ನಾಗಿದೆ. ಸ್ಥಾವರದಲ್ಲಿ ಅನುಕೂಲ ಘಟನೆಗಳು. ವೆಚ್ಚ ಹೆಚ್ಚಾದರೂ ಹೇತು ಕೈಗೂಡುವದರಿಂದ ಮನಸಿಗೆ ಸಮಾಧಾನವಾಗುವದು. ಉದ್ಯೋಗದಲ್ಲಿ ಪ್ರಗತಿ ಚನ್ನಾಗಿದ್ದರೂ ಅದಕ್ಕಾಗಿ ತುಂಬ ಗಂಡಾಂತರದ ಪ್ರಸಂಗಗಳನ್ನು ಮೈಮೇಲೆ ತೆಗೆದುಕೊಳ್ಳಬೇಕಾದೀತು. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲಾವಸ್ಥೆಯಿದ್ದರೂ ಯಶಸ್ವಿಯಾದೇನೋ ಇಲ್ಲವೋ ಎಂದು ಮನಸ್ಸು ಶಂಕಾಕುಲ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ನೆಟ್ಟಗೆ. ಮೂಲದ ಕೊನೆಯ ಎರಡು ಮತ್ತು ಪೂರ್ವಾಷಾಢದ ಮೊದಲಿನ ಎರಡು ಚರಣಗಳಿಗೆ ತೊಂದರೆಯಿಂದಲೇ ಯಶ. ೨೬, ೨೭, ೩೦ ಒಳಿತು.

ಮಕರ

ಈ ವಾರ ನಿಮಗೆ ದೈಹಿಕ ಮಾನಸಿಕ ಕಷ್ಟಗಳನ್ನು ಎದುರಿಸುವ ಸರತಿ ಬರುವದು. ನಿಮ್ಮ ಪ್ರಕೃತಿ ಕೆಡುವದು. ಮನೆಯಲ್ಲಿಯೂ ಜಗಳ, ಹೊರಗೂ ವೈರ ಬೆಳೆಯುವ ಸಂಗತಿಗಳು ಜರಗುವವು. ಸ್ಥಾವರದಲ್ಲಿ ಸ್ವಲ್ಪ ಅನುಕೂಲ. ಮಕ್ಕಳು ಬೆದರಿಕೆ ಹಾಕಿ ನಿಮ್ಮ ಮನಸಿಗೆ ಒಗ್ಗದ ಎಷ್ಟೋ ಕೆಲಸಗಳನ್ನು ನಡೆಸಿಬಿಡುವರು. ಉದ್ಯೋಗದಲ್ಲಿ ಪ್ರಗತಿ, ಲಾಭಗಳಿಗೆ ಕುಂದಿಲ್ಲದಿದ್ದರೂ ಪ್ರತಿಷ್ಠೆ ತೀರ ಕಡಿಮೆ. ಬದಲಿಗೆ ಅಪ್ರತಿಷ್ಠೆಯ ಮಾತುಗಳೇ ಆಗುವವು. ವಾದ ಸ್ಪರ್ಧೆಗಳಲ್ಲಿ ಶತ್ರುಗಳ ಹಾರಾಟ ಬಹಳ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಉತ್ತರಾಷಾಢದ ಕೊನೆಯ ಎರಡು ಮತ್ತು ಶ್ರವಣದ ಮೊದಲಿನ ಎರಡು ಚರಣಗಳು ವಿಶೇಷ ಎಚ್ಚರಿಕೆಯಿಂದಿರತಕ್ಕದ್ದು. ತಾ. ೨೪,೨೫,೨೯ ಹಿತ.

ಕುಂಭ

ನಿಮ್ಮ ಪ್ರಕೃತಿ ಸುಖವಾಗಿದ್ದರೂ ಹೆಂಡತಿಗೆ ಮಾನಸಿಕ ವ್ಯಥೆ. ಮಕ್ಕಳು ಅಪ್ರಿಯ ಕಾರ್ಯಗಳಲ್ಲಿ ಪ್ರಸಕ್ತರಾಗುವ ಭಯವಿದೆ. ಇನ್ನುಳಿದ ಪ್ರಾಪಂಚಿಕ ವಿಚಾರಗಳಲ್ಲಿ ಇದ್ದದ್ದರಲ್ಲಿ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ, ಧಾರಾಳ ಲಾಭ ಒದಗಿದರೂ ಪ್ರತಿಷ್ಠೆಗೆ ಕುಂದು ಬರಬಹುದು. ಕೆಲವು ವಿಚಾರಗಳಲ್ಲಿ ಕ್ಷುದ್ರ ಲೋಕಾಪವಾದಗಳಿಗೆ ಗುರಿಯಾಗುವಿರಿ. ವಾದ ಸ್ಪರ್ಧೆಗಳಲ್ಲಿ ಎದುರಾಳಿಗಳು ಭಾರಿ ಹಾರಾಡುವರು. ಭೆಟ್ಟಿ ಪತ್ರವ್ಯವಹಾರಗಳಿಗಿಂತ ಪ್ರವಾಸವೇ ಲೇಸು. ಶತತಾರಿಕೆಯ ಕೊನೆಯ ಎರಡು ಮತ್ತು ಪೂರ್ವಾಭಾದ್ರಪದದ ಮೊದಲಿನೆರಡು ಚರಣಗಳಿಗೆ ತೊಂದರೆ ಕಡಿಮೆ. ತಾ. ೨೪, ೨೫, ೨೬, ೨೭ ಅನುಕೂಲ.

ಮೀನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಚನ್ನಾಗಿದ್ದರೂ ಮಕ್ಕಳ ಅವ್ಯಾಪಾರದಿಂದ ಇಬ್ಬರೂ ಬಹಳ ಕ್ಲೇಶಪಡುವಿರಿ. ಇನ್ನುಳಿದ ವಿಚಾರಗಳಲ್ಲಿಯೂ ತಾಪತ್ರಯಗಳು ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು ತೀರಳ ಆದರೂ ಕ್ಷುಲ್ಲಕ ಖರ್ಚುಗಳು ಬಹಳ ಹೆಚ್ಚುವವು. ಮಿತ್ರರಲ್ಲಿ ವಿರೋಧ. ವಾದ ಸ್ಪರ್ಧೆಗಳು ನಿಮ್ಮಂತೆಯೆ. ಪ್ರವಾಸಾದಿ ಕಾರ್ಯಗಳು ಹಿತಕರ. ಉತ್ತರಾಭಾದ್ರಪದದ ಕೊನೆಯ ಎರಡು ಮತ್ತು ರೇವತಿಯ ಮೊದಲಿನೆರಡು ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೪, ೨೫, ೨೬,೨೭ ಅನುಕೂಲ.

❋ ಆರ್. ಎಸ್. ಎಸ್ ದವರು ಬುದ್ಧಿಪೂರ್ವಕವಾಗಿ ಸರಕಾರೀ ಆಜ್ಞೆ ಮುರಿದು ಶಿಕ್ಷೆ ಹೊಂದಿರುವದರಿಂದ ಅವರಿಗೆ ಪರೀಕ್ಷೆಗೆ ಕೂಡಲು ಬೇರೆ ಸವಲತ್ತುಗಳನ್ನು ಕೊಡಲಾಗದು. ಆದರೆ ಅವರು ಪಶ್ಚಾತ್ತಾಪ ವ್ಯಕ್ತಮಾಡಿ ಒಂದು ವರ್ಷದ ಜಾಮೀನು ಕೊಡಲು ಸಿದ್ಧರಾದರೆ ಅವರನ್ನು ಬೇಗನೆ ಮುಕ್ತಮಾಡಲಾಗುವದು ಎಂದು ಮುಂಬಯಿ ಸರಕಾರದವರು ತಮ್ಮ ಕಡೆಗೆ ಈ ಬಗೆ ಬಂದ ಮನವಿಗಳಿಗೆ ಉತ್ತರವೆಂದು ಪ್ರಕಟಿಸಿದ್ದಾರೆ.

ಸ್ವಭಾವ ಚಿತ್ರ

ನಮ್ಮ ಭಟ್ರು

[ಕ್ಷೇತಜ್ಞ ಬರೆದುದು]

ಈ ನಮ್ಮ ಭಟ್ರು ದೊಡ್ಡ ಆಫೀಸರು. ಎಲ್ಲರಿಂ[illegible] ಒಳ್ಳೆಯ ಕೆಲಸಗಾರನೆಂದು ಹೇಳಿಸಿ[illegible]. ಹೇಳೆಯುವವಲ್ಲಿ ಎಷ್ಟು [illegible] ಬಾಕಿ ಇದ್ದರೂ ಬೇರೆಯ[illegible] ಕೆಲಸ ಮುಗಿಸಲು ರಾತ್ರಿ ಎಂಟು ಘಂಟೆ [illegible] ತನಗೆ [illegible] ಕೆಲಸವೆಲ್ಲ ನಾಲ್ಕು ಘಂಟೆಗೇ [illegible] ಸರಿಯಾಗಿ, ಚೊಕ್ಕವಾಗಿ. ಅವನಿಗೆ [illegible] ಎಲ್ಲಿಂದ ಬಂತೋ ತಿಳಿ[illegible]. ಆಫೀಸಿನಿಂದ [illegible] ಘಂಟೆಗೆ ಮನೆಗೆ ಬಂದವನೆ [illegible] ನಿದ್ರೆಗೆ [illegible]ತ್ತಾನೆ. ಊಟಕ್ಕೆ [illegible] ಎಬ್ಬಿಸುವ ತನಕವೂ ನಿದ್ರೆ. ಊಟ [illegible] ಕೈ ತೊಳೆಯಲೂ ಸರಿಯಾಗಿ [illegible]ವುದಿಲ್ಲ. ಮನಃ ಕಣ್ಣು ಮುಚ್ಚಿಕೊಳ್ಳು[illegible]ತ್ತಾನೆ. ಬಳಿಕ ಬೆಳಗ ಹತ್ತುವರೆ ತನಕ ನಿದ್ರೆ. [illegible] ಮೇಲೆ ಅರ್ಧ ಘಂಟೆಯಲ್ಲಿ ಸ್ನಾನ, ಊಟ, [illegible] ಹೋಗುವದು ಎಲ್ಲವೂ ಮುಗಿಯ[illegible]ಬೇಕು. ಹೇಗೆ ಮುಗಿಸುತ್ತಾನೊ ಅವನಿಗೇ [illegible]. [illegible] ಹೊಡೆಯುವಾಗ ಆಫೀಸಿ[illegible] ಭಟ್ರು ಹಾಜರಿ. ಅವನು ಕೆಲಸಕ್ಕೆ [illegible] ನೋಡಬೇಕು. ಎದುರಿಗೆ [illegible] ಸಿಕ್ಕಿದರೆ ನೂರು ಗಜ ಅತ್ತ [illegible] ಬೀಳಬೇಕು. ನನಗೆ ಯಾವಾಗಲೂ [illegible]. ಅವನು ನಡೆಯುವಾಗ ಎಲ್ಲಿ ಒಮ್ಮೆ [illegible] ಎಂದು. ಕೆಲವು ದಿನಗಳ ಹಿಂದೆ [illegible] ಭೂಕಂಪವಾಗಿದೆ [illegible] ಎಂದು ಪ್ರಕಟಿಸಿದರು. ಬಹುಶಃ ನಮ್ಮ ಭಟ್ರು [illegible]ಕ್ಕೆ ಇರಬೇಕೆಂದು ನನ್ನ [illegible]. ಏನಾದರೂ ಸಮಗಾರ ನಂಜಯ್ಯನಿಗೆ [illegible] ಎಷ್ಟು ಗಟ್ಟಿಯ, ಯಾವ [illegible] ತೆಗೆದುಕೊಂಡರೂ ಅದು ಹದಿನೈದು ದಿನ [illegible]. ಕೆಲವು ಸಮಯದ ಹಿಂದೆ [illegible] ಚಿತ್ರಸಹಿತ ಹಾಕಿದ "ಇದು [illegible] ಸವೆಯುವುದಿಲ್ಲ" ಎಂಬ [illegible] "ಎಡ್ವರ್ಟೈಸ್‌ಮೆಂಟ್" ನೋಡಿದೆ. [illegible] ಚಿತ್ರ ಯಾರದೆಂದು ಮಾಡಿದ್ದೀರಿ? ನಮ್ಮ [illegible] ಭಟ್ರುದು!

[illegible] ನಮ್ಮ ಗೆಳೆಯನು ಎಂದೆಂದಿಗೂ ಕೊಳೆ ಬಟ್ಟೆ [illegible] ಅಪ್ಪಿ-ತಪ್ಪಿಯಾದರೂ ಧರಿಸಿದವನಲ್ಲ. ಆದರೆ [illegible] ಕುಂಭಕರ್ಣನಿಗೆ ಬಟ್ಟೆಯನ್ನು ಮಡಿಗೆ [illegible] ಬಿಡುವೆಲ್ಲಿ ಸಿಗಬೇಕು? ಅಗಸನು [illegible] "ಏನಿಲ್ಲಯ್ಯಾ" ಎಂದು ಅರೆ [illegible] ಕಳುಹಿಸಿಬಿಡುತ್ತಾನೆ. ಬಟ್ಟೆ ಎಲ್ಲ [illegible] ಹೋಯಿತು. ಎಂದು ಅವನಿಗೆ [illegible] ಬಟ್ಟೆಯೆಲ್ಲ ಮಾಸಿ ಹೋದ ಮೇಲೆ [illegible] ತಡಬಡಿಸಿ [illegible] ಬಟ್ಟೆಯನ್ನು ಎಂಟಾಣೆ [illegible] "ಅರ್ಜೆಂಟ್" ವಾಶ್, ಮಾಡಿಸು[illegible]! ಇದು ಅವನ ಮರುಳತನ-ಮರುಳು [illegible]. ಮರುಳುತನ ಕೆಲವು ಕಾಲ ಮಾಡಿದರೆ [illegible] ಕಳೆಯನ್ನು ಕಳೆದುಕೊಂಡು ಅಭ್ಯಾಸ [illegible]ವುದಿಲ್ಲವೆ? ಹಾಗೆಯೇ ಅಭ್ಯಾಸ.

ಆದರೆ ಅವನು ಚೆನ್ನಾಗಿ ಓದಿದ್ದಾನೆ. ಅವನ [illegible] ಮಧ್ಯ ಇಷ್ಟೆಲ್ಲ ಹೇಗೆ ಓದಿರುವನು [illegible] ನನಗೆ ಬಹಳ ಆಶ್ಚರ್ಯ. ಕನ್ನಡದ [illegible] ಗ್ರಂಥಗಳಾದ ರನ್ನ, ಪಂಪ, ಪೊನ್ನ, [illegible] ಯಾರೋ ಇದ್ದಾರಲ್ಲ ಅವರು [illegible] ಬರೆದ ಗ್ರಂಥಗಳೆಲ್ಲ ಅವನಿಗೆ ಕೈಯಲ್ಲಿನ ನೆಲ್ಲಿ[illegible]ಕಾಯಿ ಮಾತ್ರವಲ್ಲ, ಬಾಯಿಗೆ ಹಾಕಿ ಜಗಿದು [illegible] ಜಗಿದು ತಿಂದು ಸಿಹಿ ನೀರು ಕುಡಿವನೆಲ್ಲಿಕಾಯಿ. [illegible] ಸವಿಯಾಗಿ [illegible] ಕೀರ್ತಿರಾಜನ [illegible] ಅವನು [illegible] ಕೈ ಬೆರಳು [illegible] ಬರುವಂತೆ ಮಾಡಿಕೊಂಡ [illegible]. ಬೇಂದ್ರೆ ಮೊದಲಾದ ಹೊಸ ಲೇಖ[illegible] ಗ್ರಂಥರಾಶಿಯನ್ನು ಓದಿ ತಲೆ ತೂಗಿ[illegible]. (ಭಾರ ಎಷ್ಟೆಂದು!) ಒಮ್ಮೊಮ್ಮೆ [illegible] ಯಾರಾದರೂ [illegible] ಬೇಕೆಂದು [illegible] ಗಂಭೀರ [illegible] ಮತ್ತು [illegible] ಸಂಚಿಕೆ [illegible] ಲೇಖನ [illegible] ಸಂಗ್ರ[illegible]

ಬರೆಯುಸುವಾಗಸುಬಾದಕರು ಹಿಂದು ಮುಂದೆ ನೋಡಿಕೊಂಡು ಅವನ ಬಳಿಗೆ ಹೋಗಲಿ. ಅವನಿಗೆ ಚಿಕ್ಕ ಲೇಖನ ಬರೆದು ಗೊತ್ತೇ ಇಲ್ಲ. ಇಪ್ಪತ್ತು ಪುಟಗಳಿಂದ ಕಮ್ಮಿಯ ಲೇಖನವು ಅದೊಂದು ಲೇಖನವೇ ಎಂದು ಅವನ ಪ್ರಶ್ನೆ! ಪತ್ರಿಕೆಯವರಿಗೆ, ಜಾಹೀರಾತು ಹಾಕಲು, ಸಿನೆಮಾ ತಾರೆಗಳ ಚಿತ್ರಗಳನ್ನು ಮುದ್ರಿಸಲು, ಗಾಂಧಿ-ನೆಹರು ಫೋಟೋಗಳಿಂದ ಪತ್ರಿಕೆಯನ್ನು ಅಲಂಕರಿಸಲು, ಸ್ಥಳವೆ ಸಾಕಾಗದೆ ಹೋದೀತು! ಅವನ ಲೇಖನಕ್ಕೆ ಕತ್ತರಿಯ ಪ್ರಯೋಗ ಮಾಡಿದರಂತೂ ಮುಗಿಯಿತು; ಅವನ ತೀಕ್ಷ್ಣ ನಾಲಗೆಯಿಂದ ಹತ್ತು ಮಂದಿ ಚಂದಾದಾರರನ್ನು ಪತ್ರಿಕೆಯವರು ಕಳಕೊಂಡಂತೆಯೆ.

ಅವನ ಗುಣವಿಶೇಷಗಳು ತಿಳಿಯದಿದ್ದಲ್ಲಿ ಅವನ ಕೆಲವು ಮಾತಿನಿಂದ ನೊಂದು ಬಳಿಕ ಅವನ ಮನೆಯ ಮೆಟ್ಟುಕಲ್ಲನ್ನು ಹಲವು ಮಂದಿ ಗೆಳೆಯರು ಪುನಃ ಹತ್ತರು. ಅವನು ನಿದ್ದೆಯ ಗುಂಗಿನಲ್ಲಿರುವಾಗ ಮಿತ್ರರು ಬಂದರೆ ನಿನ್ನನ್ನು ಯಾರು ಬರಹೇಳಿದರು? ನಡಿ "ಗೆಟ್ ಔಟ್" ಎಂದು ಅವನು ಎನಿತೊ ಬಾರಿ ಹೇಳಿದವನು. ತಿಂದಿ ಕೊಟ್ಟನೆಂದು ಬೇಗ ಬೇಗ ತಿಂದರೆ "ಹಟ್ಟೆ ನೆಕ್ಕಲಿಕ್ಕೂ ಹೇಸ ಲಿಕ್ಕಿಲ್ಲ" ಎಂದು ತಲೆಗೆ ಹೊಡೆದಂತೆ ಹೇಳಿ ದುದೂ ಇದೆ. ಯಾರಾದರೂ ತಮ್ಮ ಪ್ರಣಯ ದಲ್ಲಿ ಭಗ್ನರಾದವರಿದ್ದರೆ "ನಿನಗೆ ಬಹಳ ಸೊಕ್ಕು. ಹಾಗೆಯೇ ಆಗಬೇಕು" ಎಂದು ಒರಟು ಬುದ್ಧಿ ತೋರಿದ ಉದಾಹರಣೆಗಳು ಇಲ್ಲದಿಲ್ಲ. ಆದರೆ ಅವನ ಆತ್ಮದಲ್ಲಿ ಹಾಗೇನೂ ಇಲ್ಲ. ಗೆಳೆಯನು ಕಷ್ಟದಲ್ಲಿದ್ದರೆ ಪರಿತಾಪ ಪಡುವವ್ಯಕ್ತಿಯೆಂದುಎಲ್ಲರಿಗೂತಿಳಿದ ಸಂಗತಿ. ಆದುದರಿಂದ ಅವನು ಏನೆಂಧರೂ ಸುಮ್ಮನೆ ಒಮ್ಮೆ ನೋವುವಾದರೂ ಅದನ್ನು ಮರೆದು ಅವನ ಗೆಳೆತನವನ್ನು ಯಾರೂ ಬಿಡಲಾಲರು!

ಅವನ ಹಸಿವೆ ಹೆಸರುವಾಸಿಯಾದುದು. ಹಗಲಿರುಳು, ಎಡೆಬಿಡದೆ ಒಂದು ನಿಮಿಷವೂ ವ್ಯರ್ಥವಾಗಿ ಹೋಗದಂತೆ ಗೊರಕೆ ಹೊಡೆಯುವ ಈ ಹೆಬ್ಬಾವಿಗೆ ಏನು ಹಸಿವೆಯೋ. ಒಂದು ಬಾರಿ ಅವನ ಹೆಂಡತಿ ತವರಿಗೆ ಹೋಗಿದ್ದಳು. ಒಂದೆರಡು ದಿನ ಭಟ್ಟ ಹೋಟಲಿನಲ್ಲಿ ನಾಲ್ಕು ಡಿಸ್ಸು ಎಂದು ಕೊಡುವ ಎರಡು ಡಿಸ್ಸು ಅನ್ನ ಉಂಡು ಕಂಗಾಲಾದ. ಅದಕ್ಕೆ ಸರಿಯಾಗಿ ಕೆಲಸದ ಮೇಲೆ ಅವನ ಗೆಳೆಯ-ಅವನ ಹೆಸರು ನನಗೆ ತಿಳಿಯದು, ಅವನನ್ನು ಎಲ್ಲರೂ ಕರೆಯುವುದು "ಜಾರ್ಜ ಟೌನೆಂದು" ಬಂದ. ಇಬ್ಬರೂ ಒಂದೇ ತೆರನಾದವರು. ಒಂದೂವರೆ ಸೇರಕ್ಕಿ ಬೇಯಿಸಿದರೆ ಎಲೆ ಬಿಟ್ಟು ಏಳಲು ಮನಸ್ಸು ಮಾಡುವ ಮನಸ್ಸುಳ್ಳ ಜನರು. ಹಾಗೆ ಉಂಡ ಮೇಲೂ ಎಂಟು ಡಜನು ಬಾಳೆಯ ಹಣ್ಣಿಗೂ ಹತ್ತು ಕಪ್ಪು ಕಾಫಿಗೂ ಅವರಲ್ಲಿ ಸುಲಭದಲ್ಲಿ ಎಡೆಯಿದೆ. ನನಗೆ ಕಾಣುತ್ತಿದೆ, ಅವರನ್ನು "ಎಕ್ಸರೇ" ತೆಗೆಯಿಸಿದ್ದರೆ ಅವರ ಎದೆಯಲ್ಲೊ, ತೊಡೆಯಲ್ಲೊ, ಭುಜದಲ್ಲೊ-ಇನ್ನೆರಡು ಹೊಟ್ಟೆಗಳಾದರೂ ಕಾಣಸಿಗಬಹುದೆಂದು! ಹೊಟ್ಟೆ "ಬೇಲೂನಿ"ನಂತೆ ಉಬ್ಬಿಕೊಂಡಿರದಿದ್ದರೂ, ಇವರು ಹೀಗೆ ತಿಂದರೆ ಅದೆಲ್ಲಿ ತಂಗಬೇಕು.! ಜಾರ್ಜ ಟೌನ್ [illegible] ಬರುವಾಗ ಅವನು ಒಂದು [illegible] ಉಂಡೆ ತಂದಿದ್ದ. [illegible] ರವೆ ಉಂಡೆ. ಅವನಿಗೆ "ಹಸಿವೆ"ಯ ತಿಳುವಳಿಕೆ ಇಲ್ಲದಿಲ್ಲ. ಆದುದರಿಂದ ಅದನ್ನು ಭಟ್ಟನಿಗೆ ತೋರಿಸಲೇ ಇಲ್ಲ. ಆಫೀಸಿಗೆ ಭಟ್ಟ ಹೋದಬಳಿಕ ಅದನ್ನು ಬರಿದು ಮಾಡಬೇಕೆಂದು ಯೋಚಿಸಿದ್ದ. ಆದರೆ ಭಟ್ಟನಿಗೆ, ಜಾರ್ಜಟೌನ್ ಸೆಂಟ್ರಲ್ ಸ್ಟೇಶನಿನಲ್ಲಿ ಇಳಿದಾಗಲೆ ಅದರ ಪರಿಮಳ ಬಂದಿರಬೇಕು. ಜಾರ್ಜಟೌನ್ ನಾಲಿಗೆ ಬಿಗಿ ಹಿಡಿದುಕೊಂಡು ಸಿದ್ದ. ಹೋದ ಬಳಿಕ ಭಟ್ಟ ಐವತ್ತೆರಡೂವರೆ ರವೆ ಉಂಡೆ ತಿಂದು ಉಳಿದ ಅರ್ಧವನ್ನು ಡಬ್ಬಿಯಲ್ಲಿಟ್ಟು, ಅರಿಯದವನಂತೆ ಸರಿಯಾಗಿ ನಿದ್ದೆ ಹೋದ. ಈ ಹೋಟೆಲು ಊಟ ಪೂರೈಸದೆಂದು ಇಬ್ಬರೂ ಬೆಳಿಗ್ಗೆ ಎದ್ದೊಡನೆ ಒಂದು ಸೇರಕ್ಕಿಯ ನಳಪಾಕ ಮಾಡಿ ತಿಂದು ಮುಗಿಸಿದರು. ಭಟ್ಟ ಆಫೀಸಿಗೆ ಹೊರಟು [illegible] ಘಂಟೆಗೆ ಬರುತ್ತೇನೆಂದು ಹೊಟ್ಟೆ ಉಳಿದು ಹೋದ. ಸಮಯ ಕಾಯುತ್ತಿದ್ದ ಜಾರ್ಜ ಟೌನ್ ಮೆಲ್ಲಗೆ ಡಬ್ಬಿ ತೆಗೆದು ನೋಡುತ್ತಾನೆ. ಅವನ ಮುಖ ಪೆಚ್ಚಾಯಿತು! ಹಿಂದಿನಿಂದ "ಹೆಗ್ಗಣ ತಿಂದಿರಬೇಕು" ಎಂದು ದೊಡ್ಡ ನಗೆ ಕೇಳಿ ಬಂತು. ಭಟ್ಟ ಹೋಗಿಯೇ ಇರಲಿಲ್ಲ. ಈ ಕಳ್ಳ ಓಗೆ ಮಾಡುತ್ತಾನೆಂದು ಯೋಚಿಸಿದ್ದ ಅವನು ಹಿಂದುರುಗಿ ಬಂದಿದ್ದ. ಜಾರ್ಜ ಟೌನ್ ಹೊಟ್ಟೆ ತುಂಬಬಿದ್ದರೂ "ಅರೆ ಹೆಗ್ಗಣ ಅರ್ಥ ಆದರೂ [illegible]" ಎಂದು ಹೊಟ್ಟೆ ತುಂಬ ನಕ್ಕ!

[illegible]

ಮತ್ತೆ ರೇಶನ್?

(೨ನೇ ಪುಟದಿಂದ)

ಸಿಟ್ಟು ನೆತ್ತಿಗೇರಿತು. ತನ್ನ ಕಬ್ಬಿಣದಂತಹ ಕೈ ಎತ್ತಿ, ಪೋಲೀಸನೊಬ್ಬನ ಮೋರೆಯ ಮೇಲೆ ಜೋರಾಗಿ ಬೀಸಿಬಿಟ್ಟ. ಪೋಲೀಸ ಮೊಪ್ಪನೆ ನೆಲಕ್ಕೆ ಬಿದ್ದ; ಎಚ್ಚರತಪ್ಪಿತು.

ಬೆಳಗಾಗುವದರೊಳಗೆ ಸಿಂಗ ಕಚೇರಿಯ ಕೋಣೆಯೊಂದರಲ್ಲಿ ಸರಳುಗಳನ್ನೆಣಿಸಬೇಕಾಯಿತು.

ಇತ್ತ ಮಾದಿ, ನಸುಕು ಹರಿಯುವ ಹೊತ್ತಿಗೆ ಗಂಡು ಮಗುವೊಂದನ್ನು ಹೆತ್ತಿದ್ದಳು. ಮರುದಿನವೂ ಗಂಡ ಬಾರದಿರುವದನ್ನು ಕಂಡು ಆಕೆ ಹೆದರಿದಳು. ಆ ದಿನ ಸಂಜೆಯ ಹೊತ್ತಿಗೆ "ಸಿಂಗನಿಗೆ ಆರು ತಿಂಗಳ ಜೈಲು," ಎಂಬ ವರ್ತಮಾನ ಊರಲ್ಲಿ ಹರಡಿತು; ಮಾದಿಯ ಹೃದಯವನ್ನು ಸೀಳಿತು. ತುಂಬ ಅತ್ತಳು. ದಿನದಿನವೂ ಕಣ್ಣೀರಕೋಡಿ ಹರಿಯಿತು. ಅದೇ ಚಿಂತೆಯಲ್ಲಿಯೇ ಕೊರಗಿ, ಸೊರಗಿ ಕೃಶಳಾದಳು; ಅಲ್ಲದೆ ಹಸಿ ಬಾಣಂತಿಯಾದ ಆಕೆಗೆ ಅವಶ್ಯವಾದ ಪಥ್ಯ-ಪಾನ, ಊಟ-ಉಪಚಾರ ಸರಿಯಾಗಿ ಆಗದೆ ಥಂಡಿಯ ನಂಜೇರಿ, ಹಡೆದ ಹತ್ತು ದಿನಗಳಲ್ಲಿಯೇ ಮಾದಿ ಕಣ್ಣುಮುಚ್ಚಿದಳು. ನಲವತ್ತು ಮೈಲು ದೂರದಲ್ಲಿದ್ದ ಮಾದಿಯ ತಂದೆಗೆ ಈ ಸುದ್ದಿ ಗೊತ್ತಾಗಿ ಕೂಡಲೇ ಬಂದು ಆ ಮಕ್ಕಳನ್ನು ಸಂಗಡ ಕರೆದುಕೊಂಡು ಹೋದ.

ಸಿಂಗ ಜೇಲಿನಿಂದ ಬಿಡುಗಡೆ ಹೊಂದಿದವನೇ ನೆಟ್ಟಗೆ ಮನೆಗೆ ಬಂದ. ಒಳಗೆ ಕಾಲಿಟ್ಟ. ಮನೆ ಮಸಣವಾಗಿತ್ತು. ಕಣ್ಣಗಲಿಸಿ, ಸುತ್ತಲೂ ಒಮ್ಮೆ ನಿರೀಕ್ಷಿಸಿದ. ಒಡಕು ಗಡಿಗೆ, ಮಡಿಕೆಗಳನ್ನುಳಿದು ಇನ್ನೇನೂ ಇರಲಿಲ್ಲ ಅಲ್ಲಿ. ಸಿಂಗನ ಕಣ್ಣಿನಲ್ಲಿ ನೀರು ತುಂಬಿತು. ನೂರಾರು ಮೈಲು ದೂರದಲ್ಲಿದ್ದ ಸಿಂಗನಿಗೆ ಮನೆಯ ಸುದ್ದಿಯ ಸುಳಿವು ಕೂಡ ಇರಲಿಲ್ಲ. ಮಾಬ್ಲಯ್ಯನವರ ಮನೆಗೆ ಹೋದಾಗ ಎಲ್ಲವೂ ತಿಳಿಯಿತು. ದುಃಖವನ್ನು ತಡೆಯಲಾಗಲಿಲ್ಲ ಸಿಂಗನಿಗೆ. ಮಾಬ್ಲಯ್ಯನವರ ಮುಂದೆ, ತಾಯಿಯ ತೊಡೆಯ ಮೇಲಿದ್ದ ಮಗು ಅಳುವಂತೆ ದೊಡ್ಡ ಧ್ವನಿ ತೆಗೆದು ಅತ್ತುಬಿಟ್ಟ.

× × ×

ಸಿಂಗನ ಎರಡನೇ ಹೆಂಡತಿ ಸಿಂಗಿ ಈಗ ತುಂಬು ಬಸುರಿ. ಸಿಂಗ, ಸಿಂಗಿಯ ಕೈಹಿಡಿದು ಇದೀಗ ವರುಷವೊಂದು ಕಳೆದಿದೆ. ಮಾಬ್ಲಯ್ಯನವರೇ ಮುಂದಾಗಿ ಸಿಂಗನಿಗೆ ಮರುಮದುವೆ ಮಾಡಿಸಿದರು. ಸಿಂಗ ಈಗಲೂ ಮಾಬ್ಲಯ್ಯನವರ ಮನೆಯ ಕೆಲಸದಾಳಾಗಿ ದುಡಿದು ತನ್ನ ಆರೇಳು ಮಕ್ಕಳ ಬಡ ಸಂಸಾರವನ್ನು ಪೋಷಿಸುತ್ತಿದ್ದಾನೆ. ಬಡ ಜೀವನವಾದರೂ ಸುಖಮಯವಾಗಿ ಸಾಗಿದೆ.

ಸಿಂಗ ಮಾತ್ರ ಈಗೀಗ ಬಹಳ ಬದಲಾಯಿಸಿ ಬಿಟ್ಟಿದ್ದಾನೆ. ದಿನೇ ದಿನೇ ಸೊರಗುತ್ತಿದ್ದಾನೆ. ಅವನ ಮೋರೆ ಯಾವಾಗಲೂ ಚಿಂತೆಯಲ್ಲಿ ಎದ್ದಿ ತೆಗೆದಂತಿರುತ್ತದೆ. ಆ ಕಾಂತಿಪೂರ್ಣ, ತುಂಬುಗಲ್ಲಗಳ ಅಗಲುಮುಖ, ಈಗ ಬಾಡಿ, ಗಲ್ಲವಿಳಿದು ಕಾಂತಿಹೀನವಾಗಿ ಬಿಟ್ಟಿದೆ. ಅಂದು "ರೇಶನ್" ಮತ್ತೆ ಸುರುವಾಗುವದೆಂಬ ಸುದ್ದಿ ಕೇಳಿದಂದಿನಿಂದ "ತಾನು ಇನ್ನು ಮುಂದೆ ಜೀವನ ಮಾಡುವದೆಂತು? ಸಿಂಗಿಯ ಬಾಣಂತನ, ಮಲ್ಲಿಯ ಮದುವೆ, ಇವೆಲ್ಲ ಸಾಗುವ ಬಗೆ ಹೇಗೆ?" ಎನ್ನುವ ಯೋಚನೆಯೊಂದೇ ಅವನನ್ನು ಹಗಲಿರುಳೂ ತಿನ್ನತೊಡಗಿದೆ; ದೂರದಲ್ಲಿ ಆ [illegible] ಎಂದು ಬಾಯಿತೆರೆದು ನಿಂತಿರುವ "ರೇಶನ್ ರಾಕ್ಷಸ"ನ ದವಡೆಯಲ್ಲಿ ಸಿಕ್ಕು ಎಲ್ಲಿ ನುಚ್ಚುನೂರಾಗುವೆನೋ! ಎಂಬ ಭೀತಿ ಆಗಾಗ ಅವನನ್ನು ಬೆದರಿಸುತ್ತಿದೆ. ನಿತ್ಯವೂ ರಾತ್ರಿ ಮಲಗಿದಾಕ್ಷಣ ಸಿಂಗನಿಗೆ ಹಿಂದಿನ ರೇಶನ್ ಕಾಲದಲ್ಲಿ ತಾನನುಭವಿಸಿದ ಆ ದುರಂತಚಿತ್ರ ಕಣ್ಣೆದುರು ಕಟ್ಟುತ್ತದೆ. ಮೈ ಬೆವರುತ್ತದೆ. ಅದೇ ಚಿಂತೆಯಲ್ಲಿ ಕತ್ತಲು ಕರಗಿ ಬೆಳಕು ಹರಿಯುತ್ತದೆ.

ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.

Reg. No. B. 3148

LICENCE No. 3
Licenced to Post without Prepayment

KARMAVEER

ಸ್ವಭಾವ ಚಿತ್ರ

ನಮ್ಮ ಭಟ್ರು

[ಕ್ಯೆಂತಜೆ ಬರೆದುದು]

ನಮ್ಮ ಭಟ್ರು ದೊಡ್ಡ ಆಫೀಸರು. ಎಲ್ಲರಿಂದಲೂ ಒಳ್ಳೆಯ ಕೆಲಸಗಾರರೆಂದು ಹೇಳಿಸಿಕೊಂಡವರು. ಬೇರೆಯವರಲ್ಲಿ ಐವತ್ತು ಫೈಲುಗಳು ನೋಡಲು ಬಾಕಿ ಇದ್ದರೂ ಬೇರೆಯವರು ಕೆಲಸ ಮುಗಿಸಲು ರಾತ್ರಿ ಎಂಟು ಘಂಟೆಯ ತನಕ ಕಛೇರಿಯಲ್ಲಿ ಒದ್ದಾಡಬೇಕಿದ್ದರೂ ಇವನ ಕೆಲಸವೆಲ್ಲ ನಾಲ್ಕು ಘಂಟೆಗೇ ಕ್ಲೋಸು' ಅದೂ ಸರಿಯಾಗಿ, ಚೊಕ್ಕನಾಗಿ. ಅವನಿಗೆ ಅದೊಂದು ಜಾಡ್ಯ ಎಲ್ಲಿಂದ ಬಂತೋ ತಿಳಿಯದು. ಆಫೀಸಿನಿಂದ ಬಿಟ್ಟೇಳುವಾಗಲೆ ಅವನಿಗೆ ತೂಕಡಿಕೆ. ಐದು ಘಂಟೆಗೆ ಮನೆಗೆ ಬಂದವನೆ ಇಲ್ಲವೂ ನಿದ್ದೆಗೆ ಸುರುಮಾಡುತ್ತಾನೆ. ಊಟಕ್ಕೆ ಮಧ್ಯದಿ ಎಬ್ಬಿಸುವ ತನಕವೂ ನಿದ್ದೆ. ಊಟ ಮಾಡಿದ ಕೂಡಲೆ ಕೈ ತೊಳೆಯಲೂ ಸರಿಯಾಗಿ ಸಮಯವಿಲ್ಲ. ಪುನಃ ಕಣ್ಣು ಮುಚ್ಚಿಕೊಳ್ಳುತ್ತಾನೆ. ಬಳಿಕ ಬೆಳಿಗ್ಗೆ ಹತ್ತೂವರೆ ತನಕ ನಿದ್ದೆ. ಆ ಮೇಲೆ ಅರ್ಧ ಘಂಟೆಯಲ್ಲಿ ಸ್ನಾನ, ಊಟ, ಆಫೀಸಿಗೆ ಹೋಗುವದು ಎಲ್ಲವೂ ಮುಗಿಯಬೇಕು. ಹೇಗೆ ಮುಗಿಸುತ್ತಾನೊ ಅವನಿಗೇ ಗೊತ್ತು. ಹನ್ನೊಂದು ಹೊಡೆಯುವಾಗ ಆಫೀಸಿನಲ್ಲಿ ಭಟ್ರು ಹಾಜರಿ. ಅವನು ಕೆಲಸಕ್ಕೆ ಹೋಗುವ ಭರ ನೋಡಬೇಕು. ಎದುರಿಗೆ ಯಾವನಾದರೂ ಸಿಕ್ಕಿದರೆ ನೂರು ಗಜ ಅತ್ತ ಉರುಳಿ ಬೀಳಬೇಕು. ನನಗೆ ಯಾವಾಗಲೂ ಹೆದರಿಕೆ. ಅವನು ನಡೆಯುವಾಗ ಎಲ್ಲಿ ಒಮ್ಮೆ ಆರು ಉಪ್ಪರಿಗೆಯ ಮಲ್ಲಾರಾಮ ಜವಳಿ ವ್ಯಾಪಾರಿಯ ಅಂಗಡಿ ಅದುರಿ ಕುಸಿದು ಬೀಳುತ್ತದೋ ಎಂದು. ಕೆಲವು ದಿನಗಳ ಹಿಂದೆ "ಒಬ್ಸರ್ವೇಟರಿ"ಯವರು ಭೂಕಂಪವಾಗಿದೆ ಎಂದು ಪ್ರಕಟಿಸಿದರು. ಬಹುಶಃ ನಮ್ಮ ಭಟ್ರು "ನಡೆಯುವ ಮಹತ್ವ"ಕ್ಕೆ ಇರಬೇಕೆಂದು ನನ್ನ ನಂಬಿಗೆ. ಏನಾದರೂ ಸಮುಗಾರ ಸಂಜಯ್ಯನಿಗೆ ಲಾಭ ಎಷ್ಟು. ಎಷ್ಟು ಗಟ್ಟಿಯ, ಯಾವ ಮೋಚಿನ ತೂ ತೆಗೆದುಕೊಂಡರೂ ಅದು ಹದಿನೈದು ದಿನಗಳಲ್ಲಿ ಹುಡಿ. ಕೆಲವು ಸಮಯದ ಹಿಂದೆ ಅಮರ ಕಂಪನಿಯವರ ಚಿತ್ರಸಹಿತ ಹಾಕಿದ "ಇದು ಹೀಗೆ ನಡೆದರೂ ಸವೆಯುವುದಿಲ್ಲ" ಎಂಬ ಶೂ ವಿನ "ಎಡ್ವರ್ಟೈಸ್‌ಮೆಂಟ್" ನೋಡಿವೆ. ಚಿತ್ರ ಯಾರದೆಂದು ಮಾಡಿದ್ದೀರಿ? ನಮ್ಮ ಭಟ್ರದು!

ನಮ್ಮ ಗೆಳೆಯನು ಎಂದೆಂದಿಗೂ ಕೊಳೆ ಬಟ್ಟೆ ತಪ್ಪಿ-ತಪ್ಪಿಯಾದರೂ ಧರಿಸಿದವನಲ್ಲ. ಆದರೆ ಈ ಕುಂಭಕರ್ಣನಿಗೆ ಬಟ್ಟೆಯನ್ನು ಮಡಿಗೆ ಕೊಡಲು ಬಿಡುವೆಲ್ಲಿ ಸಿಗಬೇಕು? ಅಗಸನು ಬಂದರೂ "ಏನಿಲ್ಲಯ್ಯಾ" ಎಂದು ಅರೆ ನಿದ್ದೆಯಲ್ಲಿ ಕಳುಹಿಸಿಬಿಡುತ್ತಾನೆ. ಬಟ್ಟೆ ಎಲ್ಲ ಮುಗಿದುಹೋಯಿತು. ಎಂದು ಅವನಿಗೆ ನೆನಪಾಗುವದು ಬಟ್ಟೆಯೆಲ್ಲ ಮಾಸಿ ಹೋದ ಮೇಲೆ. ಆಗ ದಡಬಡಿಸಿ ಮೊದಲೆ ಒಂದಾಣೆಯಲ್ಲಿ ಆಗುತ್ತಿದ್ದ ಬಟ್ಟೆಯನ್ನು ಎಂಟಾಣೆ ಕೊಟ್ಟು "ಅರ್ಜೆಂಟ್" ವಾಶ್, ಮಾಡಿಸುತ್ತಾನೆ! ಇದು ಅವನ ಮರುಳತನ-ಮರುಳುತನವಲ್ಲ, ಮರುಳುತನ ಕೆಲವು ಕಾಲ ಮಾಡಿದರೆ ಅದು ಕಳೆಯನ್ನು ಕಳೆದುಕೊಂಡು ಅಭ್ಯಾಸವೆನಿಸುವುದಿಲ್ಲವೆ? ಹಾಗೆಯೇ ಅಭ್ಯಾಸ.

ಆದರೆ ಆಸಾಮಿ ಚೆನ್ನಾಗಿ ಓದಿದ್ದಾನೆ. ಅವನ ನಿದ್ದೆಯ ಮಧ್ಯ ಇಷ್ಟೆಲ್ಲ ಹೇಗೆ ಓದಿರುವನು ಎಂದು ನನಗೆ ಬಹಳ ಆಶ್ಚರ್ಯ. ಕನ್ನಡದ ಹಳೆಯ ಗ್ರಂಥಗಳಾದ-ರನ್ನ, ಪಂಪ, ಪೊನ್ನ, ಜನ್ನ ಯಾರು ಯಾರೋ ಇದ್ದಾರಲ್ಲ ಅವರು ಬರೆದ ಗ್ರಂಥಗಳೆಲ್ಲ ಅವನಿಗೆ ಕೈಯಲ್ಲಿದ್ದ ನೆಲ್ಲಿಕಾಯಿ ಮಾತ್ರವಲ್ಲ, ಬಾಯಿಗೆ ಹಾಕಿ ಜಗಿದು ಜಗಿದು ತಿಂದು ಸಿಹಿ ನೀರು ಕುಡಿದ ನೆಲ್ಲಿಕಾಯಿ. ಕುವೆಂಪು ನವಿಲಾಗಿ ಕುಣಿಕುಣಿದು, ಭೀತನಾಗಿ, ನಡುಗಿ ಮಾಡಿದ ಕೇಶಿರಾಜನ ಶಬ್ದಮಣಿದರ್ಪಣವನ್ನು ಅವನು ಕಡುಗಿ, ಕದಡಿ ಮುಷ್ಟಿಯೊಳಗೆ ಕೈ ಬೆರಳು ಕುಣಿಸಿ ಬಾಯಿಪಾಠ ಬರುವಂತೆ ಮಾಡಿಕೊಂಡ ಮಹಾ ಮೇಧಾವಿ. ಬೇಂದ್ರೆ ಮೊದಲಾದ ಹೊಸ ಲೇಖಕರ ಗ್ರಂಥರಾಶಿಯನ್ನು ಓದಿ ತಲೆ ತೂಗಿದ್ದಾನೆ. [ಭಾರ ಎಷ್ಟೆಂದು!] ಒಮ್ಮೊಮ್ಮೆ ಅನೇಕ ಬಂಗಲೆ...ಗಳಾದರೂ ಅತಿ ಉಪ... ಮತ್ತು ಕಿಸ್ಸಾ ಬೇಕೆಂದು ಪರರ ಪ್ರಕಾಶನರಿಂದ ದೀರ್ಘವಾದ, ಗಂಭೀರ ... ಹಿಂದೆ ಆ ಸಾವಿರ ರೂ. ಆದರೆ ದಸರಾ ಸಂಚಿಕೆನಿಂದ ಲೇಖನ ಬರೆಯುವಾಗ ಸಂಪಾದಕರು ಹಿಂದು ಮುಂದೆ ನೋಡಿಕೊಂಡು ಅವನ ಬಳಿಗೆ ಹೋಗಲಿ. ಅವನಿಗೆ ಚಿಕ್ಕ ಲೇಖನ ಬರೆದು ಗೊತ್ತೇ ಇಲ್ಲ. ಇಪ್ಪತ್ತು ಪುಟಗಳಿಂದ ಕಮ್ಮಿಯ ಲೇಖನವು ಅದೊಂದು ಲೇಖನವೇ ಎಂದು ಅವನ ಪ್ರಶ್ನೆ! ಪತ್ರಿಕೆಯವರಿಗೆ, ಜಾಹೀರಾತು ಹಾಕಲು, ಸಿನೆಮಾ ತಾರೆಗಳ ಚಿತ್ರಗಳನ್ನು ಮುದ್ರಿಸಲು, ಗಾಂಧಿ-ನೆಹರು ಫೋಟೋಗಳಿಂದ ಪತ್ರಿಕೆಯನ್ನು ಅಲಂಕರಿಸಲು, ಸ್ಥಳವೆ ಸಾಕಾಗದೆ ಹೋದೀತು! ಅವನ ಲೇಖನಕ್ಕೆ ಕತ್ತರಿಯ ಪ್ರಯೋಗ ಮಾಡಿದರಂತೂ ಮುಗಿಯಿತು; ಅವನ ತೀಕ್ಷ್ಣ ನಾಲಗೆಯಿಂದ ಹತ್ತು ಮಂದಿ ಚಂದಾದಾರರನ್ನು ಪತ್ರಿಕೆಯವರು ಕಳಕೊಂಡಂತೆಯೆ.

ಅವನ ಗುಣವಿಶೇಷಗಳು ತಿಳಿಯದಿದ್ದಲ್ಲಿ ಅವನ ಕೆಲವು ಮಾತಿನಿಂದ ನೊಂದು ಬಳಿಕ ಅವನ ಮನೆಯ ಮೆಟ್ಟಿಕಲ್ಲನ್ನು ಹಲವು ಮಂದಿ ಗೆಳೆಯರು ಪುನಃ ಹತ್ತರು. ಅವನು ನಿದ್ದೆಯ ಗುಂಗಿನಲ್ಲಿರುವಾಗ ಮಿತ್ರರು ಬಂದರೆ ನಿನ್ನನ್ನು ಯಾರು ಬರಹೇಳಿದರು? ನಡಿ "ಗೆಟ್ ಔಟ್" ಎಂದು ಅವನು ಎನಿತೊ ಬಾರಿ ಹೇಳಿದವನು. ತಿಂದಿ ಕೊಟ್ಟನೆಂದು ಬೇಗ ಬೇಗ ತಿಂದರೆ "ತಟ್ಟೆ ನೆಕ್ಕಲಿಕ್ಕೂ ಹೇಸಲಿಕ್ಕಿಲ್ಲ" ಎಂದು ತಲೆಗೆ ಹೊಡೆದಂತೆ ಹೇಳಿದುದೂ ಇದೆ. ಯಾರಾದರೂ ತಮ್ಮ ಪ್ರಣಯದಲ್ಲಿ ಭಗ್ನರಾದವರಿದ್ದರೆ "ನಿನಗೆ ಬಹಳ ಸೊಕ್ಕು-ಹಾಗೆಯೇ ಆಗಬೇಕು" ಎಂದು ಒರಟು ಬುದ್ಧಿ ತೋರಿದ ಉದಾಹರಣೆಗಳು ಇಲ್ಲದಿಲ್ಲ. ಆದರೆ ಅವನ ಆತ್ಮದಲ್ಲಿ ಹಾಗೇನೂ ಇಲ್ಲ. ಗೆಳೆಯನು ಕಷ್ಟದಲ್ಲಿದ್ದರೆ ಪರಿತಾಪಪಡುವ ವ್ಯಕ್ತಿಯೆಂದು ಎಲ್ಲರಿಗೂ ತಿಳಿದ ಸಂಗತಿ. ಆದುದರಿಂದ ಅವನು ಏನೆಂದರೂ ಸುಮ್ಮನೆ ಒಮ್ಮೆ ನೋವುವಾದರೂ ಅದನ್ನು ಮರೆದು ಅವನ ಗೆಳೆತನವನ್ನು ಯಾರೂ ಬಿಡಲಾಲರು!

ಅವನ ಹಸಿವೆ ಹೆಸರುವಾಸಿಯಾದುದು. ಹಗಲಿರುಳು, ಎಡೆಬಿಡದೆ ಒಂದು ನಿಮಿಷವೂ ವ್ಯರ್ಥವಾಗಿ ಹೋಗದಂತೆ ಗೊರಕೆ ಹೊಡೆಯುವ ಈ ಹೆಬ್ಬಾವಿಗೆ ಏನು ಹಸಿವೆಯೋ. ಒಂದು ಬಾರಿ ಅವನ ಹೆಂಡತಿ ತವರಿಗೆ ಹೋಗಿದ್ದಳು. ಒಂದೆರಡು ದಿನ ಭಟ್ಟ ಹೋಟಲಿನಲ್ಲಿ ನಾಲ್ಕು ಔನ್ಸು ಎಂದು ಕೊಡುವ ಎರಡು ಔನ್ಸು ಅನ್ನ ಉಂಡು ಕಂಗಾಲಾದ. ಅದಕ್ಕೆ ಸರಿಯಾಗಿ ಕೆಲಸದ ಮೇಲೆ ಅವನ ಗೆಳೆಯ-ಅವನ ಹೆಸರು ನನಗೆ ತಿಳಿಯದು, ಅವನನ್ನು ಎಲ್ಲರೂ ಕರೆಯುವುದು "ಜಾರ್ಜಟೌನೆಂದು" ಬಂದ. ಇಬ್ಬರೂ ಒಂದೇ ತೆರನಾದವರು. ಒಂದೂವರೆ ಸೇರಕ್ಕಿ ಬೇಯಿಸಿದರೆ ಎಲೆ ಬಿಟ್ಟು ಏಳಲು ಮನಸ್ಸು ಮಾಡುವ ಮನಸ್ಸುಳ್ಳ ಜನರು. ಹಾಗೆ ಉಂಡ ಮೇಲೂ ಎಂಟು ಡಜನು ಬಾಳೆಯ ಹಣ್ಣಿಗೂ ಹತ್ತು ಕಪ್ಪು ಕಾಫಿಗೂ ಅವರಲ್ಲಿ ಸುಲಭದಲ್ಲಿ ಎಡೆಯಿದೆ. ನನಗೆ ಕಾಣುತ್ತಿದೆ, ಅವರನ್ನು "ಎಕ್ಸರೇ" ತೆಗೆಯಿಸಿದ್ದರೆ ಅವರ ಎದೆಯಲ್ಲೊ, ತೊಡೆಯಲ್ಲೊ, ಭುಜದಲ್ಲೊ-ಇನ್ನೆರಡು ಹೊಟ್ಟೆಗಳಾದರೂ ಕಾಣಸಿಗಬಹುದೆಂದು! ಹೊಟ್ಟೆ "ಬೇಲೂನಿ"ನಂತೆ ಉಬ್ಬಿಕೊಂಡಿರದಿದ್ದರೂ, ಇವರು ಹೀಗೆ ತಿಂದರೆ ಅದೆಲ್ಲಿ ತಂಗಬೇಕು.! ಜಾರ್ಜಟೌನ್ ಬಂದವನೆಂದನಲ್ಲ- ಬರುವಾಗ ಅವನು ಒಂದು ಡಬ್ಬಿ ತುಂಬವೆ ಉಂಡೆ ತಂದಿದ್ದ. ಐವತ್ತು ಮೂರು ರವೆ ಉಂಡೆ. ಅವನಿಗೆ "ಹಸಿವೆ"ಯ ತಿಳುವಳಿಕೆ ಇಲ್ಲದಿಲ್ಲ. ಆದುದರಿಂದ ಅದನ್ನು ಭಟ್ಟನಿಗೆ ತೋರಿಸಲೇ ಇಲ್ಲ. ಆಫೀಸಿಗೆ ಭಟ್ಟ ಹೋದಬಳಿಕ ಅದನ್ನು ಬರಿದು ಮಾಡಬೇಕೆಂದು ಯೋಚಿಸಿದ್ದ. ಆದರೆ ಭಟ್ಟನಿಗೆ, ಜಾರ್ಜಟೌನ್ ಸೆಂಟ್ರಲ್ ಸ್ಟೇಶನಿನಲ್ಲಿ ಇಳಿದಾಗಲೆ ಅದರ ಪರಿಮಳ ಬಂದಿರಬೇಕು. ಜಾರ್ಜಟೌನ್ ನಾಲಿಗೆ ಬಿಗಿ ಹಿಡಿದುಕೊಂಡು ನಿದ್ದೆ ಹೋದ ಬಳಿಕ ಭಟ್ಟ ಐವತ್ತೆರಡೂವರೆ ರವೆ ಉಂಡೆ ತಿಂದು ಉಳಿದ ಅರ್ಧವನ್ನು ಡಬ್ಬಿಯಲ್ಲಿಟ್ಟು, ಅರಿಯದವನಂತೆ ಸರಿಯಾಗಿ ನಿದ್ದೆ ಹೋದ. ಈ ಹೋಟೆಲು ಊಟ ಪೂರೈಸದೆಂದು ಇಬ್ಬರೂ ಬೆಳಿಗ್ಗೆ ಎದ್ದೊಡನೆ ಒಂದೂವರೆ ಸೇರಕ್ಕಿಯ ಸಳ-ಪಾಕ ಮಾಡಿ ತಿಂದು ಮುಗಿಸಿದರು. ಭಟ್ಟ ಆಫೀಸಿಗೆ ಹೊರಟು ಐದು ಘಂಟೆಗೆ ಬರುತ್ತೇನೆಂದು ಹೊಟ್ಟಲೀಡು ಹೋದ. ಸಮಯ ಕಾಯುತ್ತಿದ್ದ ಜಾರ್ಜಟೌನ್ ಮೆಲ್ಲಗೆ ಡಬ್ಬಿ ತೆಗೆದು ನೋಡುತ್ತಾನೆ. ಅವನ ಮುಖ ಪೆಚ್ಚಾಯಿತು! ಹಿಂದಿನಿಂದ "ಹೆಗ್ಗಣ ತಿಂದಿರಬೇಕು" ಎಂದು ದೊಡ್ಡ ನಗೆ ಕೇಳಿ ಬಂತು. ಭಟ್ಟ ಹೋಗಿಯೇ ಇರಲಿಲ್ಲ. ಈ ಕಳ್ಳ ಹೀಗೆ ಮಾಡುತ್ತಾನೆಂದು ಯೋಚಿಸಿದ್ದ ಅವನು ಹಿಂದುರುಗಿ ಬಂದಿದ್ದ. ಜಾರ್ಜಟೌನ್ ಹೊಟ್ಟೆ ತುಂಬದಿದ್ದರೂ "ಅರೆ ಹೆಗ್ಗಣ ಅರ್ಧ ಅದರೂ ಇಟ್ಟಿದ್ದಿಯಲ್ಲ" ಎಂದು ಹೊಟ್ಟೆ ತುಂಬ ನಕ್ಕ!

[ಸಂಪೂರ್ಣ ಹಕ್ಕುಗಳು ಲೇಖಕರವು]

ಮತ್ತೆ ರೇಶನ್ ?

(೨ನೇ ಪುಟದಿಂದ)

ಸಿಟ್ಟು ನೆತ್ತಿಗೇರಿತು. ತನ್ನ ಕಬ್ಬಿಣದಂತಹ ಕೈ ಎತ್ತಿ, ಪೋಲೀಸನೊಬ್ಬನ ಮೋರೆಯ ಮೇಲೆ ಜೋರಾಗಿ ಬೀಸಿಬಿಟ್ಟ. ಪೋಲೀಸ ದೊಪ್ಪನೆ ನೆಲಕ್ಕೆ ಬಿದ್ದ; ಎಚ್ಚರತಪ್ಪಿತು.

ಬೆಳಗಾಗುವದರೊಳಗೆ ನಿಂಗ ಕಚೇರಿಯ ಕೋಣೆಯೊಂದರಲ್ಲಿ ಸರಳುಗಳನ್ನೆಣಿಸಬೇಕಾಯಿತು.

ಇತ್ತ ಮಾದಿ, ನಸುಕು ಹರಿಯುವ ಹೊತ್ತಿಗೆ ಗಂಡು ಮಗುವೊಂದನ್ನು ಹೆತ್ತಿದ್ದಳು. ಮರುದಿನವೂ ಗಂಡ ಬಾರದಿರುವದನ್ನು ಕಂಡು ಆಕೆ ಹೆದರಿದಳು. ಆ ದಿನ ಸಂಜೆಯ ಹೊತ್ತಿಗೆ "ನಿಂಗನಿಗೆ ಆರು ತಿಂಗಳ ಜೈಲು," ಎಂಬ ವರ್ತಮಾನ ಊರಲ್ಲಿ ಹರಡಿತು; ಮಾದಿಯ ಹೃದಯವನ್ನು ಸೀಳಿತು. ತುಂಬ ಅತ್ತಳು. ದಿನದಿನವೂ ಕಣ್ಣೀರಕೋಡಿ ಹರಿಯಿತು. ಅದೇ ಚಿಂತೆಯಲ್ಲಿಯೇ ಕೊರಗಿ, ಸೊರಗಿ ಕೃಶಳಾದಳು; ಅಲ್ಲದೆ ಹಸಿ ಬಾಣಂತಿಯಾದ ಆಕೆಗೆ ಅವಶ್ಯವಾದ ಪಥ್ಯ-ಪಾನ, ಊಟ-ಉಪಚಾರ ಸರಿಯಾಗಿ ಆಗದೆ ಥಂಡಿಯ ನಂಜೇರಿ, ಹಡೆದ ಹತ್ತು ದಿನಗಳಲ್ಲಿಯೇ ಮಾದಿ ಕಣ್ಣುಮುಚ್ಚಿದಳು. ನಲವತ್ತು ಮೈಲು ದೂರದಲ್ಲಿದ್ದ ಮಾದಿಯ ತಂದೆಗೆ ಈ ಸುದ್ದಿ ಗೊತ್ತಾಗಿ ಕೂಡಲೇ ಬಂದು ಆ ಮಕ್ಕಳನ್ನು ಸಂಗಡ ಕರೆದುಕೊಂಡು ಹೋದ.

ನಿಂಗ ಜೇಲಿನಿಂದ ಬಿಡುಗಡೆ ಹೊಂದಿದವನೇ ನೆಟ್ಟಗೆ ಮನೆಗೆ ಬಂದ. ಒಳಗೆ ಕಾಲಿಟ್ಟ. ಮನೆ ಮಸಣವಾಗಿತ್ತು. ಕಣ್ಣಗಲಿಸಿ, ಸುತ್ತಲೂ ಒಮ್ಮೆ ನಿರೀಕ್ಷಿಸಿದ- ಒಡಕು ಗಡಿಗೆ, ಮಡಿಕೆಗಳನ್ನುಳಿದು ಇನ್ನೇನೂ ಇರಲಿಲ್ಲ ಅಲ್ಲಿ. ನಿಂಗನ ಕಣ್ಣಿನಲ್ಲಿ ನೀರು ತುಂಬಿತು. ನೂರಾರು ಮೈಲು ದೂರದಲ್ಲಿದ್ದ ನಿಂಗನಿಗೆ ಮನೆಯ ಸುದ್ದಿಯ ಸುಳಿವು ಕೂಡ ಇರಲಿಲ್ಲ. ಮಾಬ್ಲಯ್ಯನವರ ಮನೆಗೆ ಹೋದಾಗ ಎಲ್ಲವೂ ತಿಳಿಯಿತು. ದುಃಖವನ್ನು ತಡೆಯಲಾಗಲಿಲ್ಲ ನಿಂಗನಿಗೆ. ಮಾಬ್ಲಯ್ಯನವರ ಮುಂದೆ, ತಾಯಿಯ ತೊಡೆಯ ಮೇಲಿದ್ದ ಮಗು ಅಳುವಂತೆ ದೊಡ್ಡ ಧ್ವನಿ ತೆಗೆದು ಅತ್ತುಬಿಟ್ಟ.

× × ×

ನಿಂಗನ ಎರಡನೇ ಹೆಂಡತಿ ನಿಂಗಿ ಈಗ ತುಂಬು ಬಸುರಿ. ನಿಂಗ, ನಿಂಗಿಯ ಕೈಹಿಡಿದು ಇದೀಗ ವರುಷವೊಂದು ಕಳೆದಿದೆ. ಮಾಬ್ಲಯ್ಯನವರೇ ಮುಂದಾಗಿ ನಿಂಗನಿಗೆ ಮರುಮದುವೆ ಮಾಡಿಸಿದರು. ನಿಂಗ ಈಗಲೂ ಮಾಬ್ಲಯ್ಯನವರ ಮನೆಯ ಕೆಲಸದಾಳಾಗಿ ದುಡಿದು ತನ್ನ ಆರೇಳು ಮಕ್ಕಳ ಬಡ ಸಂಸಾರವನ್ನು ಪೋಷಿಸುತ್ತಿದ್ದಾನೆ. ಬಡ ಜೀವನವಾದರೂ ಸುಖಮಯವಾಗಿ ಸಾಗಿದೆ.

ನಿಂಗ ಮಾತ್ರ ಈಗೀಗ ಬಹಳ ಬದಲಾಯಿಸಿ ಬಿಟ್ಟಿದ್ದಾನೆ. ದಿನೇ ದಿನೇ ಸೊರಗುತ್ತಿದ್ದಾನೆ. ಅವನ ಮೋರೆ ಯಾವಾಗಲೂ ಚಿಂತೆಯಲ್ಲಿ ಎದ್ದಿ ತೆಗೆದಂತಿರುತ್ತದೆ. ಆ ಕಾಂತಿಪೂರ್ಣ, ತುಂಬುಗಲ್ಲಗಳ ಅಗಲುಮುಖ, ಈಗ ಬಾಡಿ, ಗಲ್ಲನಿಳಿದು ಕಾಂತಿಹೀನವಾಗಿ ಬಿಟ್ಟಿದೆ. ಅಂದು "ರೇಶನ್" ಮತ್ತೆ ಸುರುವಾಗುವದೆಂಬ ಸುದ್ದಿ ಕೇಳಿದಂದಿನಿಂದ "ತಾನು ಇನ್ನು ಮುಂದೆ ಜೀವನ ಮಾಡುವದೆಂತು? ನಿಂಗಿಯ ಬಾಣಂತನ, ಮಲ್ಲಿಯ ಮದುವೆ, ಇವೆಲ್ಲ ಸಾಗುವ ಬಗೆ ಹೇಗೆ?" ಎನ್ನುವ ಯೋಚನೆಯೊಂದೇ ಅವನನ್ನು ಹಗಲಿರುಳೂ ತಿನ್ನತೊಡಗಿದೆ; ದೂರದಲ್ಲಿ ಆ ೩೩ ಎಂದು ಬಾಯಿತೆರೆದು ನಿಂತಿರುವ "ರೇಶನ್ ರಾಕ್ಷಸ"ನ ದವಡೆಯಲ್ಲಿ ಸಿಕ್ಕು ಎಲ್ಲಿ ನುಚ್ಚುನೂರಾಗುವೆನೋ! ಎಂಬ ಭೀತಿ ಆಗಾಗ ಅವನನ್ನು ಬೆದರಿಸುತ್ತಿದೆ. ನಿತ್ಯವೂ ರಾತ್ರಿ ಮಲಗಿದಾಕ್ಷಣ ನಿಂಗನಿಗೆ ಹಿಂದಿನ ರೇಶನ್ ಕಾಲದಲ್ಲಿ ತಾನನುಭವಿಸಿದ ಆ ದುರಂತಚಿತ್ರ ಕಣ್ಣೆದುರು ಕಟ್ಟುತ್ತದೆ. ಮೈ ಬೆವರುತ್ತದೆ. ಅದೇ ಚಿಂತೆಯಲ್ಲಿ ಕತ್ತಲು ಕರಗಿ ಬೆಳಕು ಹರಿಯುತ್ತದೆ.

ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.